ಶುಕ್ರವಾರ, ಜುಲೈ 14, 2023 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಚಾರ

ಮುಂಬೈನಲ್ಲಿ ನಡೆದ 'ಖತ್ರೋಂಕೆ ಖಿಲಾಡಿ' ರಿಯಾಲಿಟಿ ಷೋನ ಪ್ರಚಾರ ಕಾರ್ಯಕ್ರಮದಲ್ಲಿ ಬಾಲಿವುಡ್ ನಿರ್ದೇಶಕ ರೋಹಿತ್ ಶೆಟ್ಟಿ ಪಾಲ್ಗೊಂಡಿದ್ದರು

ಸಾಲ ಹೆಚ್ಚಲು ಈ ಹಿಂದಿನ ದುರಾಡಳಿತ ಕಾರಣ ಎಂದ ಮುಖ್ಯಮಂತ್ರಿ: ವಿರೋಧ ಪಕ್ಷದ ಸದಸ್ಯರ ಸಭಾತ್ಯಾಗ

ಬಿಜೆಪಿಯಿಂದ ರಾಜ್ಯ ದಿವಾಳಿ: ಸಿ.ಎಂ ಕಿಡಿ

ಪ್ರಜಾವಾಣಿ ವಾರ್ತೆ

ಬಿಜೆಪಿ ಸದಸ್ಯ ಆರ್. ಅಶೋಕ ಅವರು ವಿಧಾನಸಭೆಯಲ್ಲಿ ಗುರುವಾರ ಮಾತನಾಡಿದರು

ಬೆಂಗಳೂರು: ಬಿಜೆಪಿ ಸರ್ಕಾರ ರಾಜ್ಯದ ಆರ್ಥಿಕ ಸ್ಥಿತಿಯನ್ನು ಹಾಳು ಮಾಡಿದೆ. ಇವರ ಕೆಟ್ಟ ಆಡಳಿತದ ಪರಿಣಾಮ ಆರ್ಥಿಕತೆ ದಿವಾಳಿಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹರಿಹಾಯ್ದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ವಿಧಾನಸಭೆಯಲ್ಲಿ ಗುರುವಾರ ಉತ್ತರ ನೀಡಿದ ಅವರು, ರಾಜ್ಯದ ಸಾಲ ಹೆಚ್ಚಾಗಲು ಬಿಜೆಪಿಯ ಕೆಟ್ಟ ಆಡಳಿತವೇ ಕಾರಣ ಎಂದು ಕಿಡಿಕಾರಿದರು. ಮುಖ್ಯಮಂತ್ರಿಯವರ ಉತ್ತರದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು.

ಬಿಜೆಪಿ ಬಡವರ ವಿರೋಧಿ ಆದ್ದರಿಂದ ಕೇಂದ್ರ ಸರ್ಕಾರ ಹೆಚ್ಚುವರಿ 5 ಕೆ.ಜಿ ಅಕ್ಕಿಯನ್ನು ಕೊಡಲಿಲ್ಲ. ಇವರಿಗೆ ಹೊಟ್ಟೆ ಕಿಚ್ಚಾಗಿದೆ. ಕೇಂದ್ರ ಸರ್ಕಾರ ರಾಜ್ಯದಿಂದ ₹4 ಲಕ್ಷ ಕೋಟಿ ತೆರಿಗೆ ಸಂಗ್ರಹಿಸುತ್ತಿದೆ. ಆದರೆ, ₹50 ಸಾವಿರ ಕೋಟಿ ಮಾತ್ರ ಕೊಡುತ್ತಿದೆ. ರಾಜ್ಯಕ್ಕೆ ದೊಡ್ಡ ಅನ್ಯಾಯವಾಗಿದೆ ಎಂದು ಟೀಕಿಸಿದರು.

ಸಾರಿಗೆ ಸಂಸ್ಥೆಗಳ ಆದಾಯ ಹೆಚ್ಚಳ: ಶಕ್ತಿ ಯೋಜನೆ ಜಾರಿಗೆ ತಂದ ಬಳಿಕ ಸಾರಿಗೆ ಸಂಸ್ಥೆಗಳ ಆದಾಯ ಹೆಚ್ಚಳವಾಗಿದೆ. ಈ ಯೋಜನೆಯಿಂದ ರಾಜ್ಯದ ಎಲ್ಲ ಹೆಣ್ಣು ಮಕ್ಕಳು ಖುಷಿಯಾಗಿದ್ದಾರೆ. ಆದರೆ ಬಿಜೆಪಿಯವರಿಗೆ ಮಾತ್ರ ಅಸಂತೋಷವಾಗಿದೆ. ಹೀಗಾಗಿ ಹುಯಿಲೆಬ್ಬಿಸುತ್ತಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದರು.

ಮಹಿಳೆಯರು ಹೆಚ್ಚು ಓಡಾಡುವುದರಿಂದಲೇ ಆದಾಯ ಹೆಚ್ಚಾಗಿದೆ. ಇದಕ್ಕೆ ಎಷ್ಟೇ ಹಣ ಖರ್ಚಾದರೂ ಸರಿ ಕೊಡಲು ನಾವು ತಯಾರಿದ್ದೇವೆ ಎಂದರು.

ಪ್ರತಿದಿನ ಸರಾಸರಿ 49.06 ಲಕ್ಷ ಮಹಿಳೆಯರು ಪ್ರಯಾಣಿಸುತ್ತಿದ್ದಾರೆ. ಒಟ್ಟು 18 ಕೋಟಿ ಮಹಿಳೆಯರು ಈವರೆಗೆ ಪ್ರಯಾಣ ಮಾಡಿದ್ದಾರೆ. ದೇವಸ್ಥಾನಗಳು, ಸ್ನೇಹಿತರ ಮನೆ, ತವರು ಮನೆಗಳಿಗೆ ಹೋಗುತ್ತಿದ್ದಾರೆ. ಇದರಿಂದ ಇವರಿಗೆ ಹಣ ಉಳಿಯುತ್ತದೆ. ಅದನ್ನು ಬೇರೆ ಖರ್ಚುಗಳಿಗೆ ಬಳಸಬಹುದು. ಇದರಿಂದ ಆರ್ಥಿಕತೆ ಚುರುಕಾಗುತ್ತದೆ. ಇದು ಸಬಲೀಕರಣವಲ್ಲವೇ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು.

ವಿವಿಧ ಗ್ಯಾರಂಟಿಗಳಿಗೆ ಹಣ ಹೊಂದಿಸುವ ಉದ್ದೇಶದಿಂದ ಅಬಕಾರಿ, ನೋಂದಣಿ ಮುದ್ರಾಂಕ, ಮೋಟಾರು ವಾಹನಗಳ ತೆರಿಗೆ ಹೆಚ್ಚಿಸಬೇಕಾಯಿತು. ಬೇರೆ ದಾರಿ ಇಲ್ಲ. ಬಡವರು, ಕೆಳ ಮಧ್ಯಮ ವರ್ಗದವರಿಗೆ ಹೊರೆ ಆಗದಂತೆ ತೆರಿಗೆ ಹೆಚ್ಚಿಸಲಾಗಿದೆ ಎಂದು ಹೇಳಿದರು.

ಉತ್ತರ ವಿರೋಧಿಸಿ ಬಿಜೆಪಿ ಸಭಾತ್ಯಾಗ

ಬಿಪಿಎಲ್ ಕಾರ್ಡ್‌ದಾರರಿಗೆ 5 ಕೆ.ಜಿ ಅಕ್ಕಿಯಲ್ಲಿ 2 ಕೆ.ಜಿ ಕಡಿತ ಮಾಡಿ 3 ಕೆ.ಜಿ ಅಕ್ಕಿ ವಿತರಿಸುತ್ತಿರುವ ಕ್ರಮ ಹಾಗೂ ಸರ್ಕಾರದ ಉತ್ತರ ತೃಪ್ತಿದಾಯಕವಾಗಿಲ್ಲ ಎಂದು ಪ್ರತಿಪಾದಿಸಿದ ಬಿಜೆಪಿ ಸದಸ್ಯರು, ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು.

'ಮುಖ್ಯಮಂತ್ರಿಯವರ ಉತ್ತರ ತೃಪ್ತಿದಾಯಕವಾಗಿಲ್ಲ. ನಮ್ಮ ಅವಧಿಯಲ್ಲಿ ಸೇಡಿನ ರಾಜಕಾರಣ ಮಾಡಿಲ್ಲ. ನಿಮ್ಮ ಅವಧಿಯಲ್ಲಿ ಆಗಿರುವ ಭ್ರಷ್ಟಾಚಾರಗಳ ತನಿಖೆಯನ್ನು ಲೋಕಾಯುಕ್ತಕ್ಕೆ ಒಪ್ಪಿಸಿದ್ದೆವು. ನಿಮ್ಮ ಅವಧಿಯ ಭ್ರಷ್ಟಾಚಾರ ಈಗಲೂ ಜೀವಂತವಾಗಿವೆ. ತನಿಖೆ ನಡೆಸಿದರೆ ಎಲ್ಲವೂ ಹೊರಗೆ ಬರುತ್ತವೆ' ಎಂದು ಬೊಮ್ಮಾಯಿ ಹೇಳಿದರು.

'ಈ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಜನರು ಏನು ಮಾತನಾಡುತ್ತಿದ್ದಾರೆ. ಅದನ್ನೇ ನಾವು ಇಲ್ಲಿ ಮಾತನಾಡುತ್ತಿದ್ದೇವೆ. ಮುಖ್ಯಮಂತ್ರಿ ತಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರ ಆಗಿಲ್ಲ, ಬೇರೆ ಕಡೆ ಆಗಿರಲೂ ಬಹುದು ಎಂಬ ಮಾತನ್ನು ಆಡುತ್ತಿದ್ದಾರೆ' ಎಂದರು.

'ಅನ್ನಭಾಗ್ಯಕ್ಕೆ ಅಕ್ಕಿಯನ್ನು ಕೇಳಲು ಕೇಂದ್ರ ಸರ್ಕಾರದ ಜತೆ ನೇರವಾಗಿ ವ್ಯವಹರಿಸದೇ ಅಕ್ಕಿ ಸಂಗ್ರಹಿಸಿಟ್ಟುಕೊಳ್ಳುವ ಉಪ ಮ್ಯಾನೇಜರ್ ಜತೆ ಪತ್ರ ವ್ಯವಹಾರ ಮಾಡಿದ್ದೀರಿ. ಯಾರ ಜೊತೆ ವ್ಯವಹರಿಸಬೇಕು ಎಂಬ ಸಾಮಾನ್ಯ ಜ್ಞಾನವೂ ನಿಮಗಿಲ್ಲ' ಎಂದು ಲೇವಡಿ ಮಾಡಿದರು.

'ಬಿಜೆಪಿಗೆ ಹತ್ತಿರ: ಅಸ್ತಿತ್ವದ ಪ್ರಶ್ನೆ'

'ಕುಮಾರಸ್ವಾಮಿ ನೀವು ಬಿಜೆಪಿಗೆ ಹತ್ತಿರವಾಗುತ್ತಿದ್ದೀರಲ್ಲ' ಎಂದು ಸಿದ್ದರಾಮಯ್ಯ ಪ್ರಶ್ನಿಸಿದಾಗ, 'ನೀವು ಪದೇ ಪದೇ ಬಿಜೆಪಿ ಬಿ ಟೀಮ್ ಎಂದು ಆ ಕಡೆಗೇ ತಳ್ಳುತ್ತಾ ಬಂದಿರಿ. ನಮ್ಮ ಉಳಿವಿನ ಪ್ರಶ್ನೆ. ಏನೇ ಮಾಡುವುದಾದರೂ ನೇರವಾಗಿ ಹೇಳಿಯೇ ಮಾಡುತ್ತೇನೆ' ಎಂದು ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

'ನಾನು ಮುಖ್ಯಮಂತ್ರಿ ಆಗಿದ್ದಾಗ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ನನ್ನ ಜತೆ ಒಂದೂವರೆ ಗಂಟೆ ಮಾತನಾಡಿದ್ದರು. ಬಿಜೆಪಿಗೆ ಆಹ್ವಾನ ಮಾಡಿದ್ದರು. ಐದು ವರ್ಷ ಮುಂದುವರಿಯುವ ಅವಕಾಶ ನೀಡುತ್ತೇನೆ ಎಂದಿದ್ದರು. ಆದರೆ, ನಾನು ಸಮ್ಮಿಶ್ರ ಸರ್ಕಾರದ ಬದ್ಧತೆಗೆ ಕಟ್ಟುಬಿದ್ದು ನಿಮ್ಮ ಜತೆಗೆ ಮುಂದುವರಿದೆ' ಎಂದು ಕುಮಾರಸ್ವಾಮಿ ತಿಳಿಸಿದರು.

ಸುದ್ದಿ 2 ನಿಮಿಷ

ತೊಂದರೆ: ಭದ್ರತೆ ಒದಗಿಸಲು ಆಗ್ರಹ

ಬೆಂಗಳೂರು: 'ನನ್ನ ಕ್ಷೇತ್ರದ ಮಾಜಿ ಶಾಸಕರ ಬೆಂಬಲಿಗರು ತೊಂದರೆ ನೀಡುತ್ತಿದ್ದಾರೆ. ಆರೇ ತಿಂಗಳಲ್ಲಿ ಚುನಾವಣೆ ನಡೆಯುತ್ತದೆ ಎಂಬ ವದಂತಿ ಹಬ್ಬಿಸುತ್ತಿದ್ದಾರೆ. ನನಗೆ ಅಗತ್ಯ ಭದ್ರತೆ ಒದಗಿಸಿ' ಎಂದು ದೇವದುರ್ಗ ಕ್ಷೇತ್ರದ ಶಾಸಕಿ, ಜೆಡಿಎಸ್‌ನ ಕರೆಮ್ಮ ಜಿ. ನಾಯಕ್ ಗುರುವಾರ ವಿಧಾನಸಭೆಯಲ್ಲಿ ಆಗ್ರಹಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಅವರು, 'ದೇವದುರ್ಗದ ಜನರು ಸಾವಿರಾರು ಕೋಟಿ ರೂಪಾಯಿ ಅನುದಾನ ತರುತ್ತೇನೆ ಎಂದು ನನ್ನನ್ನು ಗೆಲ್ಲಿಸಿಲ್ಲ. ಬಡವಿಯಾದ ನನ್ನನ್ನು ಅವರೇ ಹಣ ನೀಡಿ ಗೆಲ್ಲಿಸಿದ್ದಾರೆ. ಶಾಂತಿಯುತ ಕ್ಷೇತ್ರವಾಗಿ ದೇವದುರ್ಗವನ್ನು ನೋಡಬೇಕು ಎಂಬುದು ಜನರ ಆಸೆ' ಎಂದರು.

'ಮದ್ಯದ ಅಕ್ರಮ ಮಾರಾಟ, ಮಟ್ಕಾ, ಇಸ್ಪೀಟು, ಮರಳಿನ ಅಕ್ರಮ ಸಾಗಣೆ ದಂಧೆ ನಡೆಯುತ್ತಿದೆ. ಅದಕ್ಕೆ ಕಡಿವಾಣ ಹಾಕುತ್ತಿದ್ದೇನೆ ಎಂದು ನನಗೆ ಬೆದರಿಕೆ ಹಾಕಲಾಗುತ್ತಿದೆ. ನನ್ನ ತಮ್ಮನ ಮಗ, 21 ವರ್ಷದ ಯುವಕನನ್ನು ರಸ್ತೆಯಲ್ಲಿ ಹಾಕಿ ಹೊಡೆದಿದ್ದಾರೆ' ಎಂದು ಹೇಳಿದರು.

'ಸದನದಲ್ಲಿ ನನ್ನ ಆಸನದಲ್ಲೇ ಅನಾಮಿಕ ವ್ಯಕ್ತಿಯೊಬ್ಬರು ಬಂದು ಕುಳಿತಿದ್ದರು. ಇದೆಲ್ಲ ಯಾಕೆ ನಡೆಯುತ್ತಿದೆ ಎಂಬ ಅನುಮಾನ ನನ್ನನ್ನು ಮತ್ತು ನನ್ನ ಕ್ಷೇತ್ರದ ಜನರನ್ನು ಕಾಡುತ್ತಿದೆ' ಎಂದು ಹೇಳಿದರು.

ಭದ್ರತೆಯ ಭರವಸೆ: ಕರೆಮ್ಮ ಅವರ ಆತಂಕಕ್ಕೆ ಪ್ರತಿಕ್ರಿಯಿಸಿದ ಸ್ಪೀಕರ್ ಯು.ಟಿ. ಖಾದರ್, 'ನಿಮಗೆ ಅಗತ್ಯ ಭದ್ರತೆ ಒದಗಿಸುವಂತೆ ಸರ್ಕಾರಕ್ಕೆ ಸೂಚಿಸುತ್ತೇನೆ. ಅನಾಮಿಕ ವ್ಯಕ್ತಿ ಬಂದಾಗ ನಿಮ್ಮ ಆಸನ ಖಾಲಿ ಇತ್ತು. ಹಾಗಾಗಿ ಅಲ್ಲಿಯೇ ಕುಳಿತ. ನೀವು ಸಮಯಕ್ಕೆ ಸರಿಯಾಗಿ ಬಂದು ಆಸನದಲ್ಲಿ ಕುಳಿತಿದ್ದರೆ ಆ ವ್ಯಕ್ತಿ ಅಲ್ಲಿ ಕೂರುತ್ತಿರಲಿಲ್ಲ' ಎಂದು ಸಮಾಧಾನಪಡಿಸಿದರು.

'ಪಿಡಿಒ ವರ್ಗಾವಣೆಗೆ ಕೌನ್ಸೆಲಿಂಗ್'

ಬೆಂಗಳೂರು: ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ (ಪಿಡಿಒ) ವರ್ಗಾವಣೆಯನ್ನು ಮುಂದಿನ ವರ್ಷದಿಂದ ಕೌನ್ಸೆಲಿಂಗ್ ಮೂಲಕ ನಡೆಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ವಿಧಾನ ಪರಿಷತ್‌ಗೆ ಹೇಳಿದರು.

ಬಿಜೆಪಿಯ ಕೋಟ ಶ್ರೀನಿವಾಸ ಪೂಜಾರಿ ಪ್ರಸ್ತಾಪಿಸಿದ ಪಂಚಾಯಿತಿ ಸಬಲೀಕರಣದ ವಿಷಯ ಕುರಿತ ಚರ್ಚೆಗೆ ಉತ್ತರಿಸಿದ ಅವರು, ರಾಜ್ಯದಲ್ಲಿ 5,341 ಪಿಡಿಒಗಳು ಇದ್ದಾರೆ. 150 ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ. ಪ್ರಸ್ತುತ ಸ್ಥಳೀಯ ಶಿಫಾರಸು, ಆಡಳಿತಾತ್ಮಕ ಕಾರಣಗಳಿಗಾಗಿ ಪ್ರತಿ ವರ್ಷ ನಿಗದಿತ ಪ್ರಮಾಣದಲ್ಲಿ ವರ್ಗಾವಣೆ ನಡೆಯುತ್ತಿದೆ. ಮುಂದಿನ ವರ್ಷದಿಂದ ಕೌನ್ಸೆಲಿಂಗ್‌ನಲ್ಲೇ ಪಿಡಿಒಗಳು ಸ್ಥಳ ಆಯ್ಕೆ ಮಾಡಿಕೊಳ್ಳಬಹುದು ಎಂದರು.

ಗ್ರಾಮ ಪಂಚಾಯಿತಿಗಳಲ್ಲಿ ನಿರೀಕ್ಷೆಯಂತೆ ತೆರಿಗೆ ಸಂಗ್ರಹ ನಡೆಯುತ್ತಿಲ್ಲ. ಸುಮಾರು ₹8 ಸಾವಿರ ಕೋಟಿ ವಸೂಲಾಗಬೇಕಿದೆ. ನೆಟ್‌ವರ್ಕ್ ಟವರ್‌ಗಳ ಬಾಕಿ ವಸೂಲಿಗೆ ಕ್ರಮ ಕೈಗೊಳ್ಳಲಾಗಿದೆ. ಪಂಚತಂತ್ರ–2 ತಂತ್ರಾಂಶದ ಮೂಲಕ ತೆರಿಗೆ ಸಂಗ್ರಹ, ಸಿಬ್ಬಂದಿ ವೇತನ ಪ್ರಕ್ರಿಯೆ ನಡೆಯುತ್ತಿದೆ. ಗ್ರಾಮ ಸಭೆಗಳು, ಕೆಡಿಪಿಯ 11 ಸಾವಿರ ಸಭೆಗಳನ್ನು ಟ್ರ್ಯಾಕ್ ಮಾಡಲಾಗಿದೆ. ಶೇ 70ರಷ್ಟು ಸಭೆಗಳು ಕೋರಂ ಕಾರಣಕ್ಕೆ ರದ್ದಾಗಿವೆ ಎಂದು ಹೇಳಿದರು.

'ವಿವಾಹ ನೋಂದಣಿ ಅಧಿಕಾರ ವಿಳಂಬ'

ಬೆಂಗಳೂರು: ಗ್ರಾಮ ಪಂಚಾಯಿತಿ ಅಧಿಕಾರಿಗೆ ವಿವಾಹ ನೋಂದಣಿ ಅಧಿಕಾರ ನೀಡಿ, ವರ್ಷದ ಹಿಂದೆಯೇ ಅಧಿಸೂಚನೆ ಹೊರಡಿಸಲಾಗಿತ್ತು. ಆದರೆ, ಒಳಾಡಳಿತ ಇಲಾಖೆ ಉಪ ನೋಂದಾಣಾಧಿಕಾರಿಗಳಿಗೆ ಹಿಂದೆ ನೀಡಿದ್ದ ಅಧಿಕಾರವನ್ನು ಮರಳಿಸಿಲ್ಲ. ಒಳಾಡಳಿತ ಇಲಾಖೆಯ ಸಹಮತ ಪಡೆಯಲು ಪ್ರಸ್ತಾವ ಸಲ್ಲಿಸಲಾಗಿದೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಅವರು ಹೇಳಿದರು.

ಆಸ್ತಿ ವಿವರ ಸಲ್ಲಿಸಿಲ್ಲ ಎಂಬ ಕಾರಣಕ್ಕೆ ಕಲಬುರಗಿ ಜಿಲ್ಲೆಯ ಅಳಂದ ತಾಲ್ಲೂಕಿನ ಮೊಗಾಕೆ ಗ್ರಾಮ ಪಂಚಾಯಿತಿ ಪರಿಶಿಷ್ಟ ಮಹಿಳೆ ಲಲಿತಾ ಬಾಯಿ ಸದಸ್ಯತ್ವವನ್ನು ಚುನಾವಣಾ ಆಯೋಗ ರದ್ದು ಮಾಡಿದೆ. ಇಂತಹ ವಿಷಯಗಳಲ್ಲಿ ಸರ್ಕಾರ ಅವರ ರಕ್ಷಣೆಗೆ ನಿಲ್ಲಬೇಕು ಎಂದು ಕೋಟ ಶ್ರೀನಿವಾಸ ಪೂಜಾರಿ ಕೋರಿದರು.

₹15 ಲಕ್ಷದ ಭರವಸೆ: ವಿಡಿಯೊ ತೋರಿಸುವಂತೆ ಬಿಜೆಪಿ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿದೇಶದಲ್ಲಿರುವ ಕಪ್ಪು ಹಣವನ್ನು ತಂದು ದೇಶದ ಪ್ರತಿಯೊಬ್ಬರ ಬ್ಯಾಂಕ್ ಖಾತೆಗೆ ₹15 ಲಕ್ಷ ಹಾಕುವುದಾಗಿ ಹೇಳಿದ್ದ ಪ್ರಧಾನಿ ನರೇಂದ್ರ ಮೋದಿ, ಒಬ್ಬರಿಗೂ ಹಣ ಹಾಕಿಲ್ಲ' ಎಂಬ ಕಾಂಗ್ರೆಸ್‌ನ ಎನ್. ಎಚ್. ಕೋನರಡ್ಡಿ ಮಾತು ವಿಧಾನಸಭೆಯಲ್ಲಿ ಗುರುವಾರ ಕೋಲಾಹಲಕ್ಕೆ ಕಾರಣವಾಯಿತು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಕೋನರಡ್ಡಿ, 'ನಮ್ಮ ಸರ್ಕಾರ ಗ್ಯಾರಂಟಿ ಅನುಷ್ಠಾನ ಮಾಡಿಲ್ಲ ಎಂದು ಟೀಕಿಸುತ್ತಿದ್ದೀರಿ. ಮೋದಿಯವರು ಕೊಟ್ಟ ಮಾತಿನಂತೆ ₹15 ಲಕ್ಷ ಕೊಟ್ಟಿದ್ದಾರಾ' ಎಂದರು.

ಆ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ, 'ದಾಖಲೆ ಇಲ್ಲದೆ ಬೋಗಸ್ ಮಾತನಾಡಬಾರದು. ಮೋದಿಯವರು ಹಾಗೆ ಹೇಳಿದ್ದರೆ ದಾಖಲೆ ಕೊಡಿ. ನಾವೇ ಹೋಗಿ ಕೇಳುತ್ತೇವೆ' ಎಂದರು.

'ಈ ವಿಚಾರದಲ್ಲಿ ಪದೇ ಪದೇ ಸುಳ್ಳು ಆರೋಪ ಮಾಡುತ್ತಿದ್ದಾರೆ. ಯಾವುದೇ ವಿಡಿಯೊ ತುಣುಕು ಇದ್ದರೆ ಇಲ್ಲೇ ಪ್ರದರ್ಶಿಸಲಿ' ಎಂದು ಬಿಜೆಪಿಯ ಬಿ.ವೈ. ವಿಜಯೇಂದ್ರ ಸವಾಲು ಹಾಕಿದರು.

ಸಹಕಾರ ಸಚಿವ ಕೆ.ಎನ್. ರಾಜಣ್ಣ ಸೇರಿದಂತೆ ಕಾಂಗ್ರೆಸ್‌ನ ಹಲವರು ಕೋನರಡ್ಡಿ ಬೆಂಬಲಕ್ಕೆ ನಿಂತರು. ಬಿಜೆಪಿ ಸದಸ್ಯರು ವಿಡಿಯೊ ಒದಗಿಸುವಂತೆ ಪಟ್ಟು ಹಿಡಿದರು. ಗದ್ದಲ ಜೋರಾಗುತ್ತಿದ್ದಂತೆ ಮಧ್ಯ ಪ್ರವೇಶಿಸಿದ ಸ್ಪೀಕರ್ ಯು.ಟಿ. ಖಾದರ್, 'ಸುಮ್ಮನೆ ಕುಳಿತುಕೊಳ್ಳಿ. ಈಗ ವಿಡಿಯೊ ತೋರಿಸಿ ಎಂದರೆ ನಾನು ಎಲ್ಲಿಂದ ತರುವುದು. 2013ರಿಂದ ಈಚೆಗೆ ಏನೆಲ್ಲಾ ಆಗಿದೆ ಎಂಬುದನ್ನು ಹುಡುಕಿದರೆ ಸಿಗಬಹುದು' ಎಂದು ಕೋಲಾಹಲ ತಣ್ಣಗಾಗಿಸಿದರು.

'ಮೇಲಿನವರು ಅಂಕ ಕೊಡುತ್ತಿದ್ದಾರೆ'

ಕೋನರಡ್ಡಿ ಮಾತನಾಡುತ್ತಿದ್ದಾಗ ಬಿಜೆಪಿಯ ಹಲವು ಸದಸ್ಯರು ಪದೇ ಪದೇ ಅಡ್ಡಿಪಡಿಸುತ್ತಿದ್ದರು. ಆಗ ಮಧ್ಯ ಪ್ರವೇಶಿಸಿದ ಕಾಂಗ್ರೆಸ್‌ನ ಲಕ್ಷ್ಮಣ ಸವದಿ, 'ನೀನು ಕೇಂದ್ರದ ವಿರುದ್ಧ ಮಾತನಾಡಿದರೆ ಅವರೆಲ್ಲ ಎದ್ದು ನಿಲ್ಲುತ್ತಾರೆ. ಅವರೆಲ್ಲರೂ ಈಗ ಸ್ಪರ್ಧೆಯಲ್ಲಿದ್ದಾರೆ. ಮೇಲಿನವರು ನೋಡ್ತಾ ಇದ್ದಾರೆ. ಎಷ್ಟು ಬಾರಿ ಎದ್ದೇಳ್ತಾರೆ, ಗಲಾಟೆ ಮಾಡ್ತಾರೆ ಎಂಬುದನ್ನು ನೋಡಿ ಅಂಕ ಕೊಡುತ್ತಾರೆ' ಎಂದು ಬಿಜೆಪಿಯವರ ಕಾಲೆಳೆದರು.

'ವಿದೇಶಿ ಪ್ರಜೆಗಳ ಮೇಲೆ ನಿಗಾ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡ್ರಗ್ಸ್, ವೇಶ್ಯಾವಾಟಿಕೆ ದಂಧೆಯಲ್ಲಿ ವಿದೇಶಿ ಪ್ರಜೆಗಳು ತೊಡಗಿಸಿಕೊಳ್ಳುತ್ತಿರುವ ಮಾಹಿತಿಯಿದ್ದು, ವೀಸಾ ಅವಧಿ ಮುಗಿದ ವಿದೇಶಿಗಳ ಮೇಲೆ ನಿಗಾ ಇರಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಗೋಪಿನಾಥ್ ರೆಡ್ಡಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ವಿದೇಶಿ ಪ್ರಜೆಗಳು ನಮ್ಮ ರಾಜ್ಯಕ್ಕೆ ಶಿಕ್ಷಣ ಹಾಗೂ ಉದ್ಯೋಗಕ್ಕೆ ಬರುತ್ತಾರೆ. ವಿದ್ಯಾರ್ಥಿ ವೀಸಾ ಅಡಿಯಲ್ಲಿ ಬೆಂಗಳೂರು ನಗರದಲ್ಲಿ 2,356 ಸೇರಿ ಇಡೀ ರಾಜ್ಯದಲ್ಲಿ 4,890 ಮಂದಿ ನೆಲೆಸಿದ್ದಾರೆ. ವೀಸಾ ಮುಗಿದ ಮೇಲೆ ಕೆಲವರು ನವೀಕರಿಸಿಕೊಳ್ಳುವುದಿಲ್ಲ. ಕೆಲವರು ತಾವೇ ಪ್ರಕರಣದಲ್ಲಿ ಭಾಗಿಯಾಗಿ, ಇಲ್ಲಿಯೇ ಉಳಿದುಕೊಂಡು ದಂಧೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಅಂಥವರನ್ನು ಬಂಧನ ಕೇಂದ್ರದಲ್ಲಿ (ಡಿಟೆನ್ಷನ್ ಸೆಂಟರ್) ಇಡಲಾಗುತ್ತದೆ.' ಎಂದರು.

'ವಿದೇಶಿ ವೀಸಾ ಪಡೆದು ರಾಜ್ಯದಲ್ಲಿ 8,862 ಮಂದಿ ವಾಸಿಸುತ್ತಿದ್ದು, ವೀಸಾ ಅವಧಿ ಮುಕ್ತಾಯಗೊಂಡವರು 754 ಮಂದಿ ಇದ್ದಾರೆ. ಕಾನೂನುಬಾಹಿರ (ಡ್ರಗ್ಸ್, ದರೋಡೆ ಮತ್ತಿತರ) ಕೃತ್ಯಗಳ ಅಡಿಯಲ್ಲಿ ವಿದೇಶಿಗಳ ಮೇಲೆ 501 ಪ್ರಕರಣಗಳು ದಾಖಲಾಗಿವೆ' ಎಂದೂ ಮಾಹಿತಿ ನೀಡಿದರು.

ನೂತನ ಕಾರಾಗೃಹ ನಿರ್ಮಾಣ: 'ರಾಜ್ಯದ ಕಾರಾಗೃಹಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಕೈದಿಗಳಿದ್ದು, ಆರು ನೂತನ ಕಾರಾಗೃಹ ಮತ್ತು ಎಂಟು ಕಾರಾಗೃಹಗಳಲ್ಲಿ ಹೆಚ್ಚುವರಿ ಬ್ಯಾರಕ್‌ಗಳನ್ನು ನಿರ್ಮಿಸಲಾಗುವುದು' ಎಂದು ಜಿ. ಪರಮೇಶ್ವರ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ ಸಿಂಹ ನಾಯಕ್ ಅವರು ಕಾರಾಗೃಹಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚು ಕೈದಿಗಳನ್ನು ಬಂಧನದಲ್ಲಿ ಇಟ್ಟಿರುವ ಕುರಿತು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ರಾಜ್ಯದಲ್ಲಿ 54 ಕಾರಾಗೃಹಗಳಿದ್ದು, ಅವುಗಳಲ್ಲಿ ಒಂಬತ್ತು ಕೇಂದ್ರ, 21 ಜಿಲ್ಲಾ, 29 ತಾಲ್ಲೂಕು ಕಾರಾಗೃಹಗಳಿವೆ. ಈ ಕಾರಾಗೃಹಗಳಲ್ಲಿ 14,237 ಬಂಧಿಗಳಿಗೆ ಅವಕಾಶವಿದೆ. ಆದರೆ, 16,053 ಕೈದಿಗಳಿದ್ದಾರೆ. 28 ಕಾರಾಗೃಹಗಳಲ್ಲಿ ಸ್ಥಳಾವಕಾಶಕ್ಕಿಂತ ಹೆಚ್ಚು ಕೈದಿಗಳಿದ್ದಾರೆ' ಎಂದರು.

5 ವರ್ಷಗಳಲ್ಲಿ 14,163 ರೌಡಿಶೀಟರ್‌ಗಳು: ಕಾಂಗ್ರೆಸ್ಸಿನ ಅರವಿಂದ ಕುಮಾರ ಅರಳಿ ಅವರ ಪ್ರಶ್ನೆಗೆ ಉತ್ತರಿಸಿದ ಜಿ. ಪರಮೇಶ್ವರ, 'ರಾಜ್ಯದಲ್ಲಿ ಪ್ರಸ್ತುತ ಒಟ್ಟು 46,149 ರೌಡಿಶೀಟರ್‌ಗಳಿದ್ದಾರೆ. ಕಳೆದ 5 ವರ್ಷದಲ್ಲಿ 14,163 ಮಂದಿಯನ್ನು ಈ ಪಟ್ಟಿಗೆ ಸೇರಿಸಲಾಗಿದೆ. ಅಲ್ಲದೆ, 5 ವರ್ಷದಲ್ಲಿ 27,294 ರೌಡಿಗಳನ್ನು ಪಟ್ಟಿಯಿಂದ ಕೈಬಿಡಲಾಗಿದೆ' ಎಂದು ಹೇಳಿದರು.

'ಮುಂಬಡ್ತಿ ಅವಧಿ ಪರಿಷ್ಕರಣೆ ಚಿಂತನೆ'

'ಅಗ್ನಿಶಾಮಕ ಇಲಾಖೆಯಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಸಮುದಾಯಕ್ಕೆ ಮುಂಬಡ್ತಿ ನೀಡಲು ಸೇವಾ ಅವಧಿಯನ್ನು ಐದು ವರ್ಷಗಳಿಂದ ಮೂರು ವರ್ಷಕ್ಕೆ ಇಳಿಸಲು ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದು ಜಿ. ಪರಮೇಶ್ವರ ತಿಳಿಸಿದರು.

ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, 'ವೃಂದ ಮತ್ತು ನೇಮಕಾತಿ ನಿಯಮದ ಮೇಲೆ ಹುದ್ದೆಗಳಿಗೆ ನೇಮಕ ಮಾಡಲಾಗುತ್ತದೆ. ಅಗ್ನಿಶಾಮಕ ಇಲಾಖೆಯಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯಕ್ಕೆ ಮುಂಬಡ್ತಿ ನೀಡಲು, ಕರ್ತವ್ಯದ ಅವಧಿಯನ್ನು ಐದು ವರ್ಷಗಳಿಂದ ಮೂರು ವರ್ಷಕ್ಕೆ ಇಳಿಸುವ ಬೇಡಿಕೆ ಸರಿ ಇದೆ. ಬೇರೆ ಇಲಾಖೆಯಲ್ಲಿ ರಿಯಾಯಿತಿ ನೀಡಲಾಗಿದ್ದು, ಕಾನೂನಿನ ಮೂಲಕ ಅವಕಾಶ ಇದ್ದರೆ ಮುಂದಿನ ದಿನಗಳಲ್ಲಿ ಕ್ರಮ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

ವಿವಿಧೆಡೆ ಉತ್ತಮ ಮಳೆ: ಬಿತ್ತನೆ ಚುರುಕು

ಬೆಂಗಳೂರು: ಕರಾವಳಿ, ಮಲೆನಾಡು, ಕಲ್ಯಾಣ ಕರ್ನಾಟಕ ಸೇರಿದಂತೆ ರಾಜ್ಯದ ವಿವಿಧೆಡೆ ಗುರುವಾರ ಉತ್ತಮ ಮಳೆ ಸುರಿದಿದ್ದು, ಬಿತ್ತನೆ ಸೇರಿದಂತೆ ಇತರೆ ಕೃಷಿ ಚಟುವಟಿಕೆಗಳು ಚುರುಕುಗೊಂಡಿವೆ.

ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ, ದಾವಣಗೆರೆ, ಶಿವಮೊಗ್ಗ ಸೇರಿದಂತೆ ಹಲವೆಡೆ ಬಿರುಸಿನ ಮಳೆಯಾಗಿದೆ. ಉಡುಪಿ ತಾಲ್ಲೂಕಿನ ಮೂಡುತೋನ್ಸೆ, ಹೆರ್ಗ, ಕಾಪು ತಾಲ್ಲೂಕಿನ ಪಾದೂರಿನಲ್ಲಿ ಕೆಲ ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ದಾವಣಗೆರೆ ಜಿಲ್ಲೆಯ ಸಂತೇಬೆನ್ನೂರು, ಮಾಯಕೊಂಡದಲ್ಲಿ ಜೋರು ಮಳೆ ಸುರಿದಿದ್ದು, ದಾವಣಗೆರೆ, ಹರಿಹರ, ಹೊನ್ನಾಳಿಯಲ್ಲೂ ಕೆಲಕಾಲ ಧಾರಾಕಾರ ಮಳೆಯಾಗಿದೆ.

ಗದ್ದಲ ಎಬ್ಬಿಸಿದ ಮೀನಿನ ಕಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ನಲ್ಲಿ ಗುರುವಾರ ನಡೆದ ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಚರ್ಚೆಯಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಅವರು ಹೇಳಿದ ಮೀನಿನ ಕಥೆ, ಪ್ರಧಾನಿ ನರೇಂದ್ರ ಮೋದಿಯವರ ಟೀಕೆ ಬಿಜೆಪಿ ಸದಸ್ಯರ ಆಕ್ರೋಶಕ್ಕೆ ಕಾರಣವಾಯಿತು. ಅವರ ಹೇಳಿಕೆಗಳನ್ನು ಖಂಡಿಸಿ ಸಭಾಪತಿ ಪೀಠದ ಮುಂದೆ ಬಿಜೆಪಿಯವರು ಧರಣಿ ನಡೆಸಿದರು.

'ಗಂಗಾ ನದಿಯಲ್ಲಿ ಮೀನುಗಾರನಿಗೆ ಸಿಕ್ಕ ಮೀನೊಂದು ತನ್ನ ಎಲ್ಲ ಅಂಗಗಳನ್ನು ಕತ್ತರಿಸು ಆದರೆ, ಕಣ್ಣನ್ನು ಮಾತ್ರ ಬಿಡು ಎಂದು ವಿನಂತಿಸಿತಂತೆ. ಇದರಿಂದ ಚಕಿತನಾದ ಮೀನುಗಾರ ಕಾರಣ ಕೇಳಿದನಂತೆ. ಆಗ ಮೀನು ಮೋದಿ ಅವರ ಅಚ್ಛೇದಿನ ನೋಡಬೇಕು ಎಂಬ ಆಸೆ ಇದೆ ಎಂದಿತಂತೆ. ಇಂದಿಗೂ ಮೀನಿನ ಕಣ್ಣುಗಳು ಗಂಗಾನದಿ ತೀರದಲ್ಲೇ ಎದುರು ನೋಡುತ್ತಿವೆ' ಎಂದರು.

'ರಾಜ್ಯ ಸಂಕಷ್ಟದಲ್ಲಿದ್ದಾಗ ಬಾರದ ಪ್ರಧಾನಿ, ಚುನಾವಣೆಗೆ ಬಂದರು. ಸಂಸ್ಕೃತಿಯ ಬಗ್ಗೆ ಮಾತನಾಡುವ ಬಿಜೆಪಿ ಮೋದಿ ಮೇಲೆ ₹15 ಕೋಟಿ ಹೂ ಸುರಿಯಿತು, ಅದನ್ನು ಜನರು ಕಾಲಲ್ಲಿ ತುಳಿದರು. ಪ್ರಧಾನಿ ಮಣಿಪುರಕ್ಕೂ ಕಾಲಿಟ್ಟಿಲ್ಲ. ಅವರ 'ಮಂಕಿಬಾತ್' ಮಾತ್ರ ನಿಂತಿಲ್ಲ. ಕೋವಿಡ್ ಸಾವಿನ ಲೆಕ್ಕವನ್ನೇ ಕೊಡಲಿಲ್ಲ. ಆರ್‌ಎಸ್‌ಎಸ್ ಭಾರತ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲೇ ಇಲ್ಲ' ಎಂದು ಮರಿತಿಬ್ಬೇಗೌಡರು ಹೇಳಿದ್ದು, ಬಿಜೆಪಿ ಸದಸ್ಯರನ್ನು ಕೆರಳಿಸಿದವು. ಮಾತು ಮುಂದುವರಿಸಲು ಅವಕಾಶ ನೀಡದೆ ಗದ್ದಲ ಎಬ್ಬಿಸಿದರು. 'ಪ್ರಧಾನಿ ಟೀಕೆ ದೇಶದ್ರೋಹ. ಸಭಾಪತಿ ಸಹ ಉದ್ದೇಶಪೂರ್ವಕವಾಗಿ ಅವರಿಗೆ ಪ್ರಧಾನಿ ಟೀಕೆ ಮಾಡಲು ಅವಕಾಶ ಕೊಡುತ್ತಿದ್ದಾರೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅವರ ಮಾತಿಗೆ ಬಸವರಾಜ ಹೊರಟ್ಟಿ ಬೇಸರ ಹೊರಹಾಕಿದರು.

ಭಾರತಿಶೆಟ್ಟಿ, ರವಿಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಕೇಶವ ಪ್ರಸಾದ್, ಡಿ.ಎಸ್.ಅರುಣ್ ಮತ್ತಿತರರು ಧರಣಿ ನಡೆಸಿದರು. ನಂತರ ಸಭಾಪತಿ ಹೊರಟ್ಟಿ ಆಕ್ಷೇಪಾರ್ಹ ಪದಗಳಿದ್ದರೆ, ಅವುಗಳನ್ನು ಕಡತದಿಂದ ತೆಗೆದು ಹಾಕುವ ಭರವಸೆ ನೀಡಿದ ನಂತರ ಮತ್ತೆ ಕಲಾಪ ಆರಂಭವಾಯಿತು.

ಆಗಲೂ ಬಿಜೆಪಿ ಸದಸ್ಯರು 'ಮರಿತಿಬ್ಬೇಗೌಡರು ಕಾಂಗ್ರೆಸ್ ವಕ್ತಾರರಂತೆ ಮಾತನಾಡುತ್ತಿದ್ದಾರೆ. ಅವರಿಗೆ ಈ ಬಾರಿ ಕಾಂಗ್ರೆಸ್ ಟಿಕೆಟ್ ಗ್ಯಾರಂಟಿ' ಎಂದರು.

ಚರ್ಚೆ ಗುರುವಾರ ನಡೆದ ವಿಧಾನ ಪರಿಷತ್ ಕಲಾಪದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಚೆಲುವರಾಯಸ್ವಾಮಿ ಅವರು ಪ್ರಜಾವಾಣಿ ಪತ್ರಿಕೆಯಲ್ಲಿ ಬಂದ ಸುದ್ದಿಯೊಂದರ ಬಗ್ಗೆ ಚರ್ಚಿಸಿದರು. ಕಾಂಗ್ರೆಸ್ ಸದಸ್ಯ ದಿನೇಶ್ ಗೂಳಿಗೌಡ ಇದ್ದಾರೆ –ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಲೋಕಸಭಾ ಚುನಾವಣೆಯಲ್ಲಿ ಅರೆಯುತ್ತೇವೆ: ಶಿವಲಿಂಗೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತ ಆಹಾರ ನಿಗಮದಲ್ಲಿ (ಎಫ್‌ಸಿಐ) ಅಕ್ಕಿ ದಾಸ್ತಾನು ಇದ್ದರೂ, ರಾಜ್ಯದ ಅನ್ನ ಭಾಗ್ಯ ಯೋಜನೆಗೆ ಪೂರೈಸುವುದಕ್ಕೆ ಕೇಂದ್ರ ಸರ್ಕಾರ ತಡೆ ಒಡ್ಡಿದೆ. ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಹಾಕಿಕೊಂಡು ಅರೆಯುತ್ತೇವೆ' ಎಂದು ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ವಿಧಾನಸಭೆಯಲ್ಲಿ ಗುರುವಾರ ಆಕ್ರೋಶ ವ್ಯಕ್ತಪಡಿಸಿದರು.

ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಎಫ್‌ಸಿಐ ಬಳಿ ದಾಸ್ತಾನು ಇರುವ ಅಕ್ಕಿಯನ್ನು ಏನು ಮಾಡುತ್ತೀರಿ? ಇಲಿಗಳಿಗೆ ತಿನ್ನಿಸ್ತೀರಾ? ಸಮುದ್ರಕ್ಕೆ ಸುರಿಯುತ್ತೀರಾ? ರಾಜ್ಯದ ಜನರಿಗೆ ಏಕೆ ಅನ್ಯಾಯ ಮಾಡುತ್ತೀರಿ' ಎಂದು ಪ್ರಶ್ನಿಸಿದರು.

'ನಾವು ಒಕ್ಕೂಟ ವ್ಯವಸ್ಥೆಯಲ್ಲಿ ಇದ್ದೇವೆ. ಯೋಜನೆಗಳನ್ನು ಘೋಷಿಸುವುದು ರಾಜ್ಯ ಸರ್ಕಾರದ ಸ್ವಾತಂತ್ರ್ಯ. ತಮಿಳುನಾಡು, ದೆಹಲಿ, ಪಂಜಾಬ್ ಸರ್ಕಾರಗಳು ಉಚಿತ ಕೊಡುಗೆಗಳನ್ನು ಘೋಷಿಸುವಾಗ ಕೇಂದ್ರ ಸರ್ಕಾರದ ಅನುಮತಿ ಪಡೆಯಲಾಗಿತ್ತೆ' ಎಂದರು.

'ರಾಜ್ಯದ ಬಡವರಿಗೆ ವಿತರಿಸಲು ಅಕ್ಕಿ ಒದಗಿಸದೇ ಕೇಂದ್ರ ಸರ್ಕಾರ ಅನ್ಯಾಯ ಮಾಡಿದೆ. ಬಿಜೆಪಿಯವರು ಕೆಟ್ಟ ಕೆಲಸ ಮಾಡಿದ್ದಾರೆ. ರಾಜ್ಯದ ಜನರನ್ನು ಸಾಮಾನ್ಯ ಎಂದು ಅವರು ತಿಳಿದಂತಿದೆ. ಈ ಅನ್ಯಾಯದ ಫಲ ನಿಮಗೆ ಖಂಡಿತ ಸಿಗುತ್ತದೆ. ಲೋಕಸಭಾ ಚುನಾವಣೆಯಲ್ಲಿ ಹಾಕಿಕೊಂಡು ಅರೆಯುತ್ತೇವೆ' ಎಂದು ಬಿಜೆಪಿ ಸದಸ್ಯರನ್ನುದ್ದೇಶಿಸಿ ಹೇಳಿದರು.

ಸಾಹಿತ್ಯ ಸಮ್ಮೇಳನಕ್ಕಿಲ್ಲ ಅನುದಾನದ 'ಭರವಸೆ'

• ವರುಣ ಹೆಗಡೆ

ಬೆಂಗಳೂರು: ಈ ಬಾರಿಯ ಬಜೆಟ್‌ನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಅನುದಾನ ಕಡಿತ ಮಾಡಿರುವ ರಾಜ್ಯ ಸರ್ಕಾರ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಕನ್ನಡ ಸಾಹಿತ್ಯ ಪರಿಷತ್ತಿಗೆ (ಕಸಾಪ) ಅನುದಾನದ ಭರವಸೆ ನೀಡಿಲ್ಲ. ಇದರಿಂದಾಗಿ ಇದೇ ವರ್ಷ ಮಂಡ್ಯದಲ್ಲಿ ಸಮ್ಮೇಳನ ನಡೆಸುವ ಪರಿಷತ್ತಿನ ಉತ್ಸಾಹ ಕುಗ್ಗಿದೆ.

ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಈ ಹಿಂದಿನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ₹20 ಕೋಟಿ ಅನುದಾನ ಘೋಷಿಸಿದ್ದರು. ಅದೇ ರೀತಿ, 87ನೇ ಸಾಹಿತ್ಯ ಸಮ್ಮೇಳನಕ್ಕೆ ₹25 ಕೋಟಿ ಅನುದಾನವನ್ನು ಬಜೆಟ್‌ನಲ್ಲಿಯೇ ಘೋಷಿಸಬೇಕು ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಪತ್ರದ ಮೂಲಕ ಮನವಿ ಮಾಡಿಕೊಂಡಿದ್ದರು. ಬಜೆಟ್‌ಗೂ ಮೊದಲು ಅವರು ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೇಟಿಗೆ ಮೂರು ಬಾರಿ ಸಮಯಾವಕಾಶ ಕೇಳಿದ್ದರೂ ಭೇಟಿ ಸಾಧ್ಯವಾಗಿರಲಿಲ್ಲ. ಇಲಾಖೆಯ ಅನುದಾನವನ್ನೂ ಕಡಿತ ಮಾಡಿರುವುದರಿಂದ ನಂತರ ಹಂಚಿಕೆ ಮಾಡಿದರೂ ನಿಗದಿತ ಅನುದಾನದ ಖಚಿತತೆ ಇಲ್ಲವಾಗಿದೆ.

2021ರ ಫೆಬ್ರುವರಿ ತಿಂಗಳಲ್ಲಿ ನಡೆಯಬೇಕಿದ್ದ 86ನೇ ಸಾಹಿತ್ಯ ಸಮ್ಮೇಳನ ಕೋವಿಡ್ ಕಾರಣ 2023ರ ಜ.6ರಿಂದ ಜ.8 ರವರೆಗೆ ನಡೆಯಿತು. ಇದೇ ವರ್ಷ ಡಿಸೆಂಬರ್ ತಿಂಗಳಲ್ಲಿ 87ನೇ ಸಾಹಿತ್ಯ ಸಮ್ಮೇಳನ ನಡೆಸಲು ನಿರ್ಧರಿಸಿರುವ ಪರಿಷತ್ತು, ಈಗಾಗಲೇ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರ ಜತೆಗೆ ಸಭೆ ಹಾಗೂ ಸ್ಥಳ ಪರಿಶೀಲನೆ ನಡೆಸಿತ್ತು. ಸಾರ್ವಜನಿಕರಿಂದ ಲಾಂಛನ ಹಾಗೂ ಧ್ಯೇಯವಾಕ್ಯವನ್ನು ಆಹ್ವಾನಿಸಿತ್ತು. ಈಗ ನಿರ್ದಿಷ್ಟ ಅನುದಾನದ ಖಚಿತತೆ ಇಲ್ಲದಿರುವುದರಿಂದ ಕಾರ್ಯಚಟುವಟಿಕೆ ಕುಂಠಿತಗೊಂಡಿದೆ.

ಅನುದಾನ ಕಡಿತ ಸಾಧ್ಯತೆ: ರಾಜ್ಯ ಸರ್ಕಾರವು 'ಶಕ್ತಿ', 'ಗೃಹಜ್ಯೋತಿ'ಯಂತಹ ಉಚಿತ ಯೋಜನೆಗಳಿಗೆ ಅನುದಾನ ಹೊಂದಿಸಲು ಸಂಸ್ಕೃತಿ ಇಲಾಖೆಯ ವಿವಿಧ ಪ್ರಸ್ತಾವನೆಗಳನ್ನು ಕೈಬಿಟ್ಟಿದೆ. ಇಲಾಖೆಗೆ ಈ ಬಾರಿ ಸುಮಾರು ₹7 ಕೋಟಿ ಕಡಿತ ಮಾಡಲಾಗಿದೆ. ನೀಡಲಾದ ಅನುದಾನದಲ್ಲಿ ಧನಸಹಾಯದಂತಹ ವಾರ್ಷಿಕ ಯೋಜನೆಗಳ ಜತೆಗೆ ಅಕಾಡೆಮಿಗಳಿಗೂ ಹಂಚಿಕೆ ಮಾಡಬೇಕಿದೆ. ಇಲಾಖೆಯ ಮೂಲಗಳ ಪ್ರಕಾರ ಈ ಬಾರಿ ವಾರ್ಷಿಕ ಯೋಜನೆಗಳಿಗೆ ಅನುದಾನ ಕಡಿತವಾಗುವ ಸಾಧ್ಯತೆಯಿದೆ.

ಮೈಸೂರಿನಲ್ಲಿ ನಡೆದ 83ನೇ ಸಾಹಿತ್ಯ ಸಮ್ಮೇಳನಕ್ಕೆ ₹10 ಕೋಟಿ ಅನುದಾನ ನೀಡುವಂತೆ ಸಲ್ಲಿಸಿದ ಮನವಿಗೆ, ಅಂದಿನ ಸರ್ಕಾರ ಅಂತಿಮವಾಗಿ ₹8 ಕೋಟಿ ಬಿಡುಗಡೆ ಮಾಡಿತ್ತು. ಅದೇ ರೀತಿ, ಧಾರವಾಡದಲ್ಲಿ ನಡೆದ 84ನೇ ಸಾಹಿತ್ಯ ಸಮ್ಮೇಳಕ್ಕೆ ₹12 ಕೋಟಿ ಒದಗಿಸುವಂತೆ ಸಲ್ಲಿಸಲಾಗಿದ್ದ ಪ್ರಸ್ತಾವಕ್ಕೆ, ಸರ್ಕಾರ ₹10 ಕೋಟಿ ನೀಡಿತ್ತು. ಅದರಲ್ಲಿ ಅರ್ಧದಷ್ಟು ಹಣ ಸಮ್ಮೇಳನ ಮುಗಿದ ಮೇಲೆಯೇ ಸಂದಾಯವಾಗಿತ್ತು.

'ಕಸಾಪ ಅನುದಾನದ ಸಂಬಂಧ ಇಲಾಖೆಗೆ ಪ್ರಸ್ತಾವ ಸಲ್ಲಿಸಿದ ಬಳಿಕ ಪರಿಶೀಲಿಸಲಾಗುತ್ತದೆ. ಕಳೆದ ಸಮ್ಮೇಳನಕ್ಕೆ ಹೋಲಿಸಿದರೆ ಈ ಬಾರಿ ಅನುದಾನ ಹೆಚ್ಚಳ ಕಷ್ಟ. ಸದ್ಯದ ಪರಿಸ್ಥಿತಿಯಲ್ಲಿ ಕಡಿತವಾಗುವ ಸಾಧ್ಯತೆಯಿದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ವಿಶ್ವ ಕನ್ನಡ ಸಮ್ಮೇಳನವಿಲ್ಲ

ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದಾವಣಗೆರೆಯಲ್ಲಿ ವಿಶ್ವ ಕನ್ನಡ ಸಮ್ಮೇಳನ ನಡೆಸಬೇಕೆಂದು ನಿರ್ಣಯ ಕೈಗೊಳ್ಳಲಾಗಿತ್ತು. ಕಳೆದ ಬಿಜೆಪಿ ಸರ್ಕಾರ ತನ್ನ ಕೊನೆಯ ಬಜೆಟ್‌ನಲ್ಲಿ ಇದನ್ನು ಘೋಷಿಸಿತ್ತು. ಆದರೆ, ಅನುದಾನ ಪ್ರಸ್ತಾಪಿಸಿರಲಿಲ್ಲ. ಕಾಂಗ್ರೆಸ್ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಈ ಬಗ್ಗೆ ಪ್ರಸ್ತಾಪಿಸಿಲ್ಲ. ಇಲಾಖೆಯೂ ಈ ಸಮ್ಮೇಳನದ ಬಗ್ಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ. ಇದರಿಂದಾಗಿ ಈ ಬಾರಿಯೂ ವಿಶ್ವ ಕನ್ನಡ ಸಮ್ಮೇಳನ ಇಲ್ಲವಾಗಿದೆ. 2017ರಲ್ಲಿಯೇ ದಾವಣಗೆರೆಯಲ್ಲಿ 3ನೇ ವಿಶ್ವ ಕನ್ನಡ ಸಮ್ಮೇಳನ ನಡೆಯಬೇಕಿತ್ತು. ವಿವಿಧ ಕಾರಣಗಳಿಂದ ಈ ಸಮ್ಮೇಳನ ನಡೆದಿಲ್ಲ.

> **ಆಸ್ಟ್ರೇಲಿಯಾದಿಂದ ಮರಳಿದ ಬಳಿಕ ಸಿ.ಎಂ ಅವರನ್ನು ಭೇಟಿ ಮಾಡಿ, ಸಮ್ಮೇಳನದ ಅನುದಾನದ ಬಗ್ಗೆ ಚರ್ಚಿಸುತ್ತೇನೆ. ಸಮ್ಮೇಳನಕ್ಕೆ ಅಗತ್ಯ ಅನುದಾನ ಸಿಗುವ ವಿಶ್ವಾಸವಿದೆ**
> **ಮಹೇಶ ಜೋಶಿ**
> ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ

ಸಿವಿಲ್ ಪ್ರಕ್ರಿಯಾ ಸಂಹಿತೆ ತಿದ್ದುಪಡಿಗೆ ಸಂಪುಟ ಒಪ್ಪಿಗೆ

ಬಡವರಿಗೆ ನ್ಯಾಯ: ಕಾನೂನಿಗೆ ತಿದ್ದುಪಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಪ್ರಕರಣಗಳನ್ನು ನ್ಯಾಯಾಲಯಗಳಲ್ಲಿ ಆದ್ಯತೆ ಮೇರೆಗೆ ವಿಚಾರಣೆ ನಡೆಸಲು ಅವಕಾಶ ಕಲ್ಪಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆಗೆ ತಿದ್ದುಪಡಿ ತರುವ ಪ್ರಸ್ತಾವಕ್ಕೆ ಗುರುವಾರ ನಡೆದ ಸಂಪುಟ ಸಭೆಯಲ್ಲಿ ಒಪ್ಪಿಗೆ ನೀಡಲಾಗಿದೆ.

ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯಲ್ಲಿ ಸರ್ಕಾರಿ ವಕೀಲರು ಮತ್ತು ಅಧಿಕಾರಿಗಳಿಗೆ ಹೊಣೆಗಾರಿಕೆ ನಿಗದಿಪಡಿಸುವ ಸರ್ಕಾರಿ ವ್ಯಾಜ್ಯಗಳ ನಿರ್ವಹಣಾ ಮಸೂದೆಯನ್ನು ವಿಧಾನಮಂಡಲದಲ್ಲಿ ಮಂಡಿಸುವ ಪ್ರಸ್ತಾವಕ್ಕೂ ಸಂಪುಟ ಅಂಗೀಕಾರ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಇತರ ತೀರ್ಮಾನಗಳು:

- ಗ್ರೂಪ್ 'ಎ' ಮತ್ತು ಗ್ರೂಪ್–ಬಿ ವೃಂದದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ, ದಂಡನಾ ಶಿಫಾರಸುಗಳನ್ನು ಪರಿಶೀಲಿಸಲು ಸಂಪುಟ ಉಪ ಸಮಿತಿ ರಚನೆ.
- 371–ಜೆ ಕಾರ್ಯಕ್ರಮಗಳ ಅನುಷ್ಠಾನದ ಪ್ರಗತಿ ಪರಿಶೀಲನೆಗೆ ಸಂಪುಟ ಉಪ ಸಮಿತಿ ರಚನೆ.
- ಕೃಷಿ ಬೆಲೆ ಆಯೋಗದ ಅವಧಿ ವಿಸ್ತರಣೆ.
- ರಾಜ್ಯದ ವಿವಿಧ ಕಾರಾಗೃಹಗಳಲ್ಲಿರುವ 63 ಕೈದಿಗಳನ್ನು ಸನ್ನಡತೆ ಆಧಾರದಲ್ಲಿ ಬಿಡುಗಡೆ ಮಾಡುವುದು.
- ಬಯಲು ಸೀಮೆ ಅಭಿವೃದ್ಧಿ ಮಂಡಳಿ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಒಪ್ಪಿಗೆ.
- ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಒಪ್ಪಿಗೆ.
- ಸಹಕಾರ ಕ್ಷೇತ್ರದಲ್ಲಿ ವೈದ್ಯನಾಥನ್ ಸಮಿತಿ ಶಿಫಾರಸುಗಳ ಅನುಷ್ಠಾನಕ್ಕೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆಗೆ ಒಪ್ಪಿಗೆ.
- ಕರ್ನಾಟಕ ಗೃಹ ಮಂಡಳಿಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲ್ಲೂಕಿನ ನಂದಗುಡಿ ಹಾಗೂ ಸುತ್ತಮುತ್ತ ಮತ್ತು ಅದಕ್ಕೆ ಹೊಂದಿಕೊಂಡ ಕೋಲಾರ ಜಿಲ್ಲೆಯ ವಿವಿಧ ಗ್ರಾಮಗಳ 111 ಎಕರೆ 17 ಗುಂಟೆ ಜಮೀನನ್ನು ಬಡಾವಣೆ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವಕ್ಕೆ ಒಪ್ಪಿಗೆ.

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಶುಕ್ರದೆಸೆ ತಾರದ ಸಿನಿಮಾರಂಗ, ನಟ ಧರ್ಮ ಕೀರ್ತಿರಾಜ್ ಸಂದರ್ಶನ

ಆಳ-ಅಗಲ
ಚಂದ್ರನ ದಕ್ಷಿಣ ಧ್ರುವದತ್ತ ಇಸ್ರೊ...

ಯುಪಿಐ: ಫ್ರಾನ್ಸ್ ಜೊತೆ ಭಾರತ ಒಪ್ಪಂದ 4
ಸಿಬಿಐ ಬಾಯಿ ಮುಚ್ಚಿಸಿದ ಹೈಕೋರ್ಟ್ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,558	19,413	₹61,210 (ಬೆಂಗಳೂರು)	₹75,400 (ಬೆಂಗಳೂರು)	82.08

ಪರಿಶ್ರಮದಲ್ಲಿ ಮರುಯತ್ನಕ್ಕೆ ಎಂದಿಗೂ ಪ್ರೋತ್ಸಾಹ. ನಮ್ಮ ಫಲಿತಾಂಶವೇ ಅದಕ್ಕೆ ಸಾಕ್ಷಿ.
PARISHRAMA NEET ACADEMY
#Dreamwith Parishrama

315 / 685 — 2022 2023 NEET SCORE — Narayana Swamy
468 / 676 — 2022 2023 NEET SCORE — Ujwal K
261 / 675 — 2022 2023 NEET SCORE — Sachin K S
487 / 675 — 2022 2023 NEET SCORE — Rohith R K
173 / 670 — 2022 2023 NEET SCORE — Prajwal R
Scan to Register
Under the Guidance of Pradeep Eshwar
www.parishramaneetacademy.com Call: 080 4591 2222, 24413400, 9731404974

‘ಚಂದ್ರಯಾನ–3’

ಚಂದ್ರನ ಮೇಲ್ಮೈ ಅಧ್ಯಯನಕ್ಕಾಗಿ ಭಾರತ ಕೈಗೊಂಡಿರುವ ಮೂರನೇ ಮಾನವರಹಿತ ಬಾಹ್ಯಾಕಾಶ ಕಾರ್ಯಕ್ರಮ. ಗಗನನೌಕೆ, ಅದರಲ್ಲಿ ಅಳವಡಿಸಲಾಗಿರುವ ವಿವಿಧ ಉಪಕರಣಗಳ ಸ್ಥೂಲ ಪರಿಚಯ ಹೀಗಿದೆ

ಉಡಾವಣೆ ವಾಹಕ: ಎಲ್‌ವಿಎಂ3–ಎಂ4

43.5 ಮೀ. ಎತ್ತರ

3,900 ಕೆ.ಜಿ ಒಟ್ಟು ತೂಕ

40 ದಿನಗಳು ಚಂದ್ರನನ್ನು ತಲುಪಲು ತೆಗೆದುಕೊಳ್ಳುವ ಅವಧಿ (ಆಗಸ್ಟ್ 23–24ರಂದು ತಲುಪಲಿದೆ. ಚಂದ್ರಯಾನ–2 **48** ದಿನಗಳನ್ನು ತೆಗೆದುಕೊಂಡಿತ್ತು)

ಲ್ಯಾಂಡರ್ ವೈಶಿಷ್ಟ್ಯಗಳು

1 ಚಾಂದ್ರಮಾನ ದಿನ (ಭೂಮಿಯ 14 ದಿನಗಳಿಗೆ ಸಮ) ಕಾರ್ಯ ನಿರ್ವಹಣೆ ಅವಧಿ

1,749.86 ಕೆ.ಜಿ ಒಟ್ಟು ತೂಕ

738 ವಾಟ್ ವಿದ್ಯುತ್ ಬಳಕೆ

ರೋವರ್ ವೈಶಿಷ್ಟ್ಯಗಳು

1 ಚಾಂದ್ರಮಾನ ದಿನ ಕಾರ್ಯ ನಿರ್ವಹಣೆ ಅವಧಿ

26 ಕೆ.ಜಿ ಒಟ್ಟು ತೂಕ

50 ವಾಟ್ ವಿದ್ಯುತ್ ಬಳಕೆ

ಟಿಕ್ ಟಿಕ್ ಉಡ್ಡಯನಕ್ಕೆ ಕ್ಷಣಗಣನೆ

ಶ್ರೀಹರಿಕೋಟಾ (ಪಿಟಿಐ): 25:29:59... 25:29:58... ಗುರುವಾರ ಮಧ್ಯಾಹ್ನ ಸರಿಯಾಗಿ 1.05ರ ಹೊತ್ತು. ಚಂದ್ರನ ಮೇಲ್ಮೈ ಮೇಲೆ ಗಗನನೌಕೆ ಇಳಿಸಿ, ಅಧ್ಯಯನ ಕೈಗೊಳ್ಳುವ ಉದ್ದೇಶದ ‘ಚಂದ್ರಯಾನ–3’ ಕಾರ್ಯಕ್ರಮಕ್ಕೆ ಕ್ಷಣಗಣನೆಯೂ ಶುರುವಾಯಿತು.

ಇಲ್ಲಿನ ಸತೀಶ್ ಧವನ್ ಉಡ್ಡಯನ ಕೇಂದ್ರದಿಂದ ಲ್ಯಾಂಡರ್ (ವಿಕ್ರಮ್) ಹಾಗೂ ರೋವರ್ (ಪ್ರಜ್ಞಾನ) ಹೊತ್ತ ರಾಕೆಟ್ ಶುಕ್ರವಾರ ಮಧ್ಯಾಹ್ನ 2.35 ಗಂಟೆಗೆ ನಭಕ್ಕೆ ಚಿಮ್ಮಲಿದ್ದು, ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ವಿಜ್ಞಾನಿಗಳು ಹಾಗೂ ತಂತ್ರಜ್ಞರ ತಂಡ ಸಿದ್ಧತೆಯನ್ನು ಪೂರ್ಣಗೊಳಿಸಿದೆ.

2019ರಲ್ಲಿ ಕೈಗೊಂಡಿದ್ದ ‘ಚಂದ್ರಯಾನ–2’ ಕಾರ್ಯಕ್ರಮ ಕೊನೆ ಗಳಿಗೆಯಲ್ಲಿ ವಿಫಲವಾಗಿತ್ತು. ಹಾಗಾಗಿ, ಈ ಬಾರಿ ವಿಜ್ಞಾನಿಗಳು ‘ಸಾಫ್ಟ್ ಲ್ಯಾಂಡಿಂಗ್’ ಬಗ್ಗೆ ಗಮನ ಕೇಂದ್ರೀಕರಿಸಲಿದ್ದಾರೆ. ಲ್ಯಾಂಡರ್‌ಗೆ ಯಾವುದೇ ರೀತಿಯ ಹಾನಿ ಆಗದಂತೆ, ಅದನ್ನು ಚಂದ್ರನ ಮೇಲೆ ಇಳಿಸುವುದನ್ನು ‘ಸಾಫ್ಟ್ ಲ್ಯಾಂಡಿಂಗ್’ ಎಂದು ಕರೆಯುತ್ತಾರೆ. ವಿಜ್ಞಾನಿಗಳು ಇಂಥ ತಂತ್ರಗಾರಿಕೆಯನ್ನು ಕರಗತ ಮಾಡಿಕೊಳ್ಳುವ ಗುರಿ ಹೊಂದಿದ್ದಾರೆ.

ಚಂದ್ರನಲ್ಲಿ ಭೂಮಿಗಿಂತ ಕಡಿಮೆ ಗುರುತ್ವಾಕರ್ಷಣ ಶಕ್ತಿ ಇರುವುದರಿಂದ ಲ್ಯಾಂಡರ್ ಸುರಕ್ಷಿತವಾಗಿ ಇಳಿಯುವಂತೆ ಮಾಡುವುದು ಸವಾಲಿನ ಕಾರ್ಯ. ಈ ಬಾರಿಯ ಬಾಹ್ಯಾಕಾಶ ಕಾರ್ಯಕ್ರಮದಲ್ಲಿ ‘ಸಾಫ್ಟ್ ಲ್ಯಾಂಡಿಂಗ್’ನಲ್ಲಿ ಯಶಸ್ಸು ಸಿಕ್ಕಲ್ಲಿ, ಭಾರತವು ಈ ಸಾಧನೆ ಮಾಡಿದ ನಾಲ್ಕನೇ ದೇಶವಾಗಲಿದೆ. ಅಮೆರಿಕ, ಚೀನಾ ಹಾಗೂ ಈ ಹಿಂದಿನ ಸೋವಿಯತ್ ಒಕ್ಕೂಟ ಈ ಸಾಧನೆ ಮಾಡಿರುವ ಇತರ ದೇಶಗಳಾಗಿವೆ.

ಚಂದ್ರಾನ್ವೇಷಣೆಗೆ 2 ದಶಕ

ಭಾರತದ ‘ಚಂದ್ರಯಾನ’ ಕಾರ್ಯಕ್ರಮಕ್ಕೆ ಎರಡು ದಶಕಗಳು ಸಂದಿವೆ. ಮಹತ್ವಾಕಾಂಕ್ಷೆಯ ಈ ಕಾರ್ಯಕ್ರಮ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಪರಿಕಲ್ಪನೆ. ಈ ಕಾರ್ಯಕ್ರಮವನ್ನು 2003ರ ಆಗಸ್ಟ್ 15ರಂದು ಅವರು ಘೋಷಿಸಿದ್ದರು.

7ನೇ ಪುಟ ನೋಡಿ

ವರ್ಗಕ್ಕೆ ಲಂಚ; ಸಾಬೀತು ಮಾಡಿದರೆ ನಿವೃತ್ತಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವರ್ಗಾವಣೆಗಾಗಿ ನಾನು ಲಂಚ ತಗೊಂಡಿಲ್ಲ. ಲಂಚ ತೆಗೆದುಕೊಂಡಿರುವುದನ್ನು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ತೆಗೆದು-ಕೊಳ್ಳುತ್ತೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಎಸೆದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಸುದೀರ್ಘ ಉತ್ತರ ನೀಡಿದ ಅವರು, ‘ನನ್ನ ರಾಜಕೀಯ ಜೀವನದಲ್ಲಿ ಅಧಿಕಾರಿಗಳನ್ನು ವರ್ಗಾವಣೆ ಮಾಡುವುದಕ್ಕೆ ಒಂದೇ ಒಂದು ಬಾರಿಯೂ ಲಂಚ ತೆಗೆದುಕೊಂಡಿಲ್ಲ’ ಎಂದರು.

‘ಈ ಬಾರಿ ನನ್ನ ಅಧೀನದ ಇಲಾಖೆಗಳಲ್ಲಿ ಯಾರೊಬ್ಬರನ್ನೂ ವರ್ಗಾವಣೆ ಮಾಡಿಲ್ಲ. ಬಸವರಾಜ ಬೊಮ್ಮಾಯಿ ಮತ್ತು ಎಚ್‌.ಡಿ.ಕುಮಾ-ರಸ್ವಾಮಿ ಅವರು ಹೇಳಿದಂತೆ ವರ್ಗಾ-ವಣೆಯಲ್ಲಿ ದಂಧೆ ನಡೆದಿಲ್ಲ. ಅವರ ಹೇಳಿಕೆಗಳನ್ನು ಖಂಡತುಂಡವಾಗಿ ಅಲ್ಲ-ಗಳೆಯುತ್ತೇನೆ’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಒಂದು ವೇಳೆ ನನಗೆ ಗೊತ್ತಿಲ್ಲದಂತೆ ಆ ರೀತಿ ಯಾರಾದರೂ ಮಾಡಿದ್ದರೆ, ನನಗೆ ಗೊತ್ತಿಲ್ಲ. ಭ್ರಷ್ಟಾಚಾರವೇ ಇಲ್ಲ ಎನ್ನುವುದಿಲ್ಲ. ಸರ್ಕಾರ ಬಂದು ಎರಡು ತಿಂಗಳೂ ತುಂಬಿಲ್ಲ. ಆಗಲೇ ಸರ್ಕಾರದ ಮೇಲೆ ಭ್ರಷ್ಟಾಚಾರದ ಆರೋಪ ಮಾಡಿದ್ದೀರಿ. ಈ ಆರೋಪಗಳು ಕಪೋಲ ಕಲ್ಪಿತ. ನಮ್ಮ ಸರ್ಕಾರದ ವಿರುದ್ಧ ಮಾತನಾಡಲು ಇವರಿಗೆ ಏನೂ ಇಲ್ಲ. 5 ಗ್ಯಾರಂಟಿಗಳು ಜಾರಿ ಮಾಡು-ತ್ತಿರುವುದರಿಂದ ಭಯ ಉಂಟಾಗಿದೆ. ರಾಜಕೀಯ ಅಭದ್ರತೆಯೂ ಕಾಡಿದೆ. ಆದ್ದರಿಂದ ದಾರಿ ತಪ್ಪಿಸುವ ಕೆಲಸ ಮಾಡಿದ್ದಾರೆ’ ಎಂದು ಹರಿಹಾಯ್ದರು.

ವರ್ಗಾವಣೆಯಲ್ಲಿ ತಲೆಹಾಕಿಲ್ಲ: ಎಚ್‌ಡಿಕೆ

‘ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ 14 ತಿಂಗಳ ಅವಧಿಯಲ್ಲಿ ಒಂದೇ ಒಂದು ವರ್ಗಾವಣೆಗೆ ಹಣ ತೆಗೆದುಕೊಂಡಿದ್ದೆ ಎಂಬುದನ್ನು ಸಾಬೀತು ಮಾಡಿದರೆ ರಾಜಕೀಯ ನಿವೃತ್ತಿ ಪಡೆಯುತ್ತೇನೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

‘2018 ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ವಿವಿಧ ಹುದ್ದೆಗಳಿಗೆ ಕೋಟಿಗಟ್ಟಲೆ ದರ ನಿಗದಿ ಆಗಿತ್ತು ಎಂದು ‘ಪ್ರಜಾವಾಣಿ’ಯಲ್ಲೇ ಪ್ರಕಟವಾಗಿದೆ’ ಎಂದು ಕೃಷಿ ಸಚಿವ ಎನ್‌.ಚಲುವರಾಯ ಸ್ವಾಮಿ ಪತ್ರಿಕೆ ಪ್ರದರ್ಶಿಸಿ ಆರೋಪಿಸಿದರು. ಆರೋಪ ಸಾಬೀತುಪಡಿಸುವಂತೆ ಕುಮಾರಸ್ವಾಮಿ ಸವಾಲು ಹಾಕಿದರು.

‘ನಾನು ಮುಖ್ಯಮಂತ್ರಿ ಆಗಿದ್ದಾಗ ಕಾಂಗ್ರೆಸ್‌ನವರೇ ಪ್ರಮುಖ ಖಾತೆಗಳನ್ನು ಹೊಂದಿದ್ದರು. ಆ ಎಲ್ಲ ಹಿರಿಯರು ಇಲ್ಲಿಯೇ ಕುಳಿತಿದ್ದಾರೆ. ವರ್ಗಾವಣೆ ಇತ್ಯಾದಿ ವಿಚಾರಗಳಲ್ಲಿ ನಾನು ತಲೆ ಹಾಕುತ್ತಿರಲಿಲ್ಲ ಮತ್ತು ನನಗೆ ಪೂರ್ಣ ಸ್ವಾತಂತ್ರ್ಯವೂ ಇರಲಿಲ್ಲ’ ಎಂದು ಹೇಳಿದರು.

11ನೇ ಪುಟ ನೋಡಿ

ಕಲ್ಲುಗಣಿ ಅಕ್ರಮ ಶಾಸಕ ಮುನಿರತ್ನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಲಹಂಕ ತಾಲ್ಲೂಕಿನ ಹುಣಸಮಾರನಹಳ್ಳಿ ಹಾಗೂ ಸೊಣ್ಣಪ್ಪನಹಳ್ಳಿ ಗ್ರಾಮದ ಜಮೀನುಗಳಲ್ಲಿ ಬಂಡೆಗಳನ್ನು ಅಕ್ರಮವಾಗಿ ಸ್ಫೋಟಿಸಿ ಕಲ್ಲು ಗಣಿಗಾರಿಕೆ ನಡೆಸಿರುವ ಆರೋಪದಡಿ ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಶಾಸಕ ಎನ್‌. ಮುನಿರತ್ನ ಸೇರಿ ನಾಲ್ವರ ವಿರುದ್ಧ ಚಿಕ್ಕಜಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.



ಮುನಿರತ್ನ

‘ಯಲಹಂಕ ತಹಶೀಲ್ದಾರ್ ಅನಿಲ್ ಅರೋಳಿಕರ್ ಅವರು ಅಕ್ರಮದ ಬಗ್ಗೆ ದೂರು ನೀಡಿದ್ದಾರೆ. ಜಮೀನು ಮಾಲೀಕರಾಗಿರುವ ಆನಂದ್, ವಿ. ಗಣೇಶ್, ರಾಧಮ್ಮ ಹಾಗೂ ಶಾಸಕ ಎನ್‌. ಮುನಿರತ್ನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

7ನೇ ಪುಟ ನೋಡಿ

‘ಗೃಹ ಲಕ್ಷ್ಮಿ’ಗೆ ಆಧಾರ್ ಕಡ್ಡಾಯವಲ್ಲ

ಬೆಂಗಳೂರು: ಮನೆಯ ಯಜಮಾನಿಯ ಬ್ಯಾಂಕ್ ಖಾತೆಗೆ ಆಧಾರ್ ಜೋಡಣೆ-ಯಾಗದಿದ್ದರೂ ‘ಗೃಹ ಲಕ್ಷ್ಮಿ’ ಯೋಜನೆಯಡಿ ತಿಂಗಳಿಗೆ ₹2,000 ನೆರವು ನೀಡಲು ಗುರುವಾರ ನಡೆದ ಸಂಪುಟ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ.

ಯೋಜನೆಯ ವ್ಯಾಪ್ತಿಗೆ ಬರುವ ಸುಮಾರು 22 ಲಕ್ಷ ಮಹಿಳೆಯರ ಬ್ಯಾಂಕ್ ಖಾತೆಗಳಿಗೆ ಆಧಾರ್ ಜೋಡಣೆಯಾಗಿಲ್ಲ ಎಂಬ ಮಾಹಿತಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಲಭಿಸಿತ್ತು. ಈ ಮಹಿಳೆಯರಿಗೂ ಯೋಜನೆಯ ಸೌಲಭ್ಯವನ್ನು ಒದಗಿಸುವ ಪ್ರಸ್ತಾವಕ್ಕೆ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಭಾರತಕ್ಕೆ 3 ಚಿನ್ನ

ಬ್ಯಾಂಕಾಕ್ (ಪಿಟಿಐ): ಭಾರತದ ಅಥ್ಲೀಟುಗಳು ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಗುರುವಾರ ಸ್ಫೂರ್ತಿಯುತ ಪ್ರದರ್ಶನ ನೀಡಿ ಮೂರು ಚಿನ್ನ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡರು. 12

ಚಿನಕುರಳಿ

ಪ್ರಕಾಶ್ ಶೆಟ್ಟಿ

50 YEARS OF TRUST
AYURVEDIC KAYAM® TABLET
ಮಲಬದ್ಧತೆಗೆ ಖಾಯಂ ವಿದಾಯ

ಖಾಯಂ ಟ್ಯಾಬ್ಲೆಟ್
ಮಲಬದ್ಧತೆ ಮತ್ತು ಇತರ ಸಂಬಂಧಿತ ಸಮಸ್ಯೆಗಳಾದ ಆ್ಯಸಿಡಿಟಿ, ಗ್ಯಾಸ್, ಅಜೀರ್ಣ, ತಲೆನೋವು, ಬಾಯಿ ಹುಣ್ಣು, ಹುಳಿ ತೇಗು, ಹಸಿವಿನ ಕೊರತೆ, ಹೊಟ್ಟೆ ಮತ್ತು ಎದೆಯಲ್ಲಿ ಉರಿ, ಶಕ್ತಿಯ ಕೊರತೆ, ಚರ್ಮ ನೋವು ಇತ್ಯಾದಿಗಳಿಂದ ಪರಿಹಾರವನ್ನು ನೀಡುತ್ತದೆ. ರಾತ್ರಿ ಒಂದು ಖಾಯಂ ಟ್ಯಾಬ್ಲೆಟ್ ತೆಗೆದುಕೊಳ್ಳುವುದರಿಂದ ಬೆಳಿಗ್ಗೆ ಮಲಬದ್ಧತೆಯಿಂದ ಮುಕ್ತರಾಗಲು ನಿಮಗೆ ಸಹಾಯ ಮಾಡುತ್ತದೆ. ಆಯುರ್ವೇದ ಪದಾರ್ಥಗಳು ಮತ್ತು ಗಿಡಮೂಲಿಕೆಗಳಿಂದ ತಯಾರಿಸಲ್ಪಟ್ಟ ಖಾಯಂ ಮಾತ್ರೆಗಳು ಸಂಪೂರ್ಣವಾಗಿ ನೈಸರ್ಗಿಕ ಮತ್ತು ಹಾನಿರಹಿತವಾಗಿವೆ. ಮಲಬದ್ಧತೆಗೆ ವಿದಾಯ ಹೇಳುವ ಮೂಲಕ ನಿಮ್ಮ ಶಕ್ತಿಯನ್ನು ಉಳಿಸಿಕೊಳ್ಳಿ.
E-Mail : contact@kayamchurna.com
ಎಲ್ಲ ಮೆಡಿಕಲ್ ಮತ್ತು ಆಯುರ್ವೇದಿಕ್ ಮಳಿಗೆಗಳಲ್ಲಿ ಲಭ್ಯ | Buy online : AVAILABLE NOW amazon | 1mg

50+ YEARS Backed by trust and care
LUPIN DIAGNOSTICS
Good health starts here

ಫ್ರ್ಯಾಂಚೈಸೀ ಅವಕಾಶ ಇಲ್ಲಿದೆ,
ನೀವು ಅದನ್ನು ಕಳೆದುಕೊಳ್ಳಲು ಬಯಸುವುದಿಲ್ಲ
ಲುಪಿಮಿತ್ರಾ ಆಗಿರಿ
ಫ್ರಾಂಚೈಸಿ ಪಾಲುದಾರರಾಗಿ ಭಾರತದ ಪ್ರಮುಖ ಡಯಾಗ್ನೋಸ್ಟಿಕ್ಸ್ ಸರಪಳಿಯನ್ನು ಸೇರಿ
ಲುಪಿನ್ ಡಯಾಗ್ನೋಸ್ಟಿಕ್ಸ್‌ನ 4 ಕಂಬಗಳು
Best in class customer experience | Digital first with an analytics powerhouse | Science led proposition for doctors | Quality leader across the value chain
ಲುಪಿನ್ ಡಯಾಗ್ನೋಸ್ಟಿಕ್ಸ್ ಜೊತೆ ಏಕೆ ಪಾಲುದಾರರಾಗಬೇಕು?
- ಅತ್ಯುತ್ತಮ ಪ್ಯಾಥಾಲಜಿ ಲ್ಯಾಬ್ ವಿಜೇತರು: ದ ಎಕನಾಮಿಕ್ ಟೈಮ್ಸ್, ಹೆಲ್ತ್ ಕೇರ್ ಅವಾರ್ಡ್ಸ್-2022
- 500 + **ಕಲೆಕ್ಷನ್** ಸೆಂಟರ್ ಹಾಗೂ 30 + **ಲ್ಯಾಬೋರೇಟರೀಸ್** ಮೂಲಕ ಸೇವೆ ಸಲ್ಲಿಸುತ್ತಿದ್ದಾರೆ.
- 50 + **ವರ್ಷಗಳಿಗಿಂತ** ಹೆಚ್ಚು ಆರೋಗ್ಯ ವೃತ್ತಿಪರರು ನಂಬಿರುವ ಬ್ರ್ಯಾಂಡ್
- ನಮ್ಮ ಪಾಲುದಾರರಿಗೆ ಆಕರ್ಷಕ ಬಹುಮಾನ ಹಾಗೂ ಪ್ರೋತ್ಸಾಹಕ ಮಾದರಿ
- ನಾವಿ ಮುಂಬೈನಲ್ಲಿ 45000 ಚದರ ಅಡಿ ನ್ಯಾಷನಲ್ ರೆಫರೆನ್ಸ್ ಲ್ಯಾಬೋರೇಟರಿ ಹಾಗು 2500+ ಪರೀಕ್ಷೆ ಪರಿವಿಡಿ

HEALTH PACKAGES - OUR OFFERING

Package	Tests	Price	Parameters
LUPIKAVACH DIABETIC SCREEN	• FBS (1) • HbA1c (2) • Urine Routine (17) • Fasting Glucose Urine (1)	Rs 340/-	21 Parameters
LUPIKAVACH FEVER CHECK GOLD	Haemogram (CBC + ESR) (20) • Dengue NS1 Rapid (1) • Dengue Antibody (IgG, IgM) Rapid (2) • Typhidot IgM (1) • CRP (1) • Creatinine (1) • SGPT (1) • PS for Malarial Parasite (1) • Urine Routine (17) FREE with this package: IL6 (1) & COVID RT PCR (1)	Rs 1090/-	47 Parameters
LUPIKAVACH LILY	• Complete Blood Count (CBC) (19) • FBS (1) • HbA1c (2) • Kidney Function Test (8) • Lipid Profile (7) • Liver Function Test (6) • Thyroid Total Panel (T3, T4 & TSH) (3) • Urine Routine (17)	Rs 1550/-	63 Parameters
LUPIKAVACH SAFFRON	• FBS (1) • HbA1c (2) • Haemogram (CBC+ESR) (20) • Lipid Profile (7) • KFT Gold (13) • LFT Gold (10) • Urine Routine (17) • Thyroid Free Panel (FT3, FT4 & TSH) (3) • Vitamin B12 (1) • Vit D (25 OH) (1)	Rs 3050/-	75 Parameters

And many more...
customerconnect@lupindiagnostics.com
Follow us
7030 300 400

‘ಬಿಡಿಎ ಅಕ್ರಮ ತನಿಖೆಗೆ ಕಾರ್ಯಪಡೆ’

ಬೆಂಗಳೂರು: ‘ಬಿಡಿಎ ವ್ಯಾಪ್ತಿಯಲ್ಲಿ ನಡೆದಿರುವ ಅಕ್ರಮಗಳ ತನಿಖೆಗೆ ಕಾರ್ಯಪಡೆ (ಟಾಸ್ಕ್ ಫೋರ್ಸ್) ರಚಿಸುವ ಬಗ್ಗೆ ಶೀಘ್ರದಲ್ಲಿ ತೀರ್ಮಾನಿಸಲಾಗುವುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಡಿಎ ಸ್ವಾಮ್ಯದ ಸ್ವತ್ತನ್ನು ಮೆಟ್ರೊ ಕಾಮಗಾರಿಗೆ ಭೂಸ್ವಾಧೀನ ಮಾಡಿರುವ ಜಾಗಕ್ಕೆ ಖಾಸಗಿಯವರಿಗೆ ₹ 24 ಕೋಟಿ ಪರಿಹಾರ ನೀಡಿರುವ ಬಗ್ಗೆ ವಿಧಾನ ಪರಿಷತ್‌ನಲ್ಲಿ ಜೆಡಿಎಸ್‌ನ ಮರಿತಿಬ್ಬೇಗೌಡ ಪ್ರಸ್ತಾಪಿಸಿದರು.

ಬಿಬಿಎಂಪಿ ವ್ಯಾಪ್ತಿಯ ಅಕ್ರಮಗಳ ತನಿಖೆಗೆ ಐವರು ದಕ್ಷ ಅಧಿಕಾರಿಗಳ ಕಾರ್ಯಪಡೆ ರಚಿಸಿದಂತೆ, ಬಿಡಿಎ ವ್ಯಾಪ್ತಿಗೂ ವಿಸ್ತರಿಸಿ ಬೊಮ್ಮನಹಳ್ಳಿ ಕ್ಷೇತ್ರ ವ್ಯಾಪ್ತಿಯ ಅಕ್ರಮಗಳ ತನಿಖೆ ಮಾಡಬೇಕು ಎಂದೂ ಆಗ್ರಹಿಸಿದರು.

‘ಸರ್ಕಾರಿ ಜಮೀನಿಗೆ ಖಾಸಗಿಯವರಿಗೆ ಪರಿಹಾರ ನೀಡಿದ್ದರೆ ಖಂಡಿತವಾಗಿ ತನಿಖೆ ಮಾಡಲಾಗುವುದು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಶಿವಕುಮಾರ್ ಉತ್ತರಿಸಿದರು. ಬಿಡಿಎ ನಿವೇಶನ ಹಂಚಿಕೆಯಲ್ಲಿ ಅನ್ಯಾಯ ಆಗಿರುವ ಬಗ್ಗೆ ಜೆಡಿಎಸ್‌ನ ಟಿ.ಎ. ಶರವಣ ಕೇಳಿದ ಪ್ರಶ್ನೆಗೆ ಅವರು, ‘ಯಾರೇ ತಪ್ಪು ಮಾಡಿದ್ದರೂ ಬಹಿರಂಗಪಡಿಸೋಣ’ ಎಂದರು.

ನೈಋತ್ಯ ರೈಲ್ವೆ

ರೈಲುಗಳ ಮೂಲಕ ಪಾರ್ಸೆಲ್ ಬುಕ್ ಮಾಡಲು ಇಚ್ಛಿಸುವ ಗ್ರಾಹಕರಿಗೆ ಮನೆ ಬಾಗಿಲಿಗೆ ಸೇವೆಯನ್ನು ಒದಗಿಸುವ ಸೇವೆಗಾಗಿ ಆಸಕ್ತಿಯ ಅಭಿವ್ಯಕ್ತತೆ

ಅಧಿಸೂಚನೆ ಸಂ.: B/C 441/Comprehensive Parcel Booking Service/04/23

ದಿನಾಂಕ: 07.06.2023

1) ನೈಋತ್ಯ ರೈಲ್ವೆ, ಬೆಂಗಳೂರು ವಿಭಾಗವು ... 2) ... 3) ಸಂಪೂರ್ಣ "ಇಒಐ" ದಸ್ತಾವೇಜನ್ನು swr.indianrailways.gov.in ನಿಂದ ಡೌನ್‌ಲೋಡ್ ಮಾಡಬಹುದು ... ವಾಣಿಜ್ಯ ವ್ಯವಸ್ಥಾಪಕರ ಕಚೇರಿ, ವಿಭಾಗೀಯ ಕಚೇರಿ, ಬೆಂಗಳೂರು – 560 023 ... 4) ... ದಿನಾಂಕ: 21.07.2023 ರ 15:00 ಗಂಟೆಗಳವರೆಗೆ ...

ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

PUB/239/AAD/PRB/SWR/2023-24

S.W.Railways | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಟಿಎನ್–ಟೆಂಡರ್–13–2023 ದಿನಾಂಕ: 08–07–2023

ಭಾರತದ ರಾಷ್ಟ್ರಪತಿಗಳ ಪರವಾಗಿ ... ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
...	ರೂ. 6,94,94,284.02

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 31–07–2023 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

S.W.Railways | SWRRLY | SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಟಿಎನ್–ಟೆಂಡರ್–08–2023–ಆರ್‌ಟಿ ದಿನಾಂಕ: 06–07–2023

ಕೆಲಸದ ಹೆಸರು	ಅಂದಾಜು ಮೌಲ್ಯ
...	ರೂ. 2,92,80,480.24

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21–08–2023 ರಂದು 11:00 ಗಂಟೆಯವರೆಗೆ

ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.

S.W.Railways | SWRRLY | SWRRLY

ಕೇಂದ್ರೀಯ ವಿದ್ಯಾಲಯ ನಂ.1

ನಂ.1, ವಾಯುಪಡೆ ನಿಲ್ದಾಣ, ಜಾಲಹಳ್ಳಿ ಪಶ್ಚಿಮ, ಬೆಂಗಳೂರು–560015

ದೂರವಾಣಿ: (ಪ್ರಾಂಶು) 080–28389852, (ಕಛೇರಿ) 080–28388422

email: kv1jalahalli@gmail.com website: www.no1jalahalli.kvs.ac.in

ಎನ್‌ಸಿಇಆರ್‌ಟಿ ನಿಗದಿಪಡಿಸಿದ ವಿದ್ಯಾರ್ಹತೆಯ ಪ್ರಕಾರ ಗುತ್ತಿಗೆ ಆಧಾರದ ಮೇಲೆ ... 21.07.2023 ರಂದು ವಿದ್ಯಾಲಯ ಆವರಣದಲ್ಲಿ ವಾಕ್–ಇನ್ ಸಂದರ್ಶನ ನಡೆಯಲಿದೆ.

ಅಗತ್ಯವಿರುವ ವಿದ್ಯಾರ್ಹತೆ: ಮಾನ್ಯತೆ ಪಡೆದಿರುವ 10ನೇ ಬೋರ್ಡ್‌ನಿಂದ ಅಥವಾ ಸಮಾನ ವಿದ್ಯಾರ್ಹತೆ ... NIPCCD, NSDC ಅಥವಾ ... (ಕನಿಷ್ಠ 18 ವರ್ಷ ವಯಸ್ಸು)

ವರದಿ ಸಲ್ಲಿಸಲಿದೆ ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿ

ಟರ್ಫ್ ಕ್ಲಬ್ ಸ್ಥಳಾಂತರಕ್ಕೆ ಶಿಫಾರಸು?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿರುವ ಕ್ಲಬ್‌ಗಳ ಕಾರ್ಯವೈಖರಿ ಮತ್ತು ಚಟುವಟಿಕೆಗಳನ್ನು ಪರಿಶೀಲಿಸಲು ರಚಿಸಲಾಗಿರುವ ವಿಧಾನಪರಿಷತ್ತಿನ ವಿಶೇಷ ಸದನ ಸಮಿತಿಯು ‘ಬೆಂಗಳೂರು ಟರ್ಫ್ ಕ್ಲಬ್’ ಅನ್ನು ಶಾಶ್ವತವಾಗಿ ಸ್ಥಳಾಂತರಿಸುವಂತೆ ಶಿಫಾರಸು ಮಾಡಲು ಮುಂದಾಗಿದೆ.

ಬಿಜೆಪಿಯ ಎನ್. ರವಿಕುಮಾರ್ ನೇತೃತ್ವದ ಸಮಿತಿಯು ಮುಂದಿನ ವಿಧಾನಮಂಡಲ ಅಧಿವೇಶನಕ್ಕೂ ಮೊದಲು ವರದಿ ಸಿದ್ಧಪಡಿಸಲು ತೀರ್ಮಾನಿಸಿದೆ. ಈ ಸಮಿತಿಯು ನಗರದ ಹೃದಯಭಾಗದಲ್ಲಿರುವ ಟರ್ಫ್ ಕ್ಲಬ್ ಅನ್ನು ನಗರದ ಹೊರವಲಯದಲ್ಲಿ ಚಿಕ್ಕಜಾಲ ಬಳಿ ಒದಗಿಸಿದ ಜಮೀನಿಗೆ ಸ್ಥಳಾಂತರಿಸುವಂತೆ ಶಿಫಾರಸು ಮಾಡಲು ನಿರ್ಧರಿಸಿದೆ.

ವಿಧಾನ ಪರಿಷತ್ತಿನಲ್ಲಿ ಹಲವು ಸದಸ್ಯರು ಪ್ರಸ್ತಾಪಿಸಿದ ವಿಷಯಕ್ಕೆ ಪ್ರತಿಕ್ರಿಯಿಸಿದ ರವಿಕುಮಾರ್, ‘ವರದಿ ಅಂತಿಮಗೊಳಿಸಲು ಇನ್ನೂ ಎರಡು ಸಭೆಗಳನ್ನು ನಡೆಸಬೇಕಿದೆ. ಮುಂದಿನ ಅಧಿವೇಶನದ ವೇಳೆಗೆ ವರದಿಯನ್ನು ಸದನಕ್ಕೆ ಸಲ್ಲಿಸಲಾಗುವುದು’ ಎಂದರು.

ವಸ್ತ್ರಸಂಹಿತೆ ಮತ್ತು ಇತರ ನಿರ್ಬಂಧಗಳನ್ನು ವಿಧಿಸಿರುವ ಕ್ಲಬ್‌ಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ಮತ್ತು ಅಂತಹ ನಿರ್ಬಂಧಗಳನ್ನು ತೆಗೆದುಹಾಕುವ ಬಗ್ಗೆಯೂ ಸಮಿತಿ ಚರ್ಚೆ ನಡೆಸಿದೆ.

ಇದೇ ವೇಳೆ ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ‘ಬೆಂಗಳೂರಿನ ಎಲ್ಲ ಕ್ಲಬ್‌ಗಳ ಕಾರ್ಯವೈಖರಿ ಬಗ್ಗೆ ವರದಿ ಪಡೆಯುತ್ತೇನೆ’ ಎಂದರು.

ಬಸವನಗುಡಿ ವಿಧಾನಸಭಾ ಕ್ಷೇತ್ರದ ಬಿಬಿಎಂಪಿ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣ ನಿರ್ಮಾಣಕ್ಕೆ ಒಪ್ಪಂದ ಮಾಡಿಕೊಂಡಿರುವ ಎನ್‌ಆರ್ ಕಾಲೊನಿ ಸ್ಪೋರ್ಟ್ಸ್ ಕ್ಲಬ್, ಈ ಕ್ರೀಡಾಂಗಣ ಬಳಕೆಗೆ ಶುಲ್ಕ ನಿಗದಿ ಮಾಡಿರುವುದಕ್ಕೆ ಯು.ಬಿ. ವೆಂಕಟೇಶ್ ಆಕ್ಷೇಪಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಇದು ನನ್ನ ಗಮನಕ್ಕೂ ಬಂದಿದೆ. ವಿದ್ಯುತ್ ಮತ್ತು ನೀರಿನ ಬಿಲ್ ಪಾವತಿಸಲು ಶುಲ್ಕ ನಿಗದಿಪಡಿಸಿರುವುದಾಗಿ ಹೇಳುತ್ತಿದ್ದಾರೆ. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಕ್ಲಬ್‌ಗಳ ವರದಿ ಪಡೆದು ಕ್ರಮ ತೆಗೆದುಕೊಳ್ಳಲಾಗುವುದು’ ಎಂದರು.

ಅತಿ ಎತ್ತರದ ಮೆಟ್ರೊ ನಿಲ್ದಾಣ ಮಾದರಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅತಿ ಎತ್ತರದ ಇಂಟರ್‌ಚೇಂಜ್ ಮೆಟ್ರೊ ನಿಲ್ದಾಣ ಜಯದೇವದಲ್ಲಿ ನಿರ್ಮಾಣಗೊಳ್ಳಲಿದೆ. ಇದರ ಮಾದರಿಯನ್ನು ಶಾಂತಿನಗರದಲ್ಲಿರುವ ಬಿಎಂಆರ್‌ಸಿಎಲ್ ಕಚೇರಿಯಲ್ಲಿ ಪ್ರದರ್ಶನಕ್ಕಿಡಲಾಗಿದೆ.

ಯೋಜನೆಯ ಹಂತ -2ರ ಅಡಿಯಲ್ಲಿ ಹಳದಿ ಮಾರ್ಗ ಅಂದರೆ ಆರ್.ವಿ. ರಸ್ತೆ–ಬೊಮ್ಮಸಂದ್ರ ರಸ್ತೆ ಮತ್ತು ಗುಲಾಬಿ ಮಾರ್ಗ ಅಂದರೆ ಕಾಳೇನ ಅಗ್ರಹಾರ–ನಾಗವಾರ ರಸ್ತೆಗಳು ಇಲ್ಲಿ ಸಂಯೋಜನೆಗೊಳ್ಳಲಿವೆ. ಈ ಯೋಜನೆಯ ಪ್ರಕಾರ ಅಂಡರ್‌ಪಾಸ್ ರಸ್ತೆ ಅದರ ಮೇಲೆ ಎತ್ತರಿಸಿದ ಇನ್ನೊಂದು ರಸ್ತೆ, ಅನಂತರ ಹಳದಿ ಮೆಟ್ರೊ ಮಾರ್ಗ, ನೆಲಮಟ್ಟದ ರಸ್ತೆ, ಸಮೂಹ, ಗುಲಾಬಿ ಮೆಟ್ರೊ ಮಾರ್ಗ ಹೀಗೆ 6 ಹಂತದ ವಿಶಿಷ್ಟ ಮೆಟ್ರೊ ನಿಲ್ದಾಣ ಇದಾಗಲಿದೆ.

ಅತಿ ಎತ್ತರದ ಜಯದೇವ ಇಂಟರ್‌ಚೇಂಜ್ ಮೆಟ್ರೊ ನಿಲ್ದಾಣದ ಮಾದರಿ

ಮೆಟ್ರೊ ರೈಲು ಮತ್ತು ರಸ್ತೆ ಒಳಗೊಂಡಿರುವ ಜಯದೇವ ಮೆಟ್ರೊ ನಿಲ್ದಾಣವು ಒಂದೇ ಪಿಲ್ಲರ್ ರೋಡ್ ಕಂ ರೇಲ್ ಸೇತುವೆ ಹೊಂದಿರುತ್ತದೆ. ಈ ರಸ್ತೆಯಲ್ಲಿ ಇರುವ ವಾಹನ ದಟ್ಟಣೆ ಕಡಿಮೆ ಮಾಡಲು ಇದು ನೆರವಾಗಲಿದೆ. ಸಿಗ್ನಲ್‌ರಹಿತ ಸಂಚಾರಕ್ಕೆ ಅನುಕೂಲ ಆಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮುಂಬೈ, ಜೈಪುರ, ನಾಗ್ಪುರದಲ್ಲಿ ಈ ರೀತಿಯ ನಿಲ್ದಾಣಗಳಿದ್ದು, ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿಗೆ ನಿರ್ಮಾಣಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದಾರೆ.

ಭಾವಪೂರ್ಣ ಶ್ರದ್ಧಾಂಜಲಿ

ಜನನ: 02.09.1940 | ನಿಧನ: 13.07.2023

ಬಿ.ಸಿ. ನಾರಾಯಣ ರೆಡ್ಡಿ

ನಿವೃತ್ತ ಎಕ್ಸಿಕ್ಯೂಟಿವ್ ಎಂಜಿನಿಯರ್, ಪಿಡಬ್ಲ್ಯುಡಿ

ಅಂತ್ಯಕ್ರಿಯೆ: ಮಧ್ಯಾಹ್ನ 2.00 ಗಂಟೆಗೆ, ಸ್ಥಳ: ಬೆಳ್ಳಂದೂರು (ಸರ್ಕಾರಿ ಶಾಲೆ ಹತ್ತಿರ)

ನಂ. 5, 7ನೇ ಮುಖ್ಯರಸ್ತೆ, ಶುಭ ಎನ್‌ಕ್ಲೇವ್, ಹರಲೂರು ರಸ್ತೆ, ಬೆಂಗಳೂರು

ದು:ಖತಪ್ತರು: ಕುಟುಂಬ ವರ್ಗದವರು

ಬಾಲನಟಿ ವಂಶಿಕಾ ಹೆಸರಿನಲ್ಲಿ ವಂಚನೆ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ, ನಿರ್ದೇಶಕ ಮಾಸ್ಟರ್ ಆನಂದ್ ಅವರ ಪುತ್ರಿಯಾದ ಬಾಲನಟಿ ವಂಶಿಕಾ ಹೆಸರಿನಲ್ಲಿ ಜನರನ್ನು ವಂಚಿಸಿರುವ ಆರೋಪದಡಿ ನಿಶಾ ನರಸಪ್ಪ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ವಂಶಿಕಾ ತಾಯಿ ಯಶಸ್ವಿನಿ ಅವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ನಿಶಾ ನರಸಪ್ಪ ವಿರುದ್ಧ ಪ್ರಕರಣ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೂರುದಾರ ಯಶಸ್ವಿನಿ ಅವರಿಗೆ ಇನ್‌ಸ್ಟಾಗ್ರಾಂ ಮೂಲಕ ಆರೋಪಿ ನಿಶಾ ಪರಿಚಯವಾಗಿತ್ತು. ಕಾರ್ಯಕ್ರಮವೊಂದಕ್ಕೆ ತಾಯಿ–ಮಗಳನ್ನು ಆರೋಪಿ ಆಹ್ವಾನಿಸಿದ್ದರು. ಇದರಿಂದ ಮತ್ತಷ್ಟು ಹತ್ತಿರವಾಗಿದ್ದರು.’

‘ವಂಶಿಕಾ ಹೆಸರು ಹಾಗೂ ಫೋಟೊಗಳನ್ನು ದುರ್ಬಳಕೆ ಮಾಡಿಕೊಂಡಿದ್ದ ಆರೋಪಿ, ‘ಮಕ್ಕಳಿಗೆ ಟಿ.ವಿ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಅವಕಾಶ ಕೊಡಿಸುತ್ತೇನೆ’ ಎಂದು ಜಾಹೀರಾತು ನೀಡುತ್ತಿದ್ದರು. ಫೋಟೊ ಶೂಟ್ ಹೆಸರಿನಲ್ಲಿ ಪೋಷಕರಿಂದ ಹಣ ಪಡೆಯುತ್ತಿದ್ದರು. ನಂತರ, ಯಾವುದೇ ಅವಕಾಶ ಕೊಡಿಸದೇ ಜನರನ್ನು ವಂಚಿಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಯಶಸ್ವಿನಿ ತಮ್ಮ ಮಗಳ ಹೆಸರಿನಲ್ಲಿ ವಂಚನೆಯಾಗುತ್ತಿರುವುದರಿಂದ ಠಾಣೆಗೆ ಬಂದು ದೂರು ನೀಡಿದ್ದಾರೆ. ಆರೋಪಿ ನಿಶಾ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಕೋರಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಪ್ರತಿದೂರಿನಿಂದ ಎನ್‌ಸಿಆರ್: ‘ಯಶಸ್ವಿನಿ ಹಾಗೂ ಇತರರ ವಿರುದ್ಧ ಪ್ರತಿ ದೂರು ನೀಡಿರುವ ನಿಶಾ, ‘ನನ್ನ ಮೇಲೆ ಹಲ್ಲೆ ಮಾಡಲಾಗಿದೆ’ ಎಂದು ದೂರಿದ್ದಾರೆ. ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಕಂಪ್ಯೂಟರ್ ಸಾಕ್ಷರತಾ ಸಮಿತಿಯಿಂದ ತರಬೇತಿ

ಬೆಂಗಳೂರು: ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿಯು ಆಧುನಿಕ ತಂತ್ರಜ್ಞಾನ ತರಬೇತಿ ರಾಜ್ಯಾದ್ಯಂತ ಹಮ್ಮಿಕೊಂಡಿದೆ.

‘ಎರಡು ದಶಕಗಳಿಂದ ಗಡಿನಾಡು ಹಾಗೂ ರಾಜ್ಯದ ನಾನಾ ಹಳ್ಳಿಗಳಲ್ಲಿ ತಂತ್ರಜ್ಞಾನ ತರಬೇತಿ ನಡೆಯುತ್ತಿದೆ. ಕಂಪ್ಯೂಟರ್ ಹಾಗೂ ತಾಂತ್ರಿಕ ಶಿಕ್ಷಣವು ಪ್ರತಿಯೊಬ್ಬರಿಗೂ ತಲುಪಬೇಕು ಎಂಬ ಧ್ಯೇಯದೊಂದಿಗೆ ಸಮಿತಿ ಕಾರ್ಯೋನ್ಮುಖವಾಗಿದೆ. ಸಮಿತಿಯು ಸರ್ಕಾರದಿಂದ ಮಾನ್ಯತೆ ಪಡೆದಿದ್ದು, ಕೌಶಲ ತರಬೇತಿಗೆ ಸರ್ಕಾರದ ಪಾಲುದಾರ ಸಂಸ್ಥೆಯಾಗಿ ವಿವಿಧ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ. ಉದ್ಯೋಗ ಸೃಷ್ಟಿಸುವ ಉದ್ದೇಶದೊಂದಿಗೆ ಡಿಜಿಟಲ್ ಇಂಡಿಯಾ, ಕೌಶಲ ತರಬೇತಿ, ನಲ್ಮ್ ಯೋಜನೆ, ಪ್ರಧಾನಮಂತ್ರಿ ಕೌಶಲವಿಕಾಸ ಯೋಜನೆ ಅಡಿಯಲ್ಲಿ, ದೇಶದ ಪ್ರಗತಿಯ ಮುಖ್ಯವಾಹಿನಿಗೆ ತರಲು ಶ್ರಮಿಸುತ್ತಿದೆ’ ಎಂದು ಸಮಿತಿ ಹೇಳಿದೆ.

‘ಆಸಕ್ತರು ತಮ್ಮ ಊರಿನ ರಾಷ್ಟ್ರೀಯ ಕಂಪ್ಯೂಟರ್ ಸಾಕ್ಷರತಾ ಸಮಿತಿ ಅಥವಾ ರಾಷ್ಟ್ರೀಯ ಕೌಶಲ ಮಿಷನ್ ಕೇಂದ್ರಗಳನ್ನು ಸಂಪರ್ಕಿಸಬಹುದು. ಇದರ ಮುಖ್ಯ ಕಚೇರಿ ಬೆಂಗಳೂರಿನ ಹೆಬ್ಬಾಳದಲ್ಲಿ, ನಿರ್ವಹಣಾ ಕಚೇರಿಯು ಮಂಗಳೂರು ಸಮೀಪದ ಬಿ.ಸಿ. ರಸ್ತೆಯಲ್ಲಿ ಹಾಗೂ ಕಾರ್ಖಾನೆಯಲ್ಲಿ ಕಾರ್ಪೊರೇಟ್ ಕಚೇರಿ ಹೊಂದಿದೆ’ ಎಂದು ತಿಳಿಸಲಾಗಿದೆ.

ಸಮಿತಿ ಜಾಲತಾಣ: www.thercss.com

ಸಮ್ಮೇಳನವನ್ನು ಎಂ.ಆರ್.ದೊರೆಸ್ವಾಮಿ ಉದ್ಘಾಟಿಸಿದರು. ಎಂ.ಎಲ್. ಮುಂಜಾಲ್, ಎಸ್.ಪಿ. ಸಿಂಗ್ ಹಾಗೂ ಪ್ರೊ.ಡಿ.ಜವಾಹರ್ ಇದ್ದಾರೆ.

‘ಪಠ್ಯಕ್ರಮದಲ್ಲಿ ಬದಲಾವಣೆ ಅಗತ್ಯ’

ಬೆಂಗಳೂರು: ‘ಉದ್ಯಮ ಮತ್ತು ಶೈಕ್ಷಣಿಕ ಸಂಸ್ಥೆಗಳು ಒಟ್ಟಾಗಿ ಕೆಲಸ ಮಾಡಲು ಪಠ್ಯಕ್ರಮ ಬದಲಿಸುವ ಅಗತ್ಯವಿದೆ’ ಎಂದು ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಎಂ.ಆರ್. ದೊರೆಸ್ವಾಮಿ ತಿಳಿಸಿದರು.

ವಿಶ್ವವಿದ್ಯಾಲಯ ನಗರದಲ್ಲಿ ಗುರುವಾರ ಹಮ್ಮಿಕೊಂಡ 21ನೇ ‘ಅಡ್ವಾನ್ಸ್ ಇನ್ ಮೆಕಾನಿಕಲ್ ಎಂಜಿನಿಯರಿಂಗ್’ ಕುರಿತ ಐಎಸ್‌ಎಂಇ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ, ಮಾತನಾಡಿದರು.

‘ಇಂತಹ ಸಮ್ಮೇಳನವನ್ನಕೇವಲ ಸಿದ್ಧಾಂತಕ್ಕೆ ಸೀಮಿತಗೊಳಿಸದೆ, ಉದ್ಯಮದ ಅಗತ್ಯಗಳ ಅನುಗುಣವಾಗಿ ಪಠ್ಯಕ್ರಮ ರೂಪಿಸುವಲ್ಲಿ ಕೈಗಾರಿಕೆಗಳ ಒಳಗೊಳ್ಳುವಿಕೆಯನ್ನು ಚರ್ಚಿಸಬೇಕು. ಐಐಎಸ್ಸಿ ಮತ್ತು ಐಐಟಿಯಂತಹ ಸಂಸ್ಥೆಗಳ ಸಹಾಯದಿಂದ ಸಂಶೋಧನೆ ಹಾಗೂ ಅಭಿವೃದ್ಧಿ ಯತ್ನ ಗಮನಹರಿಸಬೇಕು’ ಎಂದರು.

ವಿಶ್ವವಿದ್ಯಾಲಯದ ಸಮ ಕುಲಾಧಿಪತಿ ಪ್ರೊ.ಡಿ.ಜವಾಹರ್, ‘ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿಗಳಿಗೆ ಹಲವಾರು ಅವಕಾಶಗಳಿವೆ. ಪಿಇಎಸ್ ವಿಶ್ವವಿದ್ಯಾಲಯದಲ್ಲಿ ಉತ್ಕೃಷ್ಟತಾ ಕೇಂದ್ರ ತೆರೆಯಲು ಐಐಟಿ ಮದ್ರಾಸ್‌ಗೆ ಮುಕ್ತ ಅವಕಾಶವಿದೆ’ ಎಂದು ಹೇಳಿದರು.

ಉದ್ಯಮ ಕ್ಷೇತ್ರದ ತಜ್ಞರಾದ ಎಂ.ಎಲ್. ಮುಂಜಾಲ್ ಮತ್ತು ಎಸ್.ಪಿ. ಸಿಂಗ್ ಅವರು ಮೆಕ್ಯಾನಿಕಲ್ ಎಂಜಿನಿಯರಿಂಗ್ ಕ್ಷೇತ್ರದ ಬಗ್ಗೆ ತಮ್ಮ ಅನುಭವ ಹಂಚಿಕೊಂಡು, ‘ಯುವ ಎಂಜಿನಿಯರ್‌ಗಳು ಬದಲಾಗುತ್ತಿರುವ ಪರಿಸ್ಥಿತಿಯಲ್ಲಿ ಮೆಕ್ಯಾನಿಕಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಸವಾಲುಗಳನ್ನು ಎದುರಿಸಿ ಮುನ್ನಡೆಯಬೇಕು’ ಎಂದರು.

WEEKEND CORNER ಕ್ಲಾಸಿಫೈಡ್ಸ್

WANTED OPEN LAND
A public limited company needs open land for CNG outlet and charging stations on main roads only of Bangalore City in BBMP Limits for Rent / Lease for 20 years at Prime Location space require on road side min. 60 feet and above depth min. 70 feet and above.
9845582152

Agricultural FARMLAND
Divine Euphoria @ KANAKPURA
•Fully Developed •Swimming Pool •Clubhouse •Children Play area •Temple •Meditation Center •Birds & Animals •Adventure Sports
550+ CUSTOMERS | 55+ COTTAGES BUILT | ₹ 13 Lakhs
78921 54461 - 77605 74999
www.divineeuphoria.co.in

NARGUND COLLEGE OF PHYSIOTHERAPY
1st B Main, Dattatreyanagar, BSK 3rd Stage, Bangalore | admission@nargund.edu.in | www.nargund.edu.in
Admissions Open 2023-24
for: Bachelor of Physiotherapy
For Admissions, Call: 080 26720604, 7019425622 9886201746, 9739867524

Recognised by Govt. of Karnataka, Bangalore & The Indian Association of Physiotherapists. Affiliated to RGUHS, Karnataka, Bangalore.

NARGUND COLLEGE OF PHARMACY
2nd Main, Dattatreyanagar, BSK 3rd Stage, Bangalore | admission@nargund.edu.in | www.nargund.edu.in
Admissions Open 2023-24
for: D. Pharm, B. Pharm, Pharm .D and M. Pharm
For Admissions, Call: 080 26720604, 7019425622 9886201746, 9739867524

Affiliated to RGUHS, Karnataka, Bangalore. Recognised by Govt. of Karnataka, Bangalore. Approved by Pharmacy Council of India & All India Council for Technical Education, New Delhi.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080 - 45557160 /161/ 162/ 163/ 164 9845114560 / 9731810277/ 9886213331

REAL ESTATE BUYING

General

General

WANTED
DC CONVERSION/ Change of land use, Phodi Durasti, NOC,Approvals, Khata, RERA Work,Para Legal Services,Barton Centre MG Road, 9916310226/ 9353128035, vernadevelopers.com

Sites

Multiple Locations

4000-20000SFT Land Jayanagar, Basavangudi, Chamrajpet, J.P.Nagar, CBD Surrounding area. Purchase & JV, Verna Developers, MG Road, Bangalore, 9353128035/ 9620253180

Anjanapura

BDA SITES-WANTED For Immediate Settlement Anjanapura banshankari 6th stage Vishveshwaeaiah Lyt 20x30,30x40,40x60, 50x80 Contact: 9945610779

Agricultural Land Converted

Out-Station

SOUTH INDIAN Bank – Experience Next Generation Banking ... 5.30 ಎಕರೆಗಳು, ಬಿಡದಿ ನಿಲ್ದಾಣದ ಹತ್ತಿರ, ಮಂಗಳೂರು. 0.50 ಎಕರೆಗಳು, ಶಿರ್ವ, ಮಣಿಪಾಲ. ಸಂಪರ್ಕಿಸಿ: 9740866232

REAL ESTATE SELLING

Farm House/ Land/ Resorts

Tumkur Road

NAGENAHALLI VILLAGE Limit, 2Acre 11 Guntas, Good Road Approach, Fast Growing Area, Water Facility available, Very Good Location. Per acre 1 crore 20 Lakhs negotiable, Beautiful Greenery. Contact Shashi Industries, Rajajinagar, Bangalore- 080-23300154/ 23203685- Mahesh- 9880271771 Natesh- 9945170805

Industrial & Factory

Peenya

PEENYA 2ND stage, Doddaballapura, 10,000 to 25,000sqft Industrial land for sale. Clear titles. Call: 9380586105.

Sites

Yelahanka

30x40 Converted Plot @ 1,65,000/- 138/- per sq.ft, 90 minutes Journey from Yelahanka Ready for Registration 9343510635, 9010559539

BUSINESS

Business to Business

Business

BEST INVESTMENT For Petrol Bunk Lease Cum Sale or Partnership Kanakapura Road NH 209 Highway Built to Suit Restaurant 35000sft Call:9035963540

Finance

AVAILABLE LOANS Business, Personal, loan against property, MSME Overdraft, project loans, education loans. 7022573176/ 9421465654.

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

JOB OPPORTUNITIES

Multiple Vacancy

WANTED EXPERIENCED Male/ Female TALLY OPERATOR/ ACCOUNTANT/ OFFICE ASSISTANT for office in Vasant Nagar, Bangalore. Contact- 7411252299.

Part-Time Jobs

PART TIME Job SMS Typing Work Laptop, Seliphone, Simcard Company Provide (Fee 1099): 6395537135/ 6397285477

Teachers/ Professors

REQUIRED EXPERIENCED candidates handle Nursery Section with NTT & High school BPEd, Hindi (Academic Coordinator required for English Higher primary & High school) Contact: Jnanavahini Vidya Samsthe (JVS) #8, Beml layout, 8th main, Basaveswara Nagar, Bengaluru-79 Phone: 9343745526 E-mail: jvsschool@gmail.com

DH ಪ್ರಜಾವಾಣಿ Classifieds – Book Your Classifieds Ads Online Log in to dhclassifieds.com
Contact: 9845114560 : 9731810277 9901641752 : 9886213331 080 - 45557163 / 164

NCF First Time in KR PURAM Under Water Aquarium Tunnel
ರಾಷ್ಟ್ರೀಯ ಗ್ರಾಹಕರ ಮೇಳ NATIONAL CONSUMER FAIR
ITI Ground, Next to Hanging Bridge, KR Puram, Bengaluru
AQUA TUNNEL SHOW
VISIT TODAY | Daily : 4pm - 9pm | Call : 8904727123

PERSONAL

Change of Name

MD SUBHAN, Father/o 6493512P, HAV/ASH, RAMJAN ALI, Door No: 65-3-607, Ex-Service Man Colony Near Venkateswaraswamy Temple, Gajuwaka Visakhapatnam, Andhra Pradesh changed name MD SUBHAN to MAHABOOB SUBHAN, 11/07/2023, Notary K. V. Mani, Bangalore

I, SHRUTHI. S D/o P Srikantha, Ram Mohanpura, Bangalore-21, I wish to change my name from SHRUTHI ASHWIN PURANIK to SHRUTHI. S with vide affidavit dated 06/07/2023 before notary N.R. Ravikumar, Sidlaghatta.

I, SRINIVASA H.K. residing at #33, 1st cross, Chamundinagar, BDA Layout, Girinagar, Bangalore-85, have changed my name to SRINIVAS H.K. vide affidavit dated 13.07.2023 before Notary Mamatha N.K, Bangalore. Henceforth I shall be known as SRINIVAS H.K. only.

PUNAM SANJAY PARATWAR, Wife/o, 14861629Y, CIV/COOK, MALLESHAM LAXMAN SHRIRAMUL, Vill- Sangamner, Ahmadnagar, Maharashtra, changed name PUNAM SANJAY PARATWAR to SHRIRAMUL PUNAM MALLESHAM, 11/07/2023, Notary K.V. Mani, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

KAITHUNNISHA BEGUM, Wife/o 6493512P HAV/ASH, RAMJAN ALI, 65-3-607, Ex Service Man Colony Near Venkataswaraswamy Temple, Gajuwaka Visakhapatnam, Andhra Pradesh, changed name KAITHUNNISHA BEGUM to KHATUNNISHA BEGUM, 12/07/2023, Notary K.V. Mani, Bangalore

SASHI, WIFE/O, JC682203L, NB RIS, RAKESH KUMAR, Vill- Kaswathai, Mahoba, Uttar Pradesh changed name SASHI to SHASHI, 11/07/2023, Notary K.V. Mani, Bangalore

Lost

I, SHREYAS. R have lost my original B.Sc Convocation Certificate, Registration No. 08CBZ3021, year April 2011, while travelling. If found please contact: Registrar (Evaluation), Bangalore University, Bangalore-56. Within 15 days.

ಅಂತರ್ಜಾಲ ಸಂಪರ್ಕ ವ್ಯವಹಾರದಲ್ಲಿ ನಷ್ಟ • ಉದ್ಯೋಗಿ ಜೊತೆ ಸೇರಿ ಸಂಚು ರೂಪಿಸಿದ್ದ ಅರುಣ್‌ಕುಮಾರ್ ಆಜಾದ್

ಜೋಡಿ ಕೊಲೆ: ಜಿ–ನೆಟ್ ಮಾಲೀಕ ಬಂಧನ

ಪ್ರಜಾವಾಣಿ ವಾರ್ತೆ

ಅರುಣ್ ಕುಮಾರ್

ಅಪರಾಧ ಸುದ್ದಿ

ಬೆಂಗಳೂರು: ಏರೋನಿಕ್ಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಫಣೀಂದ್ರ ಹಾಗೂ ಮುಖ್ಯ ಕಾರ್ಯನಿ-ರ್ವಾಹಕ ಅಧಿಕಾರಿ (ಸಿಇಒ ವಿನುಕುಮಾರ್ ಕೊಲೆ ಪ್ರಕರಣ-ದಲ್ಲಿ ಜಿ-ನೆಟ್ ಕಂಪನಿ ಮಾಲೀಕ ಅರುಣ್‌ಕುಮಾರ್ ಆಜಾದ್‌ನನ್ನು ಅಮೃತಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಜುಲೈ 11ರಂದು ನಡೆದಿದ್ದ ಕೊಲೆ ಸಂಬಂಧ ಶಬರೀಷ್ ಅಲಿಯಾಸ್ ಫಿಲಿಕ್ಸ್, ವಿನಯ್ ರೆಡ್ಡಿ ಹಾಗೂ ಸಂತೋಷ್ ಅಲಿಯಾಸ್ ಸಂತುನನ್ನು ಈಗಾಗಲೇ ಬಂಧಿಸಲಾಗಿದೆ. ಕೃತ್ಯ ಎಸಗಲು ಸುಪಾರಿ ನೀಡಿದ್ದ ಆರೋಪದಡಿ ಇದೀಗ ಅರುಣ್‌ನನ್ನು ಬಂಧಿಸಿ, ಹೆಚ್ಚಿನ ವಿಚಾರಣೆಗಾಗಿ ಪೊಲೀಸರು ಕಸ್ಟಡಿಗೆ ಪಡೆದುಕೊಂಡಿದ್ದಾರೆ.

‘ಕೆ.ಆರ್. ಪುರದ ಅರುಣ್, ಮನೆ ಹಾಗೂ ಕಚೇರಿಗಳಿಗೆ ಅಂತರ್ಜಾಲ ಸಂಪರ್ಕ ನೀಡುವ ಏಜೆನ್ಸಿಗಳಲ್ಲಿ ಕೆಲಸ ಮಾಡಿಕೊಂಡಿದ್ದ. ನಂತರ, ತನ್ನದೇ ಜಿ–ನೆಟ್ (ದೇಶ್ಕಾಲ್ ನೆಟ್‌ವರ್ಕ್) ಕಂಪನಿ ಆರಂಭಿಸಿದ್ದ. ಇದೇ ಕಂಪನಿಯಲ್ಲಿ ಫಣೀಂದ್ರ ಹಾಗೂ ವಿನುಕುಮಾರ್ ಕೆಲಸ ಮಾಡುತ್ತಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲಸಕ್ಕೆ ರಾಜೀನಾಮೆ ನೀಡಿದ್ದ ಫಣೀಂದ್ರ, ವಿನುಕುಮಾರ್, ಹೊಸದಾಗಿ ಏರೋನಿಕ್ಸ್ ಕಂಪನಿ ಆರಂಭಿಸಿದ್ದರು. ಅವರ ಕಂಪನಿಗೆ ಉತ್ತಮ ಸ್ಪಂದನೆ ವ್ಯಕ್ತವಾಗಿತ್ತು. ಜಿ–ನೆಟ್ ಗ್ರಾಹಕರು, ಏರೋನಿಕ್ಸ್ ಕಂಪನಿಯತ್ತ ಮುಖ ಮಾಡಿದ್ದರು. ವ್ಯವಹಾರದಲ್ಲಿ ನಷ್ಟ ಉಂಟಾಗಿದ್ದರಿಂದ ಸಿಟ್ಟಾಗಿದ್ದ ಅರುಣ್, ಫಣೀಂದ್ರ ಹಾಗೂ ವಿನು ಕುಮಾರ್ ಅವರನ್ನು ಹತ್ಯೆ ಮಾಡಿಸಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಕೆಲಸ ನೀಡಿ, ಕೊಲೆಗೆ ಸುಪಾರಿ: ‘ಆರೋಪಿ ಫಿಲಿಕ್ಸ್, ಏರೋನಿಕ್ಸ್ ಕಂಪನಿಯಲ್ಲಿ ಕೆಲಸಕ್ಕಿದ್ದ. ಆತನನ್ನು ಕೆಲಸದಿಂದ ತೆಗೆಯಲಾಗಿತ್ತು. ವಿಷಯ ಗೊತ್ತಾಗುತ್ತಿದ್ದಂತೆ ಫಿಲಿಕ್ಸ್‌ನನ್ನು ಸಂಪರ್ಕಿಸಿದ್ದ ಅರುಣ್, ತನ್ನ ಕಂಪನಿಯಲ್ಲಿ ಕೆಲಸ ಕೊಟ್ಟಿದ್ದ. ಫಣೀಂದ್ರ ಹಾಗೂ ವಿನುಕುಮಾರ್ ಅವರನ್ನು ಕೊಲ್ಲಬೇಕೆಂದು ಷರತ್ತು ವಿಧಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲಸದಿಂದ ತೆಗೆದಿದ್ದಕ್ಕೆ ಫಿಲಿಕ್ಸ್‌ಗೂ ಕೋಪವಿತ್ತು. ಹೀಗಾಗಿ, ಅರುಣ್ ಮಾತಿನಂತೆ ಕೊಲೆಗೆ ಒಪ್ಪಿಕೊಂಡಿದ್ದ. ಇತರೆ ಆರೋಪಿಗಳ ಜೊತೆ ಸೇರಿ ಫಣೀಂದ್ರ ಹಾಗೂ ವಿನುಕುಮಾರ್ ಅವರನ್ನು ಕೊಲೆ ಮಾಡಿದ್ದ’ ಎಂದು ಮೂಲಗಳು ತಿಳಿಸಿವೆ.

‘ಅಂತರ್ಜಾಲ ಮಾಫಿಯಾ: ಜೀವ ಬೆದರಿಕೆ’

‘ಆರೋಪಿ ಅರುಣ್‌ಕುಮಾರ್, ಜಿ-ನೆಟ್ ಕಂಪನಿ ಮೂಲಕ ಅಂತರ್ಜಾಲ ಸಂಪರ್ಕದ ಏಜೆನ್ಸಿಯಾಗಿ ಕೆಲಸ ಮಾಡುತ್ತಿದ್ದ. ಏರ್‌ಟೆಲ್, ಸಿಸ್ಕೊ, ಟಾಟಾ ಕಮ್ಯೂನಿಕೇಷನ್ಸ್, ನೆಟ್‌ಲಿಂಕ್, ಒಪ್ಟಿಕಮ್ ಕಂಪನಿಗಳು ಗ್ರಾಹಕರಾಗಿರುವುದಾಗಿ ಕಂಪನಿ ಜಾಲತಾಣದಲ್ಲಿ ಪ್ರಕಟಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅಂತರ್ಜಾಲ ಸಂಪರ್ಕ ವ್ಯವಹಾರದಿಂದ ಅರುಣ್, ಪ್ರತಿ ತಿಂಗಳು ಲಕ್ಷಾಂತರ ರೂಪಾಯಿ ದುಡಿಯುತ್ತಿದ್ದ. ರಾಜ್ಯದ 200 ಪ್ರದೇಶಗಳಲ್ಲಿ 30 ಸಾವಿರಕ್ಕೂ ಹೆಚ್ಚು ಮನೆಗಳು ಹಾಗೂ 300ಕ್ಕೂ ಹೆಚ್ಚು ಕಚೇರಿಗಳಿಗೆ ಅಂತರ್ಜಾಲ ಸಂಪರ್ಕ ನೀಡಿದ್ದ. ತನ್ನ ಪ್ರದೇಶದಲ್ಲಿ ಯಾರಾದರೂ ಹೊಸದಾಗಿ ಅಂತರ್ಜಾಲ ಸಂಪರ್ಕ ನೀಡುವವರು ಬಂದರೆ, ಅವರಿಗೆ ಜೀವ ಬೆದರಿಕೆಯೊಡ್ಡುತ್ತಿದ್ದ’ ಎಂದು ತಿಳಿಸಿವೆ.

‘ಟಿ.ವಿ ಕೇಬಲ್ ಮಾಫಿಯಾ ರೀತಿಯಲ್ಲಿ ಅಂತರ್ಜಾಲ ಮಾಫಿಯಾ ಕೆಲಸ ಮಾಡುತ್ತಿದೆ. ಅರುಣ್ ಸಹ ಅವರಿಗೆ ಬೆದರಿಕೆಯೊಡ್ಡಿದ್ದು, ಕೆಲವರ ಮೇಲೆ ಹಲ್ಲೆ ಸಹ ಮಾಡಿದ್ದಾನೆ. ಈತನ ಬಳಿ ಪಿಸ್ತೂಲ್ ಇರುವ ಮಾಹಿತಿ ಇದ್ದು, ಅದನ್ನು ತೋರಿಸಿ ಬೆದರಿಕೆ ಹಾಕಿರುವ ಬಗ್ಗೆ ಅನುಮಾನವಿದೆ. ಆರೋಪಿ ಹಿನ್ನೆಲೆ ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಪ್ರಭಾವಿಗಳ ಜೊತೆ ಒಡನಾಟ’

‘ಅಂತರ್ಜಾಲ ಸಂಪರ್ಕ ಪ್ರದೇಶಗಳ ವ್ಯಾಪ್ತಿಯ ಠಾಣೆಗಳ ಕೆಲ ಪೊಲೀಸರು, ಶಾಸಕರು ಹಾಗೂ ಇತರೆ ಪ್ರಭಾವಿಗಳ ಜೊತೆ ಆರೋಪಿ ಅರುಣ್ ಒಡನಾಟ ಹೊಂದಿದ್ದ. ತನ್ನ ವ್ಯವಹಾರಕ್ಕೆ ಯಾರಾದರೂ ಅಡ್ಡಿಪಡಿಸಿದರೆ, ಪ್ರಭಾವ ಬಳಸಿ ಅವರನ್ನು ಹತ್ತಿಕ್ಕುತ್ತಿದ್ದ. ಕೆಲ ಪ್ರಭಾವಿಗಳ ಜೊತೆಗೆ ಅರುಣ್ ತೆಗೆಸಿರುವ ಫೋಟೊಗಳು ಪತ್ತೆಯಾಗಿವೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮತ್ತೆ ಅಪರಾಧ ಎಸಗಿದರೆ ರೌಡಿ ಪಟ್ಟಿಗೆ: ಎಡಿಜಿಪಿ

ಪ್ರಜಾವಾಣಿ ವಾರ್ತೆ

ಆರ್. ಹಿತೇಂದ್ರ

ಬೆಂಗಳೂರು: ‘ರಾಜ್ಯದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಪೊಲೀಸರು ಕ್ರಮ ಕೈಗೊಳ್ಳಬೇಕು. ಯಾರಾದರೂ ಪದೇ ಪದೇ ಅಪರಾಧ ಎಸಗಿ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡಿದರೆ, ಅಂಥವರ ಹೆಸರನ್ನು ರೌಡಿ ಪಟ್ಟಿಗೆ ಸೇರಿಸಲು ಪ್ರಕ್ರಿಯೆ ಆರಂಭಿಸಬೇಕು’ ಎಂದು ಕಾನೂನು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಆರ್. ಹಿತೇಂದ್ರ ಖಡಕ್ ಸೂಚನೆ ನೀಡಿದ್ದಾರೆ.

ರಾಜ್ಯದಲ್ಲಿ ಕೆಲದಿನಗಳಿಂದ ಅಪರಾಧಗಳ ಸಂಖ್ಯೆ ಹೆಚ್ಚುತ್ತಿದ್ದು, ಪೊಲೀಸರ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ. ಇದೇ ಕಾರಣಕ್ಕೆ ರಾಜ್ಯದ ಎಲ್ಲ ಎಸ್‌ಪಿ ಹಾಗೂ ಕಮಿಷನರ್‌ಗಳಿಗೆ 21 ಪ್ರಮುಖ ಸೂಚನೆ ನೀಡಿರುವ ಹಿತೇಂದ್ರ, ‘ಹಲವು ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಸಭೆ ಮಾಡಿದ್ದೇನೆ. ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕಾಗಿ ಎಲ್ಲ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದಿದ್ದಾರೆ.

ಪ್ರಮುಖ ಸೂಚನೆಗಳು:

- ಕೆಲ ಜಿಲ್ಲೆಗಳಲ್ಲಿ ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳಿಗೆ ಬಿಟ್ಟಿ ನೀಡಿಲ್ಲ. ಅರ್ಹತೆ ಆಧಾರದಲ್ಲಿ ತುರ್ತಾಗಿ ಬಿಟ್ಟಿ ನೀಡಬೇಕು
- ಸಾರ್ವಜನಿಕ ಸ್ಥಳಗಳಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳಿಗೆ ಜಿಯೊ ಟ್ಯಾಗ್ ಅಳವಡಿಸಬೇಕು
- ಒಂದೇ ಠಾಣೆಯಲ್ಲಿ 5 ವರ್ಷ ಸೇವೆ ಮೀರಿದ ಎಎಸ್ಐ, ಹೆಡ್ ಕಾನ್‌ಸ್ಟೆಬಲ್ ಹಾಗೂ ಕಾನ್‌ಸ್ಟೆಬಲ್‌ಗಳನ್ನು ವರ್ಗಾವಣೆ ಮಾಡಬೇಕು
- ಯಾರಾದರೂ ಪ್ರಚೋದನಕಾರಿ ಪೋಸ್ಟ್ ಪ್ರಕಟಿಸಿದರೆ, ಆಯಾ ಠಾಣೆಗಳಲ್ಲಿ ಪ್ರಕರಣ ದಾಖಲಿಸಿ ಆರೋಪಿಗಳನ್ನು ತ್ವರಿತವಾಗಿ ಬಂಧಿಸಬೇಕು
- ಕಾರಾಗೃಹ ಹಾಗೂ ಉಪ ಕಾರಾಗೃಹಗಳಿಗೆ ಮೂರು ತಿಂಗಳಿಗೊಮ್ಮೆ ದಿಢೀರ್ ಭೇಟಿ ನೀಡಿ ಪರಿಶೀಲಿಸಬೇಕು
- ಇನ್‌ಸ್ಪೆಕ್ಟರ್, ಡಿವೈಎಸ್‌ಪಿ ಹಾಗೂ ಎಸ್‌ಪಿಗಳು ತಮ್ಮ ವ್ಯಾಪ್ತಿಯಲ್ಲಿ ಇ-ಬೀಟ್ ಆ್ಯಪ್ ಅನ್ನು ಉಪಯೋಗಿಸುವುದನ್ನು ನೋಡಿಕೊಳ್ಳಬೇಕು
- ಎಸ್‌.ಸಿ, ಎಸ್‌.ಟಿ ದೌರ್ಜನ್ಯ ತಡೆ ಹಾಗೂ ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ ಪ್ರಕರಣಗಳಲ್ಲಿ 60 ದಿನದೊಳಗೆ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಬೇಕು. ನಿಗದಿತ ಅವಧಿಯೊಳಗೆ ಸಲ್ಲಿಸದಿದ್ದರೆ, ಅಂಥ ಅಧಿಕಾರಿ ವಿರುದ್ಧ ಕ್ರಮ ಜರುಗಿಸಲು ಎಸ್‌ಪಿ ಹಾಗೂ ಕಮಿಷನರ್‌ಗಳು ವರದಿ ಸಲ್ಲಿಸಬೇಕು
- ಸರ್ಕಾರಿ ಆಸ್ಪತ್ರೆಗಳಲ್ಲಿ ಚಾಲಕಿ ಹೆರಿಗೆಯಾದರೆ, ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ಪತಿ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು
- ಪ್ರತಿ ಜಿಲ್ಲೆಯಲ್ಲಿ ಅಪರಾಧ ಹಿನ್ನೆಲೆಯುಳ್ಳವರನ್ನು ಗುರುತಿಸಿ, ಅವರ ಫೋಟೊ ಸಮೇತ ಠಾಣೆಗಳಲ್ಲಿ ವಿವರ ಪ್ರಕಟಿಸಬೇಕು
- ರಸ್ತೆ ಅಪಘಾತಗಳು ಹೆಚ್ಚಾಗುತ್ತಿವೆ. ಅತೀ ವೇಗ, ನಿಗದಿಗಿಂತ ಹೆಚ್ಚು ಪ್ರಯಾಣಿಕರನ್ನು ಕರೆದೊಯ್ಯುವ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಬೇಕು
- ಪೊಲೀಸರ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲು ದಕ್ಷಿಣ ವಲಯದಲ್ಲಿ ರೂಪಿಸಿರುವ ವ್ಯವಸ್ಥೆ ಉತ್ತಮವಾಗಿದೆ. ಎಲ್ಲ ಜಿಲ್ಲೆ ಹಾಗೂ ಕಮಿಷನರೇಟ್ ವ್ಯಾಪ್ತಿಯಲ್ಲಿ ಈ ವ್ಯವಸ್ಥೆ ಜಾರಿಗೆ ತರಬೇಕು
- ಆರೋಪಿಗಳಿಂದ ಜಪ್ತಿ ಮಾಡಲಾದ ವಸ್ತುಗಳನ್ನು ನ್ಯಾಯಾಲಯದ ನಿರ್ದೇಶನಕ್ಕೆ ಅನುಗುಣವಾಗಿ ಸಂತ್ರಸ್ತರಿಗೆ ವಿತರಿಸಲು ಪ್ರತಿ ಮೂರು ತಿಂಗಳಿಗೊಮ್ಮೆ ವಿಶೇಷ ಪರೇಡ್ ಹಮ್ಮಿಕೊಳ್ಳಬೇಕು

ಜಾಗೃತಿ ಜಾಥಾ 'ಗಾಂಜಾ, ಧೂಮಪಾನ, ತಂಬಾಕು ಬಳಕೆ ವಿರೋಧಿ ದಿನ' ಅಂಗವಾಗಿ ಬಿಎನ್‌ಎಂ ಕಾಲೇಜಿನ ಎನ್‌ಸಿಸಿ ಘಟಕದಿಂದ ಜಾಗೃತಿ ಜಾಥಾ ಗುರುವಾರ ನಡೆಯಿತು

ಮೆಟ್ರೊ: ಆ್ಯಪ್ ಆಧಾರಿತ ಆಟೊ ಸೇವೆ ಶೀಘ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದಲ್ಲಿರುವ ಮೆಟ್ರೊ ನಿಲ್ದಾಣಗಳಿಂದ ಶೀಘ್ರದಲ್ಲೇ ಮೀಟರ್ ಚಾಲಿತ ಆ್ಯಪ್ ಆಧಾರಿತ ಆಟೊ ಸೇವೆಗೆ ಚಾಲನೆ ನೀಡಲಾಗುವುದು’ ಎಂದು ಆಟೊ ರಿಕ್ಷಾ ಚಾಲಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ ತಿಳಿಸಿದರು.

ನಗರದಲ್ಲಿ ಗುರುವಾರ ಬಿ.ಪ್ಯಾಕ್ ಮತ್ತು ಡಬ್ಲ್ಯು.ಆರ್‌ಐ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ‘ಪರ್ಸನಲ್ ಟು ಪಬ್ಲಿಕ್’ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ಆಗಸ್ಟ್ 15ರಂದು ಮೆಟ್ರೊಮಿತ್ರಾ ಎಂಬ ಆ್ಯಪ್ ಆಧಾರಿತ ಸೇವೆಯನ್ನು ಪ್ರಾಯೋಗಿಕವಾಗಿ ಚಾಲನೆ ನೀಡಲಾಗುವುದು. ಚಾಲಕರನ್ನು ವೃತ್ತಿಪರರನ್ನಾಗಿ ಮಾಡಲು ಈಗಾಗಲೇ ತರಬೇತಿ ನೀಡುತ್ತಿದ್ದೇವೆ. ತಂತ್ರಜ್ಞಾನ ಮತ್ತು ಪ್ರಯಾಣಿಕರನ್ನು ಕರೆದುಕೊಂಡು ಹೋಗುವ ವೆಚ್ಚ ಸರಿದೂಗಿಸಲು ಮೀಟರ್ ಶುಲ್ಕದ ಜತೆಗೆ ₹10 ಹೆಚ್ಚುವರಿಯಾಗಿ ನೀಡಬೇಕು’ ಎಂದರು.

ಬಿ.ಪ್ಯಾಕ್ ಮುಖ್ಯಸ್ಥೆ ರೇವತಿ ಅಶೋಕ್, ‘ಸಾರ್ವಜನಿಕ ಸಾರಿಗೆಯನ್ನು ಉತ್ತೇಜಿಸುವ ಸಲುವಾಗಿ ಸಂಚಾರ ದಟ್ಟಣೆಗೆ ಕಡಿವಾಣ ಹಾಕಲು ನಗರದ ಜನ ವಾರದಲ್ಲಿ ಎರಡು ದಿನ ಸಾರ್ವಜನಿಕ ಸಾರಿಗೆಗಳನ್ನು ಬಳಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ವೈಟ್‌ಫೀಲ್ಡ್ ಮತ್ತು ಎಲೆಕ್ಟ್ರಾನಿಕ್ ಸಿಟಿ ಸಂಪರ್ಕಿಸುವ ಮಾರ್ಗ ಕಾರ್ಯಾರಂಭ ಮಾಡಲಿದೆ. ಈ ಪ್ರದೇಶದಲ್ಲಿ ವಾಹನ ದಟ್ಟಣೆ ನಿಯಂತ್ರಿಸಲು ಈ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಇದರಲ್ಲಿ ಸಾರ್ವಜನಿಕ ಸಂಸ್ಥೆಗಳು ಹಾಗೂ ಕಾರ್ಪೊರೇಟ್ ಕಂಪನಿಗಳ ಭಾಗವಹಿಸುತ್ತವೆ’ ಎಂದು ತಿಳಿಸಿದರು.

ಡಬ್ಲ್ಯು.ಆರ್‌ಐನ ಶ್ರೀನಿವಾಸ್ ಅಲವಿಲ್ಲಿ, ‘ಮನೆಯಿಂದ ಮೆಟ್ರೊ ನಿಲ್ದಾಣಕ್ಕೆ ಹೋಗುವುದಕ್ಕೆ ಸಾರಿಗೆ ಸಂಪರ್ಕವಿಲ್ಲದ ಕಾರಣ ಪ್ರಯಾಣಿಕರು ಸಾರ್ವಜನಿಕ ಸಾರಿಗೆ ಬಳಸಲು ಹಿಂದೇಟು ಹಾಕುತ್ತಿದ್ದಾರೆ. ಈ ಕುಂದುಕೊರತೆಗಳನ್ನು ಸರಿಪಡಿಸಲು ಈ ಅಭಿಯಾನವನ್ನು ಕೈಗೊಳ್ಳಲಾಗಿದೆ. http://bit.ly/personal2public ಈ ಲಿಂಕ್ ಮೂಲಕ ಅಭಿಯಾನದಲ್ಲಿ ಪಾಲ್ಗೊಂಡು ಸಲಹೆಗಳನ್ನು ನೀಡಬಹುದು’ ಎಂದರು.

ನಗರದಲ್ಲಿ ಇಂದು

‘ದಲಿತ ಸಾಹಿತ್ಯ ಮತ್ತು ಚಳವಳಿ: ಎಲ್. ಹನುಮಂತಯ್ಯ’ ಕುರಿತ ರಾಷ್ಟ್ರೀಯ ವಿಚಾರಸಂಕಿರಣ: ಉದ್ಘಾಟನೆ: ಎಚ್. ಎಸ್. ಶಿವಪ್ರಕಾಶ್, ಉಪಸ್ಥಿತಿ: ಜಯಕರ ಎಸ್.ಎಂ., ಅತಿಥಿಗಳು: ಅರವಿಂದ ಮಾಲಗತ್ತಿ, ಅಧ್ಯಕ್ಷತೆ: ಮುನಿಯಪ್ಪ, ಆಯೋಜನೆ: ಕುಲದ ಪ್ರತಿಷ್ಠಾನ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಕನ್ನಡ ಅಧ್ಯಯನ ಕೇಂದ್ರ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಬೆಳಿಗ್ಗೆ 10.30

‘ಚಂದ್ರಯಾನ–3 ಉಡಾವಣೆ’ ಪ್ರಯುಕ್ತ ರಾಷ್ಟ್ರ ಧ್ವಜಾರೋಹಣ: ಆಯೋಜನೆ: ಮೈಸೂರು ಪೌರ ಮತ್ತು ಸಾಮಾಜಿಕ ಪ್ರಗತಿ ಸಂಘ, ಲೋಕಮಾನ್ಯ ಸಂಘ, ಕರ್ನಾಟಕ ಲೇಖಕರ ಸಂಘ, ವಿಶ್ವೇಶ್ವರಪುರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ–ವಾಸವಿ ಕ್ಲಬ್, ಸ್ಥಳ: ಸಜ್ಜನರಾವ್ ವೃತ್ತ, ವಿಶ್ವೇಶ್ವರಪುರ, ಮಧ್ಯಾಹ್ನ 2.35

ಚಿತ್ರಕಾರರ ಭಾರತೀಯ ಚಲನಚಿತ್ರಗಳ ಉತ್ಸವದ ಉದ್ಘಾಟನೆ: ಎಂ. ರಮೇಶ್, ಆಯೋಜನೆ: ಅಧ್ಯಿಯೇಶನ್, ಸ್ಥಳ: 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಮಧ್ಯಾಹ್ನ 3ರಿಂದ

ಎಚ್‌ಎಎಲ್ ಲಲಿತಕಲಾ ಸಂಘದ ಸುವರ್ಣ ಮಹೋತ್ಸವದ ಉದ್ಘಾಟನೆ: ಶ್ರೀಧರ್, ಅಧ್ಯಕ್ಷತೆ: ಮಹೇಶ್ ಅಂಗಡಿ, ವಿ.ಎನ್. ಅನಿಲ್ ಕುಮಾರ್, ಎಚ್. ಲಿಂಗರಾಜ, ಕುಸುಮ ರಾಜಶೇಖರ್, ಬಿ.ಎನ್. ಶಿವಲಿಂಗ, ರಾಮಸ್ವಾಮಿ ಆರ್., ಎಸ್. ರಾಜಾಹಾಸನ್, ಆಯೋಜನೆ: ಎಚ್‌ಎಎಲ್ ಲಲಿತ ಕಲಾ ಸಂಘ, ಸ್ಥಳ: ಡಾ.ವಿ.ಎಂ. ಘಾಟ್ಗೆ ಸಭಾಂಗಣ, ಎಚ್‌ಎಎಲ್ ಬಡಾವಣೆ, ಮಾರತ್ತಹಳ್ಳಿ, ಮಧ್ಯಾಹ್ನ 3.30ರಿಂದ

‘ಸಾಯಿಗ್ರೀನ್ ಪ್ರತಿಷ್ಠಾನ ದತ್ತಿ ಯಾದವಾಲಂ ನಂಜುಂಡಶೆಟ್ಟಿ ಸ್ಮಾರಕ ಉಪನ್ಯಾಸ’: ‘ಸುದರ್ಶನ’ ಕುರಿತ ಉಪನ್ಯಾಸ: ದುಷ್ಯಂತ್ ಶ್ರೀಧರ್, ಆಯೋಜನೆ ಮತ್ತು ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 5

ಜಿ.ಎಸ್. ಜಯದೇವ ಅವರ ‘ನಾವೇಕೆ ಹೀಗೆ?’, ಎಚ್.ಎಸ್. ಮುರಳೀಧರ ಅವರ ‘ಬರಿಯ ತೊಳಸಿಯ ಪುದಕ’ ಪುಸ್ತಕಗಳ ಬಿಡುಗಡೆ: ಲಕ್ಷ್ಮೀಶ ತೋಳ್ಪಾಡಿ, ಪುಸ್ತಕಗಳ ಕುರಿತು: ಸಿ.ಆರ್. ಚಂದ್ರಶೇಖರ್, ಎಚ್. ದಂಡಪ್ಪ, ಸ್ಥಳ: ಜಿ.ವಿ ಐಯ್ಯಂಗಾರ್ಸ್ ಕಲಾ ಭವನ, ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 5.30

ಚೈತನ್ಯ ಸಂಜೆ: ಅಧ್ಯಕ್ಷತೆ: ಪಿ. ವಿಜಯಕುಮಾರ್, ಉಪನ್ಯಾಸ: ಕೆ.ಎಸ್. ನಾಗರಾಜ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಗೀತಾ ಜಯಂತ್, ದಿಮ್ಮಲು ಎಸ್. ಗಿರೀಶ್, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜಿನ ಸಭಾಂಗಣ, ಜಯನಗರ, ಸಂಜೆ 5.30

‘ರೂಮಿ ಹರೀಶ್ ಬದುಕಿನ ಪುಟಗಳು–ಜೋಗಪ್ಪ ಖಯಾಲ್’: ಭಾವಚಾಚರಣ: ರೂಮಿ ಹರೀಶ್, ದಾದಾಪೀರ್ ಜೈಮನ್, ಆಯೋಜನೆ ಮತ್ತು ಸ್ಥಳ: ಅಲ್ಟ ನೆಟ್ವರ್ಕ್ ಲಾ ಫೋರಂ, ಇನ್‌ಫೆಂಟ್ರಿ ರಸ್ತೆ, ಸಂಜೆ 6

ಪ್ರವಚನ ವಾಹಿನಿ: ‘ಭಗವಂತ ಮತ್ತು ಭಕ್ತನ ಅವಿನಾಭಾವ ಸಂಬಂಧ’ ಕುರಿತು ಉಪನ್ಯಾಸ: ವೀಣಾ ನಾಗರಾಜ್, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಪ್ರಸನ್ನ ಅಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

‘ಬಹಾರ್ ರಂಗ್’ ಸಂಗೀತ ಕಾರ್ಯಕ್ರಮ: ಗಾಯನ: ಸಂಜೀವ್ ಅಭ್ಯಂಕರ್, ಸಹಕಾರ ವಾದನ: ರಾಹುಲ್ ಶರ್ಮಾ, ತಬಲಾ: ರಾಮಕುಮಾರ್ ಮಿಶ್ರಾ, ರೋಹಿತ್ ಮುಜುಮದಾರ್, ಹಾರ್ಮೋನಿಯಂ: ಅಭಿಷೇಕ್ ಶಿಂಕರ್, ಆಯೋಜನೆ: ಬನಿಯನ್ ಟ್ರೀಸ್, ಸ್ಥಳ: ಚೌಡಯ್ಯ ಸ್ಮಾರಕ ಸಭಾಂಗಣ, ಮಲ್ಲೇಶ್ವರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

ಬಹು ಅಂಗ ಸೋಂಕು ಕಾನ್‌ಸ್ಟೆಬಲ್ ಸಾವು

ಬೆಂಗಳೂರು: ಕಾನ್‌ಸ್ಟೆಬಲ್ ಪವನ್ ಕುಮಾರ್ ಅವರು ಬಹು ಅಂಗ ಸೋಂಕಿನಿಂದ ವೈಫಲ್ಯದಿಂದ ಮೃತಪಟ್ಟಿದ್ದಾರೆ. ಅವರಲ್ಲಿ ಡೆಂಗಿ ಜ್ವರಾಣು ದೃಢಪಟ್ಟಿರಲಿಲ್ಲ ಎಂದು ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಡಾ. ಬಾಲಸುಂದರ್ ತಿಳಿಸಿದ್ದಾರೆ.

ರಾಮಯ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅವರು ಅಲ್ಲಿಯೇ ಮೃತಪಟ್ಟಿದ್ದಾರೆ. ಮೊದಲು ಡೆಂಗಿ ಎಂದು ಶಂಕೆ ವ್ಯಕ್ತವಾಗಿತ್ತಾದರೂ, ಅಲ್ಲಿನ ಪ್ರಯೋಗಾಲಯದ ವರದಿ ಪ್ರಕಾರ ಡೆಂಗಿ ಜ್ವರಾಣು ದೃಢಪಟ್ಟಿಲ್ಲ ಎಂದು ಹೇಳಿದ್ದಾರೆ.

ಅಪಾಯಕಾರಿ ರೆಂಬೆ ತೆರವಿಗೆ ‘ವಾಟ್ಸ್‌ಆ್ಯಪ್’

ಬೆಂಗಳೂರು: ನಗರದಲ್ಲಿ ರಸ್ತೆ ಬದಿ ಒಣಗಿರುವ ಮರಗಳು ಹಾಗೂ ರೆಂಬೆ ಕೊಂಬೆಗಳ ತೆರವಿಗೆ ವಾಟ್ಸ್‌ಆ್ಯಪ್ ಮೂಲಕ ಚಿತ್ರಸಹಿತ ದೂರು ನೀಡಬಹುದು.

ರಸ್ತೆ ಬದಿ, ಸರ್ಕಾರಿ ಜಾಗಗಳಲ್ಲಿ ಒಣಗಿರುವ ಮರಗಳು ಹಾಗೂ ಒಣಗಿರುವ ರೆಂಬೆ ಕೊಂಬೆಗಳನ್ನು ಅರಣ್ಯ ವಿಭಾಗದ ವತಿಯಿಂದ ಈಗಾಗಲೇ ತೆರವುಗೊಳಿಸಲಾಗುತ್ತಿದೆ. ಇಂತಹ ಅಪಾಯ ಸ್ಥಿತಿಯ ರೆಂಬೆಗಳು ಕಂಡುಬಂದಲ್ಲಿ ವಲಯವಾರು ಅಧಿಕಾರಿಗಳ ವಾಟ್ಸ್‌ಆ್ಯಪ್‌ಗೆ ಚಿತ್ರ ಸಹಿತ ನಾಗರಿಕರು ಮಾಹಿತಿ ನೀಡಬಹುದು ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ತಿಳಿಸಿದ್ದಾರೆ.

ವಲಯ	ವಾಟ್ಸ್‌ಆ್ಯಪ್ ಸಂಖ್ಯೆ
ಪೂರ್ವ	93800 90027
ಪಶ್ಚಿಮ	94496 59252
ದಕ್ಷಿಣ	97427 33666
ದಾಸರಹಳ್ಳಿ	94482 34928
ಬೊಮ್ಮನಹಳ್ಳಿ	94806 85039
ಯಲಹಂಕ	91640 42566
ಆರ್.ಆರ್. ನಗರ	94831 39438
ಮಹದೇವಪುರ	78995 55182

ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದ ಯುವತಿ ನಾಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಇತ್ತೀಚೆಗೆ ನಡೆಸಿದ್ದ ಪೂರ್ವಭಾವಿ ಪರೀಕ್ಷೆಗೆ ಹಾಜರಾಗಿದ್ದ ಯುವತಿಯೊಬ್ಬರು ನಾಪತ್ತೆಯಾಗಿದ್ದು, ಈ ಸಂಬಂಧ ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ತುಮಕೂರು ನಿವಾಸಿ ಶಿಲ್ಪಾ (23) ಅವರು ನಾಪತ್ತೆಯಾಗಿರುವ ಬಗ್ಗೆ ತಂದೆ ದೂರು ನೀಡಿದ್ದಾರೆ. ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶಿಲ್ಪಾ ಅವರು ಆಂಧ್ರಪ್ರದೇಶದಲ್ಲಿರುವ ಸಂಸ್ಥೆಯೊಂದರಲ್ಲಿ ಬ್ಯಾಂಕಿಂಗ್ ಪರೀಕ್ಷೆ ತರಬೇತಿ ಪಡೆಯುತ್ತಿದ್ದರು. ಇದರ ನಡುವೆಯೇ ಯುಪಿಎಸ್‌ಸಿ ಪರೀಕ್ಷೆ ಕಟ್ಟಿದ್ದರು. ಬೆಂಗಳೂರಿನಲ್ಲಿರುವ ಕೇಂದ್ರದಲ್ಲಿ ಪರೀಕ್ಷೆ ಇತ್ತು. ಹೀಗಾಗಿ, ಪರೀಕ್ಷೆಗೂ ಮುನ್ನ ತುಮಕೂರಿನಿಂದ ಬಂದು ಉಳಿದುಕೊಂಡಿದ್ದರು.’

‘ಜುಲೈ 2ರಂದು ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದ ಶಿಲ್ಪಾ, ವಾಪಸು ಊರಿಗೆ ಹೋಗಲು ಬಸ್ ಹತ್ತಿದ್ದರು. ಬೆಂಗಳೂರಿನಲ್ಲಿರುವ ಸಹೋದರ ಬಸ್ ಹತ್ತಿಸಿದ್ದರು. ಆದರೆ, ಶಿಲ್ಪಾ ಮನೆಗೆ ಹೋಗಿಲ್ಲ. ಗಾಬರಿಗೊಂಡ ಪೋಷಕರು, ಎಲ್ಲ ಕಡೆ ಹುಡುಕಿದರೂ ಸುಳಿವು ಸಿಕ್ಕಿಲ್ಲ’ ಎಂದು ಮೂಲಗಳು ತಿಳಿಸಿವೆ.

ಸಿನಿಮಾ ಪುರವಣಿ ಓದಿರಿ

Dr. AMBEDKAR INSTITUTE OF TECHNOLOGY
BDA Outer Ring Road, Mallathahally, Bengaluru - 560 056
Tel : 080- 23211232 & Mob No : 99860 03865

AIT/SS/589/2023-24 Date: 13-07-2023

TENDER NOTIFICATION

Sealed quotations are invited from Reputed/ Authorized firms for supply & Installation of the following Lab Equipments to various Department.

A) Aircraft propulsion Lab Equipments to Aeronautical Engg Dept.
B) Equipments to E & C Dept under VGST Grant.
C) Equipments to E E E Dept under VGST Grant.

Details and specification of requirements can be downloaded from college website www.drait.edu.in. The sealed quotation shall be attached with a DD of Rs 500/- for each item on or before 07.08.2023 and submit the sealed quotations on or before 08.08.2023 by 1.00 PM. Quotations will be opened on the same day i.e.08.08.2023 at 4.00 PM.

Principal Secretary, PVPWT

ALVA'S EDUCATION FOUNDATION (R.)
MOODUBIDIRE - 574 227 D. K.

REQUIRED

SWIMMING COACH
LIFEGUARD AT SWIMMING POOL (Male /Female)
SWIMMING POOL PLANT OPERATOR
SHUTTLE BADMINTON COACH
ZUMBA TRAINER (Male /Female)
YOGA COACH (Male /Female)

ELIGIBILITY
Qualification and Experience in respective field.
Eligible candidates mail your updated bio-data to alvasjobs@gmail.com within 7 days

Contact: 8971161797, 8746960017

8 ದಿನ: ₹ 1.71 ಕೋಟಿ ದಂಡ ಸಂಗ್ರಹ

ಬೆಂಗಳೂರು: ಶೇ 50ರಷ್ಟು ರಿಯಾಯಿತಿ ಘೋಷಿಸಿದ್ದರಿಂದ, ಜುಲೈ 6ರಿಂದ 13ರ ರಾತ್ರಿ 8 ಗಂಟೆಯವರೆಗೆ ₹ 1.71 ಕೋಟಿ ದಂಡ ಸಂಗ್ರಹವಾಗಿದೆ.

‘ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿ ಮೇಲೆ ರಿಯಾಯಿತಿ ಘೋಷಿಸಿದ್ದರಿಂದ, ಜನರಿಂದ ಉತ್ತಮ ಸ್ಪಂದನ ವ್ಯಕ್ತವಾಗುತ್ತಿದೆ. ಆನ್‌ಲೈನ್ ಹಾಗೂ ಆಫ್‌ಲೈನ್ ಮೂಲಕ ಜನರು ದಂಡ ಪಾವತಿಸುತ್ತಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಎಂಟು ದಿನಗಳಲ್ಲಿ 54,634 ಪ್ರಕರಣಗಳ ಇತ್ಯರ್ಥಗೊಂಡಿವೆ. 2023ರ ಫೆಬ್ರುವರಿ 11ರೊಳಗಿನ ಪ್ರಕರಣಗಳಿಗೆ ರಿಯಾಯಿತಿ ಸೌಲಭ್ಯವಿದ್ದು, ಸೆಪ್ಟೆಂಬರ್ 9ರೊಳಗಾಗಿ ದಂಡ ಪಾವತಿಸಲು ಅವಕಾಶವಿದೆ’ ಎಂದು ತಿಳಿಸಿದರು.

ಪೊಲೀಸ್ ಕಾರ್ಯವೈಖರಿ: ಜನರ ಪ್ರತಿಕ್ರಿಯೆಗೆ ‘ಲೋಕಸ್ಪಂದನ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಪೊಲೀಸರ ಕಾರ್ಯವೈಖರಿ ಬಗ್ಗೆ ಸಾರ್ವಜನಿಕರಿಂದ ಪ್ರತಿಕ್ರಿಯೆ ಪಡೆಯಲು ‘ಲೋಕಸ್ಪಂದನ’ ಕ್ಯೂ ಆರ್ ಕೋಡ್ ವ್ಯವಸ್ಥೆ ಜಾರಿಗೆ ತರಲಾಗಿದೆ.

‘ಜನಸ್ನೇಹಿ ಪೊಲೀಸ್ ವ್ಯವಸ್ಥೆ ರೂಪಿಸುವುದು ನಮ್ಮ ಆದ್ಯತೆ. ನಗರದ ಪ್ರತಿಯೊಂದು ಠಾಣೆಗಳಲ್ಲೂ ಲೋಕಸ್ಪಂದನ ಕ್ಯೂ ಆರ್ ಕೋಡ್ ಅಳವಡಿಸಲಾಗಿದೆ. ಠಾಣೆಗೆ ಭೇಟಿ ನೀಡುವ ಜನರು, ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ, ಪ್ರತಿಕ್ರಿಯೆ ತಿಳಿಸಬಹುದು’ ಎಂದು ಕಮಿಷನರ್ ಬಿ. ದಯಾನಂದ್ ತಿಳಿಸಿದ್ದಾರೆ.

‘ಪೊಲೀಸರು ಹೇಗೆ ಕೆಲಸ ಮಾಡುತ್ತಾರೆ? ನಿಮ್ಮೊಂದಿಗೆ ಹೇಗೆ ನಡೆದುಕೊಂಡರು ? ಅವರ ಕೆಲಸ ತೃಪ್ತಿ ತಂದಿದೆಯಾ? ಎಂಬಿತ್ಯಾದಿ ವಿಷಯಗಳನ್ನು ಜನರು ಮುಕ್ತವಾಗಿ ಹಂಚಿಕೊಳ್ಳಬಹುದು. ದೂರುಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು. ಪೊಲೀಸ್ ವ್ಯವಸ್ಥೆಯನ್ನು ಮತ್ತಷ್ಟು ಉತ್ತಮಗೊಳಿಸಲು ಜನರ ಪ್ರತಿಕ್ರಿಯೆ ಸಹಾಯವಾಗಲಿದೆ’ ಎಂದು ಹೇಳಿದ್ದಾರೆ.

‘ಪೊಲೀಸರ ಬಗ್ಗೆ ಅಭಿಪ್ರಾಯ ಸಂಗ್ರಹಿಸಲು ಬಂಡೇಪಾಳ್ಯ ಠಾಣೆಯಲ್ಲಿ ‘ದರ್ಪಣ’ ಕ್ಯೂ ಆರ್ ಕೋಡ್ ವ್ಯವಸ್ಥೆಯನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗಿತ್ತು. ಅದೇ ವ್ಯವಸ್ಥೆ ಅಗ್ನೇಯ ವಿಭಾಗದಲ್ಲಿ ವಿಸ್ತರಿಸಲಾಗಿತ್ತು. ಇದೀಗ ಇದೇ ಮಾದರಿಯಲ್ಲಿ, ‘ಲೋಕಸ್ಪಂದನ’ ವ್ಯವಸ್ಥೆ ಜಾರಿಗೊಳಿಸಲಾಗಿದೆ.

ಬೆಂಗಳೂರು ಪೊಲೀಸರ ‘ಲೋಕಸ್ಪಂದನ’ ವ್ಯವಸ್ಥೆ ಕ್ಯೂ ಆರ್ ಕೋಡ್

E-book today at www.marutisuzuki.com or visit your nearest Maruti Suzuki dealership. | For bulk orders, please contact: shubham.mittal@maruti.co.in

MARUTI SUZUKI AUTHORISED DEALERS: BENGALURU: BIMAL: ITPL ROAD, YELAHANKA, BANASHANKARI, VARTHUR, DOMLUR, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYAPURA, H CROSS, BUDIGERE, GUDIBANDA, HESARGHATTA, VIJAYAPURA, PERASANDRA PH: 080-30693069. VARUN MOTORS: MALLESHWARAM, HEBBAL, INFANTRY ROAD, RAJANAKUNTE PH: 78991 00200. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI, DABASPETE : 95909 90011. KATARIA: KANAKAPURA ROAD, PH: 78990 40000. MANDOVI: BASAVANAGUDI, ST JOHNS ROAD, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELE, SRINIVASAPURA, HAROHALLI PH: 8884442299. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 99802 11099.

*Offer includes consumer offer, exchange bonus, Gold coin offer and corporate offer (wherever applicable) on selected models/ variants. Above mentioned savings amount is the value of maximum savings on selected models/variants. **Terms and conditions apply. Terms and conditions are subject to change without any prior notice. Accessories and features shown in the pictures may not be a part of standard equipment and may vary according to the variant. ^Gold coin offer is applicable on select models/variants only on bookings of vehicle on or before 17th July, 2023. Black Glass Shade on the vehicle is due to the lighting effect. For more details, please contact your nearest ARENA dealership. Cumulative Sales. All offers are for limited period and for limited stock only. Images used are for illustration purposes only. Car color may vary due to printing on paper. Offers vary across variants. Maruti Suzuki India Limited reserves the right to discontinue offers without notice. Above offer is valid till 31st July, 2023.

'ಹಸಿರು ಬೆಂಗಳೂರು': ರಸ್ತೆಯಲ್ಲಿ ಮರ ಬೆಳೆಸುವ ಯೋಜನೆ; ಮುಂದಿನ ವಾರ ಚಾಲನೆ

ಸಸಿ ಪೋಷಿಸುವ ವಿದ್ಯಾರ್ಥಿ 'ಹಸಿರು ರಕ್ಷಕ'

• ಆರ್. ಮಂಜುನಾಥ್

ಬೆಂಗಳೂರು: ನಗರದ ರಸ್ತೆಗಳಲ್ಲಿನ ಸಸಿಗಳನ್ನು ತಮ್ಮ ಹೆಸರಿನಲ್ಲಿ ಪೋಷಿಸುವ ಅವಕಾಶ ವಿದ್ಯಾರ್ಥಿಗಳು ಬಂದೊದಗಿದೆ. ಮೂರು ವರ್ಷ ಗಿಡವನ್ನು ಕಾಪಾಡಿಕೊಂಡು ಮರವಾಗಿಸಿದರೆ 'ಹಸಿರು ರಕ್ಷಕ' ಬಿರುದೂ ಅವರದಾಗಲಿದೆ.

ಬಿಬಿಎಂಪಿ ವ್ಯಾಪ್ತಿಯ ರಸ್ತೆಗಳನ್ನು ಹಸಿರುಮಯವಾಗಿಸುವ ಉದ್ದೇಶದಿಂದ ಅರಣ್ಯ ವಿಭಾಗದ ವತಿಯಿಂದ 'ಹಸಿರು ಬೆಂಗಳೂರು' ಅಭಿಯಾನ ಮುಂದಿನ ವಾರದಿಂದ ಜಾರಿಯಾಗುತ್ತಿದೆ. ಗುಂಡಿ ಮಾಡಿ, ಮಣ್ಣು–ಗೊಬ್ಬರಸಹಿತ ಸಸಿ ನೆಡುವುದು, ರಕ್ಷಾಕವಚ ಹಾಕುವ ಕೆಲಸವನ್ನೆಲ್ಲ ಬಿಬಿಎಂಪಿಯೇ ಮಾಡುತ್ತದೆ. ಅದರ ಪೋಷಣೆ, ನಿರ್ವಹಣೆ ಕಾರ್ಯವನ್ನು ವಿದ್ಯಾರ್ಥಿಗಳು ಮಾಡಬೇಕು.

'ಹಸಿರು ಬೆಂಗಳೂರು' ಯೋಜನೆಯಡಿ ಬಿಬಿಎಂಪಿಯ ಎಲ್ಲ ಶಾಲೆಗಳ ಮಕ್ಕಳಿಗೆ ಅವಕಾಶ ನೀಡಲಾಗುತ್ತಿದೆ. ಆಯಾ ಶಾಲೆಗಳ ಸಮೀಪದ ರಸ್ತೆಗಳಲ್ಲಿ ಸಸಿಗಳನ್ನು ಪೋಷಿಸುವ ಕಾರ್ಯ ಅವರಿಗೆ ನೀಡಲಾಗುತ್ತದೆ. ಪ್ರತಿಯೊಬ್ಬ ವಿದ್ಯಾರ್ಥಿಗೆ ಒಂದು ಸಸಿಯ ಜವಾಬ್ದಾರಿ ನೀಡಿ, ಅದಕ್ಕೆ ಅವರ ಹೆಸರಿನ ಫಲಕವನ್ನು ಹಾಕಲಾಗುತ್ತದೆ. ಬಿಬಿಎಂಪಿಯ ಅರಣ್ಯ ವಿಭಾಗ ಎಲ್ಲ ರೀತಿಯ ಕಾರ್ಯವನ್ನೂ ಮಾಡಲಿದ್ದು, ಅದರ ಮೇಲುಸ್ತುವಾರಿಯನ್ನು ವಿದ್ಯಾರ್ಥಿ ವಹಿಸಿಕೊಳ್ಳಬೇಕು.

ಗಿಡ ನೆಟ್ಟ ಮೇಲೆ ಅದಕ್ಕೆ ಬೇಕಿರುವ ನೀರು ಸಿಗುತ್ತಿದೆಯೇ, ಗೊಬ್ಬರ ಹಾಕಬೇಕೇ? ಏನಾದರೂ ಸಮಸ್ಯೆ ಆಗುತ್ತಿದೆಯೇ ಎಂದು ನೋಡಿಕೊಳ್ಳಬೇಕು. ಅದರ ಮಾಹಿತಿಯನ್ನು ಶಾಲೆಯ ಮುಖ್ಯಸ್ಥರಿಗೆ ನೀಡಿದರೆ ಅರಣ್ಯ ವಿಭಾಗದವರು ಬಂದು ಗಮನ ಹರಿಸುತ್ತಾರೆ. ಹೀಗೆ ಮೂರು ವರ್ಷ ತಮ್ಮ ಹೆಸರಿನ ಸಸಿಯನ್ನು ಪೋಷಿಸಿ ಮರವಾಗಿಸಿದರೆ ಅವರಿಗೆ 'ಹಸಿರು ರಕ್ಷಕ' ಎಂಬ ಬಿರುದು ನೀಡಿ, ಪ್ರಮಾಣಪತ್ರ ವಿತರಿಸಲಾಗುತ್ತದೆ. ಅತ್ಯುತ್ತಮವಾಗಿ ನಿರ್ವಹಿಸಿದವರಿಗೆ ಬಹುಮಾನ ನೀಡುವ ಯೋಜನೆಯೂ ಇದೆ ಎಂದು ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗರ್ ಅವರು ಹೇಳಿದರು.

'ಹಸಿರು ಬೆಂಗಳೂರು' ಅಭಿಯಾನಕ್ಕೆ ಯಲಹಂಕ ನರ್ಸರಿಯಲ್ಲಿ ಸಿದ್ಧವಿರುವ ಸಸಿಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗರ್ ಪರಿಶೀಲಿಸಿದರು

ಪ್ರಜಾವಾಣಿ ವಿಶೇಷ

ಶಾಲೆಗಳದ್ದೇ ಜವಾಬ್ದಾರಿ: ಡಿಸಿಎಫ್

'ಪ್ರಾರಂಭದಲ್ಲಿ ನಾವು ಬಿಬಿಎಂಪಿಯ 16 ಶಾಲೆಗಳ 5ರಿಂದ 7ನೇ ತರಗತಿಯ ಮಕ್ಕಳಿಗೆ ಅವಕಾಶ ನೀಡುತ್ತಿದ್ದೇವೆ. ನೋಂದಣಿ ಮಾಡಿಕೊಳ್ಳುವುದು, ಯಾವ ಗಿಡವನ್ನು ಯಾರು ನೋಡಿಕೊಳ್ಳುತ್ತಾರೆ ಎಂಬುದನ್ನು ಶಾಲೆಯ ಮುಖ್ಯಸ್ಥರೇ ನಿರ್ಧರಿಸಬೇಕು. ಮೂರು ವರ್ಷ ಸಸಿಯನ್ನು ವಿದ್ಯಾರ್ಥಿಗಳು ಪೋಷಿಸಿದ ಮೇಲೆ, ಮರ ರಕ್ಷಿಸಿಕೊಳ್ಳುವ ಜವಾಬ್ದಾರಿ ಶಾಲೆಯದ್ದು' ಎಂದು ಬಿಬಿಎಂಪಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಸರೀನಾ ಸಿಕ್ಕಲಿಗರ್ ಹೇಳಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಪರಿಸರ ದಿನದಂದು ಮಕ್ಕಳಿಂದ ಗಿಡ ನಡೆಸಿ, ಅದನ್ನು ಪೋಷಿಸುವ ಜವಾಬ್ದಾರಿ ನೀಡಿ ಎಂದು ಹೇಳಿದ್ದರು. ಅದರಂತೆಯೇ 'ಹಸಿರು ಬೆಂಗಳೂರು' ಯೋಜನೆಯನ್ನು ಪ್ರಾರಂಭಿಸುತ್ತಿದ್ದೇವೆ. ಖಾಸಗಿ ಶಾಲೆಯ ಮಕ್ಕಳು ಇದರಲ್ಲಿ ಭಾಗವಹಿಸುವ ಆಸಕ್ತಿ ಹೊಂದಿದ್ದರೆ, ಅವರ ಶಾಲೆಯ ಮುಖ್ಯಸ್ಥರ ಮೂಲಕ ಬಿಬಿಎಂಪಿ ಅರಣ್ಯ ವಿಭಾಗವನ್ನು ಸಂಪರ್ಕಿಸಬಹುದು ಎಂದು ಹೇಳಿದರು.

1 ಲಕ್ಷ ಸಸಿ ನೆಡುವ ಗುರಿ

'ಹಸಿರು ಬೆಂಗಳೂರು' ಯೋಜನೆಯಡಿ ಈ ವರ್ಷ ನಗರದ ರಸ್ತೆಗಳಲ್ಲಿ ಒಂದು ಲಕ್ಷ ಸಸಿ ನೆಡುವ ಗುರಿಯನ್ನು ಬಿಬಿಎಂಪಿ ಅರಣ್ಯ ಇಲಾಖೆ ಹೊಂದಿದೆ. ಹುಣಸೆ, ನೇರಳೆ, ಹೊಂಗೆ, ತಬೂಬಿಯಾ, ಮಹಾಗನಿ, ಆಲ, ಹತ್ತಿ ಸಸಿಗಳನ್ನು ನೆಡಲಾಗುತ್ತದೆ. ಮಕ್ಕಳು ಅವರಿಗೆ ಇಷ್ಟವಾಗುವ ಸಸಿಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

ಸುದ್ದಿ 2 ನಿಮಿಷ

ಬೆತ್ತಲೆ ವಿಡಿಯೊ ಕರೆ: ವಕೀಲರಿಗೆ ಬ್ಲ್ಯಾಕ್‌ಮೇಲ್

ಬೆಂಗಳೂರು: ಕಕ್ಷಿದಾರರ ಹೆಸರಿನಲ್ಲಿ ವಿಡಿಯೊ ಕರೆ ಮಾಡಿ ಬೆತ್ತಲಾಗಿದ್ದ ಯುವತಿಯೊಬ್ಬರು ವಕೀಲರ ವಿಡಿಯೊ ಚಿತ್ರೀಕರಿಸಿ ಹಣಕ್ಕಾಗಿ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದು, ಉಪ್ಪಾರಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಸ್ಥಳೀಯ ನಿವಾಸಿಯಾಗಿರುವ ವಕೀಲರೊಬ್ಬರು ದೂರು ನೀಡಿದ್ದಾರೆ. ಆರೋಪಿಗಳಾದ ಕವಿತಾ ಶರ್ಮಾ, ವಿಕ್ರಮ್ ರಾಥೋರೆ ಹಾಗೂ ರಾಹುಲ್ ಶರ್ಮಾ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಜೂ. 26ರಂದು ರಾತ್ರಿ ಕವಿತಾ ಶರ್ಮಾ ಹೆಸರಿನಲ್ಲಿ ವಕೀಲರಿಗೆ ಕರೆ ಮಾಡಿದ್ದ ಯುವತಿ, 'ನನ್ನದೊಂದು ಮೊಕದ್ದಮೆ ಇದೆ. ಮಾತನಾಡಬೇಕು' ಎಂದಿದ್ದರು. ಕಚೇರಿಗೆ ಬಂದು ಭೇಟಿಯಾಗಲು ದೂರುದಾರ ಹೇಳಿದ್ದರು.'

'27ರಂದು ಬೆಳಿಗ್ಗೆ ವಿಡಿಯೊ ಕರೆ ಮಾಡಿದ್ದ ಯುವತಿ, ಸಲುಗೆಯಿಂದ ಮಾತನಾಡಿದ್ದರು. ಏಕಾಏಕಿ ಬಟ್ಟೆಗಳನ್ನು ಬಿಚ್ಚಿ ಬೆತ್ತಲಾಗಿದ್ದರು. ಯುವತಿ ವರ್ತನೆ ಗಮನಿಸಿ ಅನುಮಾನಗೊಂಡಿದ್ದ ವಕೀಲ, ಕರೆ ಕಡಿತಗೊಳಿಸಿದ್ದರು. ಆಗ ಯುವತಿ, ತನ್ನ ವಿಡಿಯೊ ಜೊತೆ ವಕೀಲರ ವಿಡಿಯೊವನ್ನು ಚಿತ್ರೀಕರಿಸಿಕೊಂಡಿದ್ದರು' ಎಂದು ಮೂಲಗಳು ತಿಳಿಸಿವೆ. 'ಜುಲೈ 1ರಂದು ವಕೀಲರಿಗೆ ಕರೆ ಮಾಡಿದ್ದ ಆರೋಪಿ ವಿಕ್ರಮ್, 'ನಾನು ಸಿಬಿಐ ಅಧಿಕಾರಿ. ಲೈಂಗಿಕ ಕಿರುಕುಳ ಸಂಬಂಧ ಯುವತಿಯೊಬ್ಬರು ನಿಮ್ಮ ಮೇಲೆ ದೂರು ನೀಡಿದ್ದಾರೆ. ನಿಮ್ಮ ಹಾಗೂ ಯುವತಿಯ ಬೆತ್ತಲೆ ವಿಡಿಯೊವನ್ನು ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಲಾಗಿದೆ. ವಿಡಿಯೊ ತೆಗೆಸಲು ರಾಹುಲ್ ಶರ್ಮಾ ಎಂಬಾತನನ್ನು ಸಂಪರ್ಕಿಸಿ' ಎಂದಿದ್ದ. ರಾಹುಲ್‌ಗೆ ದೂರುದಾರ ಕರೆ ಮಾಡಿದಾಗ, 'ಯೂಟ್ಯೂಬ್‌ನಲ್ಲಿರುವ ಫೋಟೊ ಹಾಗೂ ವಿಡಿಯೊ ತೆಗೆಯಲು ₹ 11,500 ನೀಡುವಂತೆ ರಾಹುಲ್ ಒತ್ತಾಯಿಸಿದ್ದ ಎನ್ನಲಾಗಿದೆ.

ಏಟ್ರಿಯಾ ಇನ್‌ಸ್ಟಿಟ್ಯೂಟ್‌ಗೆ 'ಎ++'

ಬೆಂಗಳೂರು: ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿಯಿಂದ ಬೆಂಗಳೂರಿನ ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ ಎ + + ಮಾನ್ಯತೆ ದೊರೆತಿದ್ದು, 3.54ರಷ್ಟು ಸಿಜಿಪಿಎ ಅಂಕಗಳು ಲಭಿಸಿವೆ.

ಸಂಸ್ಥೆಯ ಪ್ರಾಂಶುಪಾಲರಾದ ಐಶ್ವರ್ಯ ಪಿ. 'ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಶಿಕ್ಷಣ ಕ್ಷೇತ್ರದಲ್ಲಿ ಮುಂಚೂಣಿಯಲ್ಲಿದೆ. ಸ್ವಾಯತ್ತತೆ ಮತ್ತು ಎನ್‌ಇಪಿ 2020 ಅನುಷ್ಠಾನಕ್ಕೆ ತರುವುದು ಮತ್ತು ನ್ಯಾಕ್(ಎನ್‌ಎಎಸಿ) ಪರಿಷ್ಕೃತ ಆವರ್ತನದಲ್ಲಿ ಎ + + ಗ್ರೇಡ್ ಪಡೆದಿರುವುದು ಹೆಮ್ಮೆಯ ಸಂಗತಿ' ಎಂದು ಹೇಳಿದರು.

ನಗರದ ಕೇಂದ್ರ ಭಾಗದಲ್ಲಿರುವ ಸಂಸ್ಥೆಯು ಪ್ರಸ್ತುತ 2,526 ವಿದ್ಯಾರ್ಥಿಗಳನ್ನು ದಾಖಲಿಸಿಕೊಂಡಿದೆ. 152 ಬೋಧನಾ ಸಿಬ್ಬಂದಿಯನ್ನು ನೇಮಿಸಿಕೊಂಡಿದೆ. ಇದು ಅಗ್ರಮಾನ್ಯ ತಾಂತ್ರಿಕ ವಿದ್ಯಾಸಂಸ್ಥೆಗಳಲ್ಲಿ ಒಂದಾಗಿ ಹೊರಹೊಮ್ಮಿದೆ ಎಂದು ತಿಳಿಸಿದ್ದಾರೆ.

ಎಲೆಯಲ್ಲವೋ ಇದು, ಹಕ್ಕಿಗಳ ಬಲೆಯು

ಬೆಂಗಳೂರಿನ ಚಿಕ್ಕಲಾಲ್‌ಬಾಗ್‌ನಲ್ಲಿ ಎಲೆ ಉದುರಿಸಿಕೊಂಡು ಬೋಳಾಗಿರುವ ಮರದಲ್ಲಿ ಕುಳಿತಿರುವ ಪಾರಿವಾಳಗಳು

-ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ನೆಲಮಂಗಲ–ದೇವನಹಳ್ಳಿ ಸಿಗ್ನಲ್ ರಹಿತ ರಸ್ತೆ ಕಾಮಗಾರಿ ವಿಳಂಬ

• ಬೈಲಮೂರ್ತಿ ಜಿ

ಹೆಸರಘಟ್ಟ: ಬೆಂಗಳೂರು– ದೇವನಹಳ್ಳಿ ವಿಮಾನ ನಿಲ್ದಾಣ ರಸ್ತೆಯಲ್ಲಿನ ಟ್ರಾಫಿಕ್ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ನಾಲ್ಕು ವರ್ಷಗಳ ಹಿಂದೆ ಆರಂಭವಾದ ನೆಲಮಂಗಲ–ದೇವನಹಳ್ಳಿ ಸಿಗ್ನಲ್ ರಹಿತ ರಸ್ತೆ ಕಾಮಗಾರಿಯು ಕುಂಟುತ್ತಾ ಸಾಗುತ್ತಿದೆ.

ಒಟ್ಟು 39 ಕಿ.ಮೀ ಉದ್ದದ ರಸ್ತೆ ಇದಾಗಿದ್ದು, ನೆಲಮಂಗಲದ ಹ್ಯಾಡಾಳು, ರೈಲ್ವೆ ಗೊಲ್ಲಹಳ್ಳಿ, ಅರ್ಜುನ ಬೆಟ್ಟಹಳ್ಳಿ ಕ್ರಾಸ್‌ವರೆಗಿನ ರಸ್ತೆ ಕಾಮಗಾರಿಗಳು ಸಂಪೂರ್ಣ ಸ್ಥಗಿತಗೊಂಡಿವೆ. ರಸ್ತೆ ಕಾಮಗಾರಿ ಮಾಡುತ್ತಿರುವ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್) ಕಾಮಗಾರಿಯನ್ನು ವಿಳಂಬ ಮಾಡುತ್ತಿರುವುದಾಗಿ ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮಳೆಯಾದರೆ ದ್ವಿಚಕ್ರ ವಾಹನ ಸವಾರರು ಈ ರಸ್ತೆಯಲ್ಲಿ ಸಂಚರಿಸುವುದೇ ದುಸ್ತರವಾಗಿ ಪರಿಣಮಿಸಿದೆ. ಗುಂಡಿ ಯಾವುದು, ರಸ್ತೆ ಯಾವುದು ಎಂಬುದು ಗೊತ್ತಾಗದೇ ದ್ವಿಚಕ್ರ ವಾಹನ ಸವಾರರು ಅಪಘಾತಕ್ಕೀಡಾಗುತ್ತಿದ್ದಾರೆ. ರಸ್ತೆ ಮಧ್ಯದಲ್ಲಿರುವ ಮರಗಳು, ವಿದ್ಯುತ್ ಕಂಬಗಳನ್ನು ತೆರವುಗೊಳಿಸದೇ ಇರುವುದರಿಂದ ಸಂಚಾರವೇ ಅಪಾಯಕಾರಿ ಕಸರತ್ತಾಗಿ ಪರಿಣಮಿಸಿದೆ.

ಕೂಡು ರಸ್ತೆಯಿಂದ ಬಾಲಾಜಿ ಕಲ್ಯಾಣ ಮಂಟಪದ ಮೂಲಕ ರೈಲ್ವೇ ಮೇಲ್ಸೇತುವೆವರೆಗೆ ಪರ್ಯಾಯ ರಸ್ತೆ ಇದೆ. ಅದನ್ನು ಅಭಿವೃದ್ಧಿ ಮಾಡಿದ್ದರೆ ಅನುಕೂಲವಾಗುತ್ತಿತ್ತು ಎಂಬುದು ವಾಹನ ಸವಾರರ ಅಭಿಪ್ರಾಯವಾಗಿದೆ. ಎರಡೂ ಕಡೆ ರಸ್ತೆಗೆ ಅಡ್ಡವಾಗಿ ಮಣ್ಣು ಸುರಿದು ರಸ್ತೆ ಬಂದ್ ಮಾಡಿರುವುದರಿಂದ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ.

ಭೂಸ್ವಾಧೀನ ಪ್ರಕ್ರಿಯೆಯಿಂದ ಕಾಮಗಾರಿ ವಿಳಂಬವಾಗುತ್ತಿದೆ. ಆದಷ್ಟು ಬೇಗ ಕಾಮಗಾರಿಯನ್ನು ಪೂರ್ಣ ಮಾಡಲಾಗುತ್ತದೆ ಎಂದು ಕೆಆರ್‌ಡಿಸಿಎಲ್ ಅಧಿಕಾರಿಗಳು ಸಬೂಬು ಹೇಳುತ್ತಿದ್ದಾರೆ.

ರೈಲ್ವೆ ಗೊಲ್ಲಹಳ್ಳಿ ಬಳಿ ಸ್ಥಗಿತ ಗೊಂಡಿರುವ ಮೇಲ್ಸೇತುವೆ ಕಾಮಗಾರಿ

ಭೂಸ್ವಾಧೀನ ಪ್ರಕ್ರಿಯೆ ಮುಗಿದಿದ್ದು, ರೈತರಿಗೆ ಹಣ ಬಿಡುಗಡೆಯಾದ ಕೂಡಲೇ ರಸ್ತೆ ಕಾಮಗಾರಿಯನ್ನು ತ್ವರಿತ ಗತಿಯಲ್ಲಿ ಮಾಡಲಾಗುವುದು.

ಮಂಜುನಾಥ್, ಎಇಇ, ಕೆಆರ್‌ಡಿಸಿಎಲ್

ರಸ್ತೆ ಕಾಮಗಾರಿ ವಿಳಂಬವಾಗುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಕೂಡಲೇ ಅಧಿಕಾರಿಗಳನ್ನು ಕರೆದು ಸಭೆ ನಡೆಸಿ ತುರ್ತು ಕ್ರಮ ಕೈಗೊಳ್ಳಲಾಗುವುದು.

ಶ್ರೀನಿವಾಸ್.ಎನ್., ಶಾಸಕ, ನೆಲಮಂಗಲ

ಮಳೆ ಬಂದಾಗ ಓಡಾಡಲು ತೊಂದರೆಯಾಗುತ್ತಿದ್ದು ಕೆಸರಿನಲ್ಲಿ ರಸ್ತೆ ಗುಂಡಿ ಕಾಣದೆ ವಾಹನಗಳು ಹಾನಿಗೀಡಾಗುತ್ತಿವೆ. ಬೇಗ ಕಾಮಗಾರಿ ಮುಗಿಸಬೇಕು.

ಮೋಹನ್ ಕುಮಾರ್, ಆಟೋ ಚಾಲಕ

ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪತ್ರಿಕೆ ಚಂದಾದಾರರಾಗಲು / ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಕ್ಕೆ
8147623791
080 45557204
readerservicecell@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ
bit.ly/40dPCqy

ವಿದ್ಯುತ್ ವ್ಯತ್ಯಯ ಇಂದು

ಬೆಂಗಳೂರು: ಚಂದಾಪುರ ಉಪ ಕೇಂದ್ರದಲ್ಲಿ ನಿರ್ವಹಣಾ ಕಾರ್ಯ ಕೈಗೊಂಡಿರುವುದರಿಂದ ಇದೇ 14ರಂದು ಬೆಳಿಗ್ಗೆ 8ರಿಂದ ರಾತ್ರಿ 8ಗಂಟೆವರೆಗೆ ಕಿತ್ತಿಗಾನಹಳ್ಳಿ ಗ್ರಾಮ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

ಪೌರಾಣಿಕ ಯಕ್ಷ ಹಬ್ಬ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಪಾರು ಮಿತ್ರ ಬಳಗದಿಂದ ಜುಲೈ 15ರಂದು ರಾತ್ರಿ 10ರಿಂದ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಪೆರ್ಡೂರು ಮೇಳ ಮತ್ತು ಅತಿಥಿ ದಿಗ್ಗಜರ ಕೂಡುವಿಕೆಯಲ್ಲಿ ಪೌರಾಣಿಕ ಯಕ್ಷ ಹಬ್ಬ ನಡೆಯಲಿದೆ.

'ಕೃಷ್ಣಾರ್ಜುನ', 'ವೀರವರ್ಮ', 'ಬಬ್ರುವಾಹನ' ಯಕ್ಷಗಾನ ಪ್ರಸಂಗಗಳ ಪ್ರದರ್ಶನ ನಡೆಯಲಿದ್ದು, ಅತಿಥಿ ಕಲಾವಿದರಾಗಿ ಕೊಳಗಿ ಕೇಶವ ಹೆಗಡೆ, ಕೊಂಡದಕುಳಿ ರಾಮಚಂದ್ರ ಹೆಗಡೆ, ತೋಟಿಮನೆ ಗಣಪತಿ ಹೆಗಡೆ, ವಿದ್ಯಾಧರ ರಾವ್ ಜಲವಳ್ಳಿ, ಸೀತಾರಾಮ ಕುಮಾರ್ ಭಾಗವಹಿಸಲಿದ್ದಾರೆ.

ಪೆರ್ಡೂರು ಮೇಳದ ಕಲಾವಿದರಾಗಿ ರಾಘವೇಂದ್ರ ಆಚಾರ್ಯ ಜನ್ಸಾಲೆ, ಬಾಳ್ಕಲ್, ಕಡಬಾಳ್, ಯಲಗುಪ್ಪ, ಉಪ್ಪೂರ್, ಬೇರೊಳ್ಳಿ, ಕಾರ್ತಿಕ ಚಿಟ್ಟಾಣಿ, ದೇವಾಡಿಗ, ಮೂಡ್ಕಣಿ ಭಾಗವಹಿಸುವರು ಎಂದು ಸಂಯೋಜಕ ಅಂಪಾರು ರತ್ನಾಕರ ಶೆಟ್ಟಿ ಅವರು ತಿಳಿಸಿದ್ದಾರೆ.

'ಕಲಿಯುಗ ದೈವ ಕೊರಗಜ್ಜ' ಯಕ್ಷಗಾನ ಪ್ರದರ್ಶನ ಇಂದು

ಬೆಂಗಳೂರು: ಬಡಗು ತಿಟ್ಟಿನ ಪೆರ್ಡೂರು ಮೇಳ ಹಾಗೂ ತೆಂಕು ತಿಟ್ಟಿನ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ 'ಕಲಿಯುಗ ದೈವ ಕೊರಗಜ್ಜ' ಎಂಬ ಪ್ರಸಂಗವು, ಹಲವು ವಿಶೇಷತೆಗಳೊಂದಿಗೆ ಶುಕ್ರವಾರ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ರಾತ್ರಿ 10.30ರಿಂದ ಇಡೀ ರಾತ್ರಿ ಪ್ರದರ್ಶನಗೊಳ್ಳಲಿದೆ.

ಹಲವು ಪ್ರಸಂಗಗಳ ಮೂಲಕ ಮನೆಮಾತಾಗಿರುವ ಪ್ರಸಂಗಕರ್ತ ದೇವದಾಸ್ ಈಶ್ವರಮಂಗಲ ವಿರಚಿತ 87ನೇ ಪ್ರಸಂಗವನ್ನು ಶಾಸಕ ಗುರುರಾಜ್ ಗಂಟಿಹೊಳೆ ಅವರು ಇದೇ ವೇದಿಕೆಯಲ್ಲಿ ಬಿಡುಗಡೆ ಮಾಡಲಿದ್ದಾರೆ. ಈಗಾಗಲೇ ಕೊರಗಜ್ಜ ದೈವದ ಕುರಿತಾಗಿ ಹಲವು ಯಕ್ಷಗಾನ ಪ್ರಸಂಗಗಳು ರಚನೆಯಾಗಿವೆ. ದೇವದಾಸ್ ಅವರ ಹೊಸ ರಚನೆಯ ಈ ಪ್ರಸಂಗದ ಪ್ರದರ್ಶನ ಸಂದರ್ಭ, ಜನ್ಸಾಲೆ ರಾಘವೇಂದ್ರ ಆಚಾರ್ಯ ಅವರು ತೆಂಕು ಶೈಲಿಯ ಭಾಗವತಿಕೆಯನ್ನೂ, ಪ್ರಸನ್ನ ಬಾಳ್ಕಲ್ ಅವರು ಜಾನಪದೀಯ ಗಾಯನವನ್ನೂ ಪ್ರಸ್ತುತಪಡಿಸಲಿದ್ದಾರೆ. ಜತೆಗೆ ಡಾ.ಪಾಂಡುರಂಗ ಅವರ ಕೊಳಲು, ಶಿವಶಕ್ತಿ ಮತ್ತು ವಿಷ್ಣು ಶಕ್ತಿ ದೇವತೆಗಳಾಗಿ ತೆಂಕು ಹಾಗೂ ಬಡಗಿನ ಯುವ ಕಲಾವಿದರ ಪೈಪೋಟಿಯ ಪ್ರದರ್ಶನವಿದೆ. ಮಾಹಿತಿಗೆ 9972738122 ಸಂಪರ್ಕಿಸಿ ಎಂದು ಪ್ರಕಟಣೆ ತಿಳಿಸಿದೆ.

ಮೈಸೂರು ರೇಸ್

ತೆಹಾನಿ ಗೆಲ್ಲುವ ನಿರೀಕ್ಷೆ

ಸ್ಪಾರ್ಕ್ ಮೈಸೂರು ರೇಸ್ ಕ್ಲಬ್ ಮಿಲಿಯನ್ 2023 ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ತೆಹಾನಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಮೈ ಲೈಫ್ ಮೈ ರೂಲ್ಸ್ 10, ಸಾರೋ ಬರ್ಡ್ 7, ಹರ್ರೇಮ್ 12
2ನೇ ರೇಸ್: ಅಸ್ಟಾರ್ 1, ಡಿ ಡಾನ್ ಕಿಂಗ್ 10, ಸ್ಕ್ವಾಂಟೊ 14
3ನೇ ರೇಸ್: ಅತುಲ್ಯಾ 2, ಲ್ಯಾಂಡ್ ಆಫ್ ಗೋಲ್ಡ್ 4, ಫರೆಟ್ಟಿ 3
4ನೇ ರೇಸ್: ಡಿ ರೋಮನ್ ರೀನ್ಸ್ 5, ಸರ್ ಕ್ಯಾಲ್‌ಕ್ಯುಲಸ್ 1, ಬ್ರ್ಯಾಕ್‌ಸ್‌ಟನ್ 2
5ನೇ ರೇಸ್: ಟೆಹಾನಿ 11, ನೆಜಯ್ಯಾ 8, ಮಲ್ಟಿಕ್ರೌನ್ 4
6ನೇ ರೇಸ್: ಅಮೆಜೋನಿಯಾ 14, ಪರ್ಫೆಕ್ಟ್ ಜಸ್ಟೀಸ್ 13, ಸ್ಮಾರ್ಟ್ ಕ್ಯಾಡಿಲ್ಯಾಕ್ 9
7ನೇ ರೇಸ್: ಟ್ರಸ್ಟ್ ಬಾಂಡ್ 1, ಮೂನ್‌ಲೈಟ್ ಕ್ವೀನ್ 7, ಗ್ಯಾಲರಿ ಕ್ವೀನ್ 2

ಉತ್ತಮ ಬೆಟ್: ಅಸ್ಟಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5.6,7

ನಕ್ಷೆ ಉಲ್ಲಂಘಿಸಿದ 80 ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬನಶಂಕರಿ ಸೇರಿದಂತೆ ಹಲವು ಪ್ರದೇಶಗಳಲ್ಲಿ ಅನುಮೋದಿತ ನಕ್ಷೆ ಉಲ್ಲಂಘಿಸಿ ನಿರ್ಮಿಸಲಾಗಿರುವ ಸುಮಾರು 80 ಕಟ್ಟಡಗಳನ್ನು ತೆರವುಗೊಳಿಸಲು ಬಿಬಿಎಂಪಿ ಮುಂದಾಗಿದೆ.

ಬಿಬಿಎಂಪಿ ದಕ್ಷಿಣ ವಲಯದಲ್ಲಿ ನಕ್ಷೆ ಉಲ್ಲಂಘಿಸಿ ಕಟ್ಟಡಗಳನ್ನು ನಿರ್ಮಿಸಲಾಗಿದೆ ಎನ್ನುವ ದೂರುಗಳು ಸಾರ್ವಜನಿಕರಿಂದ ಬಂದಿದ್ದವು. ಈ ದೂರುಗಳನ್ನು ಆಧರಿಸಿ ವಿಚಾರಣೆ ನಡೆಸಿರುವ ನಗರ ಯೋಜನಾ ಅಧಿಕಾರಿಗಳು, ಅಕ್ರಮವಾಗಿ ಕಟ್ಟಿರುವುದನ್ನು ದಾಖಲೆ ಸಹಿತ ಸಾಬೀತುಪಡಿಸಿದ್ದಾರೆ.

ದೂರು ಹಾಗೂ ಅಧಿಕಾರಿಗಳ ಸ್ಥಳಪರಿಶೀಲನೆಯನ್ನು ವಿಚಾರಣೆ ನಡೆಸಲಾಗಿದ್ದು, ನಕ್ಷೆ ಉಲ್ಲಂಘಿಸಿ ನಿರ್ಮಿಸಲಾಗಿರುವ ಕಟ್ಟಡಗಳ ತೆರವಿಗೆ ಆದೇಶ ಹೊರಡಿಸಲಾಗಿದೆ. ಹೀಗಾಗಿ, ಬನಶಂಕರಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗುರುವಾರ ಅಕ್ರಮ ಕಟ್ಟಡಗಳಿಗೆ ಗುರುತು ಮಾಡಲಾಗಿದೆ.

ಕಟ್ಟಡಗಳ ಮೇಲೆ ಎಷ್ಟು ಅಕ್ರಮ ಅಥವಾ ಹೆಚ್ಚುವರಿಯಾಗಿ ನಿರ್ಮಾಣ ಮಾಡಲಾಗಿದೆ ಎಂಬುದನ್ನು ಕೆಂಪು ಬಣ್ಣದಿಂದ ಬರೆಯಲಾಗಿದೆ. ಈ ವಾರಾಂತ್ಯಕ್ಕೆ ಗುರುತು ಮಾಡುವ ಕಾರ್ಯ ಮುಗಿಯಲಿದ್ದು, ಮುಂದಿನ ವಾರದಿಂದ ತೆರವು ಕಾರ್ಯ ಆರಂಭವಾಗಲಿದೆ ಎಂದು ಬೆಂಗಳೂರು ದಕ್ಷಿಣ ವಲಯದ ಆಯುಕ್ತ ಜಯರಾಂ ರಾಯಪುರ ತಿಳಿಸಿದರು.

ಮಾಹಿತಿ ನೀಡಿದರೆ ಕ್ರಮ: ಸಾರ್ವಜನಿಕರ ದೂರು ಆಧರಿಸಿ, ವಿಚಾರಣೆ ನಡೆಸಿ ಈಗ ತೆರವು ಕಾರ್ಯಕ್ಕೆ ಮುಂದಾಗಿದ್ದೇವೆ. ಈ ರೀತಿ ಇನ್ನೂ ಹಲವು ಕಟ್ಟಡಗಳು ನಕ್ಷೆ ಉಲ್ಲಂಘಿಸಿ ನಿರ್ಮಾಣವಾಗಿರಬಹುದು. ನಾಗರಿಕರು ದೂರು ನೀಡಿದರೆ, ಪರಿಶೀಲನೆ ನಡೆಸಿ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಜಯರಾಂ ಹೇಳಿದರು.

ನಕ್ಷೆ ಉಲ್ಲಂಘಿಸಿ ನಿರ್ಮಿಲಾಗಿರುವ ಕಟ್ಟಡಗಳ ಮೇಲೆ ಕೆಂಪು ಬಣ್ಣದಿಂದ ಅಕ್ರಮದ ಮಾಹಿತಿ ಬರೆಯಲಾಗಿದೆ.

'15 ವರ್ಷದಿಂದ ನಿವೇಶನ ಹಂಚಿಕೆ ಮಾಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂಚೆ ಮತ್ತು ದೂರಸಂಪರ್ಕ ಉದ್ಯೋಗಿಗಳನ್ನು ಪ್ರತಿನಿಧಿಸುವುದಾಗಿ ಹೇಳಿಕೊಳ್ಳುವ ವಸತಿ ಸಹಕಾರ ಸೊಸೈಟಿ, ಸಾವಿರಾರು ನಿವೇಶನ ಆಕಾಂಕ್ಷಿಗಳಿಂದ ಠೇವಣಿ ಪಡೆದು 15 ವರ್ಷವಾದರೂ ನಿವೇಶನ ಹಂಚಿಕೆ ಮಾಡಿಲ್ಲ.

ಕರ್ನಾಟಕ ಪೋಸ್ಟಲ್ ಆ್ಯಂಡ್ ಟೆಲಿಕಾಂ ಎಂಪ್ಲಾಯೀಸ್ ಹೌಸಿಂಗ್ ಕೋ–ಆಪರೇಟಿವ್ ಸೊಸೈಟಿ 2007ರಿಂದ 3,391 ಸದಸ್ಯರಿಂದ ಠೇವಣಿಯನ್ನು ಸಂಗ್ರಹಿಸಿದೆ. ಸೊಸೈಟಿ ಸ್ವಾಧೀನಪಡಿಸಿಕೊಂಡಿರುವ ಭೂಮಿಯಲ್ಲಿ 1,438 ನಿವೇಶನಗಳನ್ನು ಮಾತ್ರ ರಚಿಸಬಹುದಾಗಿದ್ದು, ಅವುಗಳನ್ನೂ ಹಂಚಿಕೆ ಮಾಡಿಲ್ಲ.

ನೆಲಮಂಗಲ, ವರ್ತೂರು ಮತ್ತು ದೇವನಹಳ್ಳಿಯಲ್ಲಿ ಬಡಾವಣೆ ನಿರ್ಮಿಸುವುದಾಗಿ ಸೊಸೈಟಿ ಪ್ರಕಟಿಸಿತ್ತು. ಇದೀಗ ₹316 ಕೋಟಿಗೂ ಮೀರಿದ ಹಗರಣವಾಗಿದೆ.

ಶೇ 15ರಷ್ಟು ಮಾತ್ರ ಸಹ ಸದಸ್ಯರನ್ನು ಹೊಂದಬೇಕಾಗಿದ್ದ ಸೊಸೈಟಿಯಲ್ಲಿ ಶೇ 92ರಷ್ಟು ಸಹ ಸದಸ್ಯರಿದ್ದಾರೆ. ಇವರಿಗೆ ಮತದಾನದ ಹಕ್ಕಿಲ್ಲ ಮತ್ತು ಇವರನ್ನು ವಾರ್ಷಿಕ ಸಾಮಾನ್ಯ ಸಭೆಗೂ ಆಹ್ವಾನಿಸಿಲ್ಲ. ಈ ಹಗರಣದ ಬಗ್ಗೆ ಮಾಹಿತಿ ಇರುವ 799 ಸದಸ್ಯರು ನಿವೇಶನ ಖರೀದಿಗಾಗಿ ಯಾವುದೇ ರೀತಿಯಲ್ಲಿ ಹೂಡಿಕೆ ಮಾಡಿಲ್ಲ ಎಂದು ಲೆಕ್ಕಾಧಿಕಾರಿ ವರದಿಯಿಂದ ಗೊತ್ತಾಗಿದೆ.

ಸೊಸೈಟಿಯಲ್ಲಿನ ಅಕ್ರಮದ ಬಗ್ಗೆ ಅರ್ಜಿದಾರರು 2021ರಲ್ಲಿ ಕೋ–ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರ್ ಅವರಿಗೆ ದೂರು ಸಲ್ಲಿಸಿದ್ದರು. ನಾಲ್ಕು ಹಂತಗಳಲ್ಲಿ ತನಿಖೆ ನಡೆದು, ನಾಲ್ಕೂ ವರದಿಗಳು ಲೋಪಗಳನ್ನು ಪತ್ತೆಹಚ್ಚಿದ್ದು, ಕ್ರಿಮಿನಲ್ ಕ್ರಮ ಕೈಗೊಳ್ಳಲು ಸಲಹೆ ನೀಡಿವೆ. ಆಡಳಿತ ಮಂಡಳಿಯನ್ನು ವಜಾ ಮಾಡಿ, ಈಗಿರುವ ನಿರ್ದೇಶಕರು ಮುಂದಿನ ಐದು ವರ್ಷ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧಿಸಬೇಕು ಎಂದು ವರದಿಯೊಂದರಲ್ಲಿ ಹೇಳಲಾಗಿದೆ.

ಬಹುಹಂತದ ಲೋಪಗಳು: ಕರ್ನಾಟಕ ಕೊ–ಆಪರೇಟಿವ್ ಸೊಸೈಟಿ ಕಾಯ್ದೆ 1959ರ ಸೆಕ್ಷನ್ 29 (ಸಿ) ಪ್ರಕಾರ ಫೆಬ್ರುವರಿಯಲ್ಲಿ ನಡೆದ ತನಿಖೆಯಲ್ಲಿ ಕನಿಷ್ಠ 10 ಲೋಪಗಳು ಕಂಡುಬಂದಿವೆ. ಸೊಸೈಟಿಗೆ ಅಕ್ರಮಗಳನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳಲು ಎರಡು ವರ್ಷ ಸಮಯ ನೀಡಿದರೂ ಲೋಪಗಳು ಉಳಿದುಕೊಂಡಿವೆ.

ಟೆಂಡರ್ ಪ್ರಕ್ರಿಯೆಯಲ್ಲಿ ಹಲವು ನಿಯಮಗಳನ್ನು ಮೀರಿರುವ ಸೊಸೈಟಿ, ಏಳು ಬಡಾವಣೆಗಳನ್ನು ನಿರ್ಮಿಸಲು ನಾಲ್ಕು ಡೆವಲಪರ್‌ಗಳನ್ನು ನೇಮಿಸಿದೆ. ಉಪ ನೋಂದಣಾಧಿಕಾರಿ ಕಚೇರಿಯಲ್ಲಿ ಯಾವುದೇ ರೀತಿಯಲ್ಲೂ ಒಪ್ಪಂದ ಮಾಡಿಕೊಂಡಿಲ್ಲ. ಅಲ್ಲದೆ, ಅವರಿಂದ ಯಾವುದೇ ರೀತಿಯ ಆಧಾರಗಳನ್ನು ಪಡೆದುಕೊಳ್ಳದೆ ಹಣವನ್ನು ಬಿಡುಗಡೆ ಮಾಡಲಾಗಿದೆ.

ಕಾಮಗಾರಿಯ ಗುಣಮಟ್ಟದ ಪರಿಶೀಲನೆ ಮತ್ತು ವಾಸ್ತವ ಸ್ಥಿತಿಯನ್ನು ಅರಿಯಲು 'ಥರ್ಡ್ ಪಾರ್ಟಿ ಏಜೆನ್ಸಿ' ನೇಮಿಸಿಕೊಳ್ಳಬೇಕೆಂಬ ನಿಯಮವನ್ನೂ ಸೊಸೈಟಿ ಪಾಲಿಸಿಲ್ಲ. 'ಠೇವಣಿದಾರರ ಹಿತಾಸಕ್ತಿಯನ್ನು ರಕ್ಷಿಸುವಲ್ಲಿ ಆಡಳಿತ ಮಂಡಳಿ ವಿಫಲವಾಗಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಯುಪಿಐ: ಫ್ರಾನ್ಸ್ ಜೊತೆ ಭಾರತ ಒಪ್ಪಂದ

ಪ್ಯಾರಿಸ್ (ಪಿಟಿಐ): 'ಫ್ರಾನ್ಸ್‌ನಲ್ಲಿ ಭಾರತದ ಯುಪಿಐ ಬಳಕೆಗೆ ಇಲ್ಲಿಯ ಸರ್ಕಾರದ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದು ಐಫೆಲ್ ಟವರ್‌ನಿಂದ ಆರಂಭವಾಗಲಿದೆ. ಐಫೆಲ್ ಟವರ್‌ಗೆ ಆಗಮಿಸುವ ಭಾರತೀಯ ಪ್ರವಾಸಿಗರು ಇನ್ನು ಮುಂದೆ ಯುಪಿಐ ಮೂಲಕ ಹಣ ಪಾವತಿ ಮಾಡಬಹುದು' ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಹೇಳಿದರು.

ಇಲ್ಲಿಯ ಸೀನ್ ನದಿಯ ನಡುಗಡ್ಡೆಯಲ್ಲಿಯ ನಡೆದ ಸಮಾರಂಭದಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, ಈ ಒಪ್ಪಂದವು ಭಾರತದ ನವೋದ್ಯಮ ಕ್ಷೇತ್ರಕ್ಕೆ ಹೊಸ ಮತ್ತು ಬೃಹತ್ ಮಾರುಕಟ್ಟೆ ತೆರೆಯಲಿದೆ ಎಂದರು.

ದೆಹಲಿ ಪ್ರವಾಹ: ಶಾಗೆ ಪ್ರಧಾನಿ ಕರೆ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಗುರುವಾರ ಫ್ರಾನ್ಸ್ ನಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕರೆ ಮಾಡಿ, ದೆಹಲಿ ಪ್ರವಾಹ ಪರಿಸ್ಥಿತಿ ಬಗ್ಗೆ ಮಾಹಿತಿ ಪಡೆದಿದ್ದಾರೆ.

ಶಾ ಅವರು ಪ್ರವಾಹ ಪರಿಸ್ಥಿತಿ ಬಗ್ಗೆ ಮೋದಿ ಅವರಿಗೆ ವಿವರಿಸಿದ್ದಾರೆ ಮತ್ತು ಮುಂದಿನ 24 ಗಂಟೆಗಳಲ್ಲಿ ಯಮುನಾದಲ್ಲಿ ನೀರಿನ ಮಟ್ಟ ಕಡಿಮೆ ಆಗುವ ನಿರೀಕ್ಷೆಯಿದೆ ಎಂದ್ದಾರೆ.

'ರಕ್ಷಣಾ, ಪರಿಹಾರ ಕಾರ್ಯಾಚರಣೆ ನಡೆಸಲು ಮತ್ತು ಅಗತ್ಯವಿರುವ ಜನರಿಗೆ ಸಹಾಯ ಮಾಡಲು ಸಾಕಷ್ಟು ಸಂಖ್ಯೆಯ ಎನ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ ಎಂದು ಶಾ ಅವರು ಪ್ರಧಾನಿಗೆ ಮಾಹಿತಿ ನೀಡಿದ್ದಾರೆ' ಎಂದು ಗೃಹ ಸಚಿವರ ಕಚೇರಿ ಟ್ವೀಟ್ ಮಾಡಿದೆ.

'ಡಾ. ಪದ್ಮಿನಿ ಒಂದು ನೆನಪು' ನಾಳೆ

ಬೆಂಗಳೂರು: ಮಕ್ಕಳ ರಕ್ಷಣೆ, ಮಕ್ಕಳ ಹಕ್ಕುಗಳ ಪ್ರಚಾರ, ಸಂಶೋಧನೆ, ವಕೀಲಿ, ತರಬೇತಿ ಹಾಗೂ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ಪದ್ಮಿನಿ ಸ್ಮರಣಾರ್ಥ 'ಡಾ. ಪದ್ಮಿನಿ ಒಂದು ನೆನಪು' ಸ್ಮರಣ ಸಂಚಿಕೆ ಬಿಡುಗಡೆ ಕಾರ್ಯಕ್ರಮವನ್ನು ಜುಲೈ 15ರಂದು ಬೆಳಿಗ್ಗೆ 11ಕ್ಕೆ ಬಿಬಿಎಂಪಿ ಎಸ್.ಸಿ.ಎಂ. ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಚೈಲ್ಡ್ ರೈಟ್ಸ್ ಟ್ರಸ್ಟ್ ಸಂಸ್ಥಾಪಕರೂ ಆಗಿರುವ ಪದ್ಮಿನಿ ಅವರು ಅಗಲಿ ಒಂದು ವರ್ಷವಾಗುತ್ತಿದ್ದು, ಅವರ 90ನೇ ಜನ್ಮದಿನದಂದೇ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದಲ್ಲಿ ಕಾರ್ಯನಿರ್ವಹಿಸಿರುವ ನೀನಾ ನಾಯಕ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದಾರೆ. 'ಡಾ. ಪದ್ಮಿನಿ ಮಕ್ಕಳ ಹಕ್ಕುಗಳ ಪ್ರಶಸ್ತಿ' ವಿತರಣೆ ಮಾಡಲಾಗುವುದು. ಮಕ್ಕಳ ಹಕ್ಕುಗಳ ಫೆಲೋಷಿಪ್‌ಗೆ ಚಾಲನೆ ನೀಡಲಾಗುವುದು. ಟ್ರಸ್ಟಿಗಳಾದ ಆನ್ಸೆಲಂ ರೊಸಾರಿಯೋ ಹಾಗೂ ಅಂಜಲಿ ರಾಮಣ್ಣ, ವಾಸುದೇವ ಶರ್ಮಾ ಭಾಗವಹಿಸುವರು ಎಂದು ಟ್ರಸ್ಟ್ ನಿರ್ದೇಶಕ ನಾಗಸಿಂಹ ಜಿ. ರಾವ್ ತಿಳಿಸಿದ್ದಾರೆ.

ಮೂವರು ವಲಸೆ ಕಾರ್ಮಿಕರ ಮೇಲೆ ಗುಂಡಿನ ದಾಳಿ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಶೋಪಿಯಾನ್ ಜಿಲ್ಲೆಯಲ್ಲಿ ಗುರುವಾರ ಉಗ್ರರು ಮೂವರು ವಲಸೆ ಕಾರ್ಮಿಕರ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ಗಾಯಗೊಂಡ ಕಾರ್ಮಿಕರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ' ಎಂದು ಕಾಶ್ಮೀರ ವಲಯ ಪೊಲೀಸರು ಟ್ವೀಟ್ ಮಾಡಿದ್ದಾರೆ.

'ಐರೋಪ್ಯ ಒಕ್ಕೂಟ ಸಂಸತ್ತಿನ ನಿರ್ಣಯ ಸ್ವೀಕಾರಾರ್ಹವಲ್ಲ'

ನವದೆಹಲಿ (ಪಿಟಿಐ): ಮಣಿಪುರದ ಪರಿಸ್ಥಿತಿ ಕುರಿತು ಐರೋಪ್ಯ ಒಕ್ಕೂಟದ ಸಂಸತ್ತು ಅಂಗೀಕರಿಸಿದ ನಿರ್ಣಯವನ್ನು 'ವಸಾಹತುಶಾಹಿ ಮನಸ್ಥಿತಿಯ' ಪ್ರತಿಬಿಂಬ ಎಂದು ಭಾರತ ಗುರುವಾರ ಬಣ್ಣಿಸಿದೆ.

'ಐರೋಪ್ಯ ಒಕ್ಕೂಟದ ಸಂಸತ್ತು ಮಣಿಪುರದ ಬೆಳವಣಿಗೆಗಳ ಬಗ್ಗೆ ಚರ್ಚೆ ನಡೆಸಿ, ತುರ್ತು ನಿರ್ಣಯ ಅಂಗೀಕರಿಸಿರುವುದನ್ನು ಗಮನಿಸಿದ್ದೇವೆ. ಭಾರತದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಸ್ವೀಕಾರಾರ್ಹವಲ್ಲ' ಎಂದುವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಹೇಳಿದ್ದಾರೆ.

'ನ್ಯಾಯಾಂಗ ಸೇರಿದಂತೆ ಎಲ್ಲಾ ಹಂತಗಳ ಭಾರತೀಯ ಅಧಿಕಾರಿಗಳು ಮಣಿಪುರದ ಪರಿಸ್ಥಿತಿಯನ್ನು ಅರಿತುಕೊಂಡಿದ್ದಾರೆ. ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ' ಎಂದು ಅವರು ತಿಳಿಸಿದ್ದಾರೆ.

ಮಣಿಪುರದಲ್ಲಿ ಹಿಂಸಾಚಾರವನ್ನು ತ್ವರಿತವಾಗಿ ನಿಲ್ಲಿಸಲು ಮತ್ತು ಎಲ್ಲಾ ಅಲ್ಪಸಂಖ್ಯಾತರನ್ನು ರಕ್ಷಿಸಲು ಅಗತ್ಯ ಕ್ರಮಗಳನ್ನು ಜಾರಿಗೆ ತರುವಂತೆ ಭಾರತೀಯ ಅಧಿಕಾರಿಗಳನ್ನು ಸಂಸತ್ತು ಒತ್ತಾಯಿಸಿತ್ತು. ಅಲ್ಲದೆ ಈ ಕುರಿತು ನಿರ್ಣಯ ಅಂಗೀಕರಿಸಿತ್ತು.

ಹಂಪನಾಗೆ ಬಿ.ಎಂ.ಶ್ರೀ. ಪ್ರತಿಷ್ಠಾನ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಎಂ.ಶ್ರೀ. ಪ್ರತಿಷ್ಠಾನ ನೀಡುವ 'ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ದತ್ತಿ ಪ್ರಶಸ್ತಿ'ಗೆ ಸಾಹಿತಿ ಹಂ.ಪ. ನಾಗರಾಜಯ್ಯ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹15 ಸಾವಿರ ನಗದು ಒಳಗೊಂಡಿದೆ. ಕೆ.ಜೆ. ಪಾರ್ಶ್ವನಾಥ ಅವರು ತಮ್ಮ ತಂದೆ ಕಂಬತ್ತಳ್ಳಿ ಜೀವಣ್ಣ ಪದ್ಮಾವತಮ್ಮ ಅವರ ಹೆಸರಿನಲ್ಲಿ ದತ್ತಿ ಪ್ರಶಸ್ತಿ ಸ್ಥಾಪಿಸಿದ್ದಾರೆ. ಜೈನ ಧರ್ಮ ಮತ್ತು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿರುವ ಸಾಹಿತಿ ಅಥವಾ ಸಂಶೋಧಕರೊಬ್ಬರಿಗೆ ಈ ಪ್ರಶಸ್ತಿ ನೀಡಲಾಗುತ್ತದೆ.

ಇದೇ 22ರಂದು ಪ್ರತಿಷ್ಠಾನದ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟ ಪೂರ್ವ ಅಧ್ಯಕ್ಷ ಮನು ಬಳಿಗಾರ್ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ತಿಳಿಸಿದ್ದಾರೆ.



'ಸಂಗೀತ ಸಾಮ್ರಾಜ್ಞೆ' ಪ್ರಶಸ್ತಿಗೆ ಸುಶೀಲಾ, ಈಶ್ವರಿ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಗೀತರತ್ನ ವಿದ್ಯಾಲಯ ಮತ್ತು ಚಿ. ಉದಯಶಂಕರ್ ಪ್ರತಿಷ್ಠಾನ ನೀಡುವ 'ಸಂಗೀತ ಸಾಮ್ರಾಜ್ಞೆ' ಪ್ರಶಸ್ತಿಗೆ ಗಾಯಕಿಯರಾದ ಪಿ. ಸುಶೀಲಾ ಮತ್ತು ಎಲ್.ಆರ್. ಈಶ್ವರಿ ಆಯ್ಕೆಯಾಗಿದ್ದಾರೆ.

'ಪ್ರಶಸ್ತಿಯು ತಲಾ ₹50 ಸಾವಿರ ನಗದು, ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ಇದೇ 16ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ' ಎಂದು ಪ್ರತಿಷ್ಠಾನದ ಅಧ್ಯಕ್ಷ ಸಿ. ಸೋಮಶೇಖರ್ ಸುದ್ದಿಗೋಷ್ಠಿಯಲ್ಲಿ ಗುರುವಾರ ತಿಳಿಸಿದ್ದಾರೆ.

ಪಿ. ಸುಶೀಲಾ

ಎಲ್‌.ಆರ್‌. ಈಶ್ವರಿ

ವಿಜಯ್ ರಾಘವೇಂದ್ರ, ಧರ್ಮ ಕೀರ್ತಿರಾಜ್ ನಟಿಸಿರುವ 'ಓ ಮನಸೇ' ಚಿತ್ರ ಇಂದು(ಜುಲೈ 14) ತೆರೆಗೆ ಬರುತ್ತಿದೆ. ಚಿತ್ರದಲ್ಲಿನ ಪಾತ್ರದ ಕುರಿತು ಒಂದಷ್ಟು ಮಾಹಿತಿಯನ್ನು ಧರ್ಮ ಕೀರ್ತಿರಾಜ್ 'ಸಿನಿಮಾ ಪುರವಣಿ'ಯೊಂದಿಗೆ ಹಂಚಿಕೊಂಡಿದ್ದಾರೆ...

ಶುಕ್ರದೆಸೆ ತಾರದ ಸಿನಿಮಾರಂಗ

ವಿನಾಯಕ ಕೆ.ಎಸ್.

- **ಈ ಚಿತ್ರದಲ್ಲಿ ನಿಮ್ಮ ಪಾತ್ರವೇನು? ಖಳನಾಯಕನಾಗಿ ನಟಿಸಿದ್ದೀರಾ?**

ಎರಡು ಆಯಾಮ ಹೊಂದಿರುವ ಪಾತ್ರ. ಮೊದಲಾರ್ಧದಲ್ಲಿ ತುಂಬ ಸೌಮ್ಯ ಸ್ವಭಾವದ ಹುಡುಗ. ಕುಟುಂಬವನ್ನು ಪ್ರೀತಿಸುವ, ಸಕಾರಾತ್ಮಕ ಚಿಂತನೆಯನ್ನು ಹೊಂದಿರುವ ವ್ಯಕ್ತಿಯಾಗಿರುತ್ತೇನೆ. ದ್ವಿತೀಯಾರ್ಧದಲ್ಲಿ ನಕಾರಾತ್ಮಕ ಅಂಶಗಳು ತುಂಬಿರುವ, ಕೆಟ್ಟದ್ದನ್ನು ಯೋಚಿಸುವ ವ್ಯಕ್ತಿಯಾಗುವೆ. ಕಣ್ಣಿನಿಂದ ನೋಡಿದ್ದು ಕೂಡ ಕೆಲವೊಮ್ಮೆ ನಿಜವಾಗುವುದಿಲ್ಲ ಎಂಬುದನ್ನು ಸಾಬೀತುಪಡಿಸುವ ಪಾತ್ರ. ಯಾಕೆ ಈ ಪಾತ್ರ ಹೀಗಾಗುತ್ತದೆ ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು.

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

- **ಈ ಸಿನಿಮಾ ಎಲ್ಲೆಲ್ಲಿ ಚಿತ್ರೀಕರಣಗೊಂಡಿದೆ? ಅನುಭವ ಹೇಗಿತ್ತು?**

ಮಡಿಕೇರಿ, ತಲಕಾವೇರಿಯಲ್ಲಿ ಬಹುಪಾಲು ಚಿತ್ರೀಕರಣಗೊಂಡಿದೆ. ಒಂದು ಹಾಡನ್ನು ಬ್ಯಾಂಕಾಕ್‌ನಲ್ಲಿ ಚಿತ್ರೀಕರಿಸಿದ್ದೇವೆ. ವಿಜಯ್ ರಾಘವೇಂದ್ರ ಅವರ ಜೊತೆ ಶೂಟಿಂಗ್ ಒಂದು ವಿಶಿಷ್ಟ ಅನುಭವ.

- **ಚಿತ್ರರಂಗದಲ್ಲಿನ ಈವರೆಗಿನ ಪಯಣ ಹೇಗನ್ನಿಸಿದೆ?**

ಸಾಕಷ್ಟು ಏಳು–ಬೀಳು ಕಂಡಿರುವೆ. 2009ರಲ್ಲಿ 'ನವಗ್ರಹ' ಚಿತ್ರದಲ್ಲಿ ಹಾಡು ಹಿಟ್ ಆಗಿದ್ದು ನನ್ನನ್ನು ಚಿತ್ರರಂಗ ಗುರುತಿಸುವಂತೆ ಮಾಡಿತು. ಅದಾದ ಬಳಿಕ ತಕ್ಷಣಕ್ಕೆ ಚಿತ್ರಗಳು ಸಿಗಲಿಲ್ಲ. ಒಂದೆರಡು ಸಿನಿಮಾ ಬಂದವು. ಆದರೆ ಚಿತ್ರೀಕರಣ ಪೂರ್ತಿಗೊಂಡು ಬಿಡುಗಡೆಯಾಗಲಿಲ್ಲ. ನಂತರ 'ಒಲವೇ ವಿಸ್ಮಯ' ಚಿತ್ರದಲ್ಲಿ ನಟಿಸಿದೆ. ಸಿನಿಮಾ ಚೆನ್ನಾಗಿತ್ತು. ಅದು ಹಿಟ್ ಆಗಲಿಲ್ಲ. 'ಮಮ್ತಾಜ್' ಸಿನಿಮಾ ಕೂಡ ಜನರನ್ನು ತಲುಪಲಿಲ್ಲ. ಹೀಗಾದಾಗ ಬಹಳ ಬೇಸರವಾಗುತ್ತಿತ್ತು. ಆದರೂ ಮುಂದಿನ ಸಿನಿಮಾದಲ್ಲಿ ಒಳ್ಳೆದಾಗುತ್ತೆ ಎಂಬ ಭರವಸೆಯಲ್ಲಿ ಪ್ರತಿ ಸಿನಿಮಾ ಬಿಡುಗಡೆಗಾಗಿ ಕಾಯುತ್ತಿದ್ದೆ.

- **ಹಾಗಿದ್ದರೆ ನಿಮಗೆ ಮತ್ತೆ ಬ್ರೇಕ್ ನೀಡಿದ ಸಿನಿಮಾ ಯಾವುದು?**

'ಚಾಣಾಕ್ಷ' ಸಿನಿಮಾದಿಂದ ಆ್ಯಕ್ಷನ್ ಹೀರೊ ವರ್ಚಸ್ಸು ಸಿಕ್ಕಿತು. ಮತ್ತೆ ಗ್ಯಾಪ್ ಆಯ್ತು. 'ಜೋಗಿಗುಡ್ಡ' ಎಂಬೊಂದು ಸಿನಿಮಾ ಮಾಡಿದೆ. ಅದು ಕೂಡ ಪೂರ್ತಿಯಾಗಲಿಲ್ಲ. ಹೀಗಾಗಿ ಮತ್ತೆ ಗ್ಯಾಪ್ ಹೆಚ್ಚಾಯಿತು. ಮಾಡಿದ ಸಿನಿಮಾಗಳ ಬಗ್ಗೆ ಅಸಮಾಧಾನವಿಲ್ಲ. ಇನ್ನೂ ಉತ್ತಮವಾದ ಕಥೆ ಸಿಕ್ಕಿದ್ದರೆ ಚೆನ್ನಾಗಿತ್ತು ಅನ್ನಿಸಿದ್ದಿದೆ. ಪ್ರತಿ ನಟನಿಗೂ ಆ ರೀತಿಯ ಭಾವನೆ ಇರುತ್ತದೆ.

- **ಎಂತಹ ಸಿನಿಮಾಗಳನ್ನು ಎದುರು ನೋಡುತ್ತಿರುವಿರಿ?**

ಕಥೆ ಚೆನ್ನಾಗಿರಬೇಕು. ಉತ್ತಮವಾದ ಪರಿಕಲ್ಪನೆ ಇರಬೇಕು. ಹೊಸತಾಗಿರುವುದನ್ನು ಜನ ಬಯಸುತ್ತಿದ್ದಾರೆ. ನಾಯಕನನ್ನು ಚೆನ್ನಾಗಿ ಬಿಂಬಿಸುವಂತಹ ಕಥೆ ಬೇಕು.

- **ನಿಮ್ಮ ಮುಂದಿನ ಸಿನಿಮಾಗಳು?**

'ರಾನಿ' ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ನಟ ತಿಲಕ್, ನಟಿ ಸೋನು ಗೌಡ ಜೊತೆ ಮಾಡಿರುವ 'ವಸುಂಧರಾ ದೇವಿ' ಚಿತ್ರ ಕೂಡ ಪೂರ್ತಿಗೊಂಡಿದೆ. ಅದರಲ್ಲೊಂದು ವಿಶಿಷ್ಟವಾದ ಪಾತ್ರವಿದೆ. 'ಟೆಕ್ಕಿಲ' ಚಿತ್ರದಲ್ಲೊಂದು ಭಿನ್ನ ಪಾತ್ರ. ಇದಲ್ಲದೇ ಕೆಲ ಕಥೆಗಳನ್ನು ಕೇಳಿದ್ದೇನೆ.

- **ನಿಮ್ಮ ಸಾಮರ್ಥ್ಯಕ್ಕೆ ತಕ್ಕ ಅವಕಾಶ ಸಿಗಲಿಲ್ಲ ಎನ್ನಿಸಿದೆಯಾ?**

14 ವರ್ಷ ಆಯ್ತು ಚಿತ್ರರಂಗಕ್ಕೆ ಬಂದು. ಜನ ದೊಡ್ಡ ಮಟ್ಟದಲ್ಲಿ ಗುರುತಿಸುವ ಸಿನಿಮಾ ಮಾಡಲಿಲ್ಲ. ನಿರ್ಮಾಪಕನಿಗೆ ಹಾಕಿದ ಬಂಡವಾಳ ಮರಳಿ ಬರಲಿಲ್ಲ ಎಂದಾಗ ತುಂಬ ಬೇಸರವಾಗುತ್ತದೆ. ಕೆಲವು ಕಡೆ ನನ್ನ ತಪ್ಪಿಲ್ಲ. ಕಥೆ ಕೇಳಿದಾಗ ಒಂದು ಕಲ್ಪನೆ ಇರುತ್ತದೆ. ಚಿತ್ರವಾಗಿ ಬರುವಾಗ ಅದು ಮತ್ತೊಂದಾಗಿರುತ್ತದೆ. ಕೆಲವು ಕಡೆ ನನ್ನ ನಟನೆ ಕೂಡ ಚೆನ್ನಾಗಿ ಆಗಬಹುದಿತ್ತು ಅನ್ನಿಸಿದ್ದಿದೆ. ಎಲ್ಲ ಅಸಮಾಧಾನಗಳನ್ನು ನೀಗಿಸುವ ಒಂದು ಸಿನಿಮಾ ಕೊಡಬೇಕು. ಯಾವತ್ತೂ ಚಿತ್ರರಂಗದಿಂದ ಬೇರೆಡೆಗೆ ಹೋಗಲಿಲ್ಲ. ತಂದೆ ಅವರ 40 ವರ್ಷದ ಅನುಭವದಿಂದ ನಾನು ಕಲಿತಿದ್ದು ಸಾಕಷ್ಟು. ಏಳು–ಬೀಳಿನ ನಡುವೆ ಭರವಸೆ ಗಟ್ಟಿಯಾಗಿದೆ. ❖

ನಮ್ರತಾಮಲ್ಲ

ಭೂಗತ ಜಗತ್ತಿನ ನೈಜ ಕಥನ

ಭೂಗತ ಲೋಕದ ಕಥೆ ಹೊಂದಿದ ಸಾಕಷ್ಟು ಚಿತ್ರಗಳು ಕನ್ನಡದಲ್ಲಿ ತೆರೆ ಕಂಡಿವೆ. ಆ ಸಾಲಿಗೆ ಮತ್ತೊಂದು ಸೇರ್ಪಡೆ 'ಡಾನ್ ಕುಮಾರ'. ಎನ್.ನಾಗೇಶ್‌ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಡಿ.ಎಂ.ನರಸೇಗೌಡ ನಿರ್ಮಾಣದ ಈ ಚಿತ್ರ ಬಿಡುಗಡೆಗೆ ಸಜ್ಜಾಗಿದ್ದು, ಇತ್ತೀಚೆಗಷ್ಟೆ ಚಿತ್ರದ ಟ್ರೇಲರ್ ಬಿಡುಗಡೆಗೊಂಡಿದೆ.

'ಭೂಗತ ಲೋಕದ ಡಾನ್ ಒಬ್ಬನ ನೈಜ ಕಥೆ ಹೊಂದಿರುವ ಚಿತ್ರವಿದು. ಹೀಗಾಗಿ ಚಿತ್ರದ ನಿರೂಪಣೆ ಭಿನ್ನವಾಗಿದೆ. 15 ಸಾಹಸ ದೃಶ್ಯಗಳಿವೆ. ಈ ಎಲ್ಲ ಸಾಹಸ ದೃಶ್ಯಗಳನ್ನು ನೈಜವಾಗಿ ಚಿತ್ರೀಕರಿಸಲಾಗಿದೆ. ಸಾಮಾನ್ಯ ಮನುಷ್ಯ ಜಗಳವಾಡಿದರೆ ಹೇಗಿರುತ್ತೋ ಅದೇ ರೀತಿಯಲ್ಲಿವೆ. ಭೂಗತಲೋಕದ ಸನ್ನಿವೇಶಗಳು ಇದ್ದರೂ, ಲವ್, ರೊಮ್ಯಾನ್ಸ್, ತಂದೆ ತಾಯಿ ಸೆಂಟಿಮೆಂಟ್ ಎಲ್ಲವೂ ಇರಲಿವೆ. 1990-2000 ಅವಧಿಯಲ್ಲಿ ನಡೆದ ಕೆಲವಷ್ಟು ನೈಜ ಘಟನೆಗಳಿವೆ. ಆದರೆ ಯಾವುದೇ ವ್ಯಕ್ತಿ ಉದ್ದೇಶಿತವಾಗಿಲ್ಲ' ಎಂದರು ಎನ್.ನಾಗೇಶ್‌ಕುಮಾರ್.

ಚಂದ್ರಶೇಖರ್ ಈ ಚಿತ್ರದ ನಾಯಕ. ಸಹನಾ ಮತ್ತು ಪ್ರಕೃತಿ ನಾಯಕಿಯರು. ಆರವ್ ಋಷಿಕ್ ಸಂಗೀತ, ಆನಂದ್ ದಿಂಡವಾರ್ ಛಾಯಾಗ್ರಹಣ, ಧನುಕುಮಾರ್ ನೃತ್ಯ, ಶ್ರೀನಿವಾಸ.ಪಿ.ಬಾಬು ಸಂಕಲನವಿದೆ. ಬೆಂಗಳೂರು,ಮೈಸೂರು, ದೊಡ್ಡಬಳ್ಳಾಪುರ, ಚಿಕ್ಕಬಳ್ಳಾಪುರ ಹಾಗೂ ಸಿಂಗಪುರದಲ್ಲಿ ಚಿತ್ರೀಕರಣ ನಡೆಸಲಾಗಿದೆ. ❖

ಹಾಸ್ಟೆಲ್ ಹುಡುಗರಿಗೆ ತಾರೆಯರ ಬೆಂಬಲ

ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಸಿನಿತಾರೆಯರು

ವಿಭಿನ್ನ ಪ್ರಚಾರದ ಮೂಲಕ ನಿರೀಕ್ಷೆ ಮೂಡಿಸಿರುವ 'ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ' ಚಿತ್ರ ಜುಲೈ 21ಕ್ಕೆ ತೆರೆಗೆ ಬರುತ್ತಿದೆ. ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದ್ದು, ಅಶ್ವಿನಿ ಪುನೀತ್ ರಾಜ್‌ಕುಮಾರ್, ರಿಷಬ್ ಶೆಟ್ಟಿ, ರಕ್ಷಿತ್ ಶೆಟ್ಟಿ, ಧ್ರುವ ಸರ್ಜಾ ಚಿತ್ರದ ಪ್ರಚಾರಕ್ಕೆ ಸಾಥ್ ನೀಡಿದರು.

'ನನ್ನ ಶಿಷ್ಯದಿಂದರೇ ಮಾಡಿರುವ ಸಿನಿಮಾ. ಅರವಿಂದ್, ಪ್ರಜ್ವಲ್ ಇವರೆಲ್ಲರನ್ನೂ 'ಲೂಸಿಯಾ' ಸಿನಿಮಾ ಸಮಯದಿಂದಲೂ ನೋಡಿಕೊಂಡು ಬರುತ್ತಿದ್ದೇನೆ. ತುಂಬಾ ಅದ್ಭುತ ತಂತ್ರಜ್ಞರು. ಒಂದು ಸಿನಿಮಾದ ಕಥೆ ಇದೆ. ಅತಿಥಿ ಪಾತ್ರ ಮಾಡುವಿರಾ ಎಂದು ಕೇಳಿದರು. ಕಥೆ ಏನೂ ಕೇಳಿಲ್ಲ. ಒಂದು ರಾತ್ರಿಯಷ್ಟೇ ಪಾತ್ರವನ್ನು ಚಿತ್ರೀಕರಿಸಲಾಯಿತು. ಪವನ್, ಶೈನ್ ಶೆಟ್ಟಿ ಜೊತೆಗಿದ್ದರು. ಉತ್ತಮ ಸಿನಿಮಾ' ಎಂದು ತಂಡಕ್ಕೆ ಶುಭ ಹಾರೈಸಿದರು ನಟ, ನಿರ್ದೇಶಕ ರಿಷಬ್ ಶೆಟ್ಟಿ.

ಧ್ರುವ ಸರ್ಜಾ ಮಾತನಾಡಿ, 'ಒಬ್ಬ ಪ್ರೇಕ್ಷಕನಾಗಿ ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ ಸಿನಿಮಾ ನೋಡಿದ್ದೇನೆ. ಈ ಸಿನಿಮಾ ನೋಡಿದಾಗ ನಾನು, ನನ್ನ ಅಣ್ಣನನ್ನು ಮಿಸ್ ಮಾಡಿಕೊಂಡೆ. ಏಳೆಂಟು ವರ್ಷ ನಾವು ಹಾಸ್ಟೆಲ್‌ನಲ್ಲಿ ಇದ್ದೆವು. ಅದನ್ನು ನೋಡಿದ ತಕ್ಷಣ ನಾವು ಹೀಗೆ ಇದ್ವಲ್ಲಾ ಅನಿಸಿತು. 'ಕಿರಿಕ್ ಪಾರ್ಟಿ'ಯಂತೆ ಈ ಸಿನಿಮಾ ಕೂಡ ಸೂಪರ್ ಹಿಟ್ ಆಗಲಿ' ಎಂದು ಶುಭ ಹಾರೈಸಿದರು.

ರಿಷಬ್ ಶೆಟ್ಟಿ, ಪವನ್ ಕುಮಾರ್, ಶೈನ್ ಶೆಟ್ಟಿ, ದಿಗಂತ್, ನಟಿ ರಮ್ಯಾ ವಿಶೇಷ ಪಾತ್ರದಲ್ಲಿ ನಟಿಸಿದ್ದಾರೆ. ನಿತಿನ್ ಕೃಷ್ಣಮೂರ್ತಿ ಆ್ಯಕ್ಷನ್ ಕಟ್ ಹೇಳಿದ್ದಾರೆ. ಪ್ರಜ್ವಲ್ ಬಿ.ಪಿ, ವರುಣ್ ಕುಮಾರ್ ಗೌಡ ಮತ್ತು ಗೆಳೆಯರು ಈ ಚಿತ್ರದ ನಿರ್ಮಾಪಕರು. ಅಜನೀಶ್ ಲೋಕನಾಥ್ ಸಂಗೀತ, ಅರವಿಂದ್ ಕಶ್ಯಪ್ ಛಾಯಾಗ್ರಹಣ ಚಿತ್ರಕ್ಕಿದೆ. ರಕ್ಷಿತ್ ಶೆಟ್ಟಿ ತಮ್ಮದೇ ಪರವಃ ಪಿಕ್ಚರ್ಸ್ ಮೂಲಕ ಚಿತ್ರವನ್ನು ಪ್ರಸ್ತುತಪಡಿಸುತ್ತಿದ್ದಾರೆ. ❖

ಬೆಂಗಳೂರು : ಮಾಗಡಿ ರಸ್ತೆ
ವೀರೇಶ್ ಸಿನಿಮಾಸ್(4ಆಟ)
ರಾಜಾಜಿನಗರ(1ಆಟ) ನವರಂಗ್
PVR
ORION | VAISHNAVI REGALIYA | MARKETCITY VEGA CITY | UPTOWN GT | BHARTIYA
INOX
SWAGATH | MANTRI| LIDO GARUDA | BROOKFIELD NEIGHBOURHOOD |RMZ
Cinépolis
ETA | MEENAKSHI | SJR ORION EAST | LULU SHANTINIKETAN
GOPALAN CINEMAS
ARCH | GRAND | LEGACY
MIRAJ
SUNKADAKATTE
ROCKLINE
JALAHALLI
KIN CINEMAS
SEEGEHALLI
CINEPHILE
HSR LAYOUT
ತುಮಕೂರು(2ಆಟ) ಮಾರುತಿ
INOX
ಮೈಸೂರು(4ಆಟ) ವುಡ್‌ಲ್ಯಾಂಡ್ಸ್
DRC
PVR
INOX
VISION CINEMAS
ಮಂಡ್ಯ(4ಆಟ) ಸಂಜಯ
ಹಾಸನ(4ಆಟ) ಎಸ್.ಬಿ.ಜಿ
ಚಾಮರಾಜನಗರ(2ಆಟ) ಗುರುರಾಘವೇಂದ್ರ
ಕೊಳ್ಳೇಗಾಲ(2ಆಟ) ಶ್ರೀನಿವಾಸ
ನಂಜನಗೂಡು(4ಆಟ) ಭಾರ್ಗವಿ
ಬಾಬುರಾಯನಕೊಪ್ಪಲು ಭಾರತಿ
ಕೆ.ಆರ್.ಪೇಟೆ(4ಆಟ) ಕೆ.ಜೆ.ಬಿ
ಹೊಳೆನರಸೀಪುರ ಎಸ್.ಎಲ್.ಎನ್
ಚನ್ನರಾಯಪಟ್ಟಣ ಬಾಲಾಜಿ
ಪಾಂಡವಪುರ ಕೋಕಿಲ
ಶಿವಮೊಗ್ಗ(4ಆಟ) ಮಲ್ಲಿಕಾರ್ಜುನ
Bharath Cinemas
ಭದ್ರಾವತಿ(4ಆಟ ಸತ್ಯ
ಸಾಗರ(4ಆಟ) ಶ್ರೀ
ದಾವಣಗೆರೆ MOVIE TIME
ಚಿತ್ರದುರ್ಗ(4ಆಟ) ಬಸವೇಶ್ವರ
ಹುಬ್ಬಳ್ಳಿ
PVR
Cinépolis
ಬಿಜಾಪುರ(4ಆಟ) ಡ್ರೀಮ್‌ಲ್ಯಾಂಡ್
ಗದಗ(4ಆಟ) ವೆಂಕಟೇಶ್
ರಾಣಿಬೆನ್ನೂರು(4ಆಟ) ಶಿವಶಕ್ತಿ
ನಿಪ್ಪಾಣಿ ಮ್ಯಾಗ್ನಮ್
ಗುಲ್ಬರ್ಗ ಸಂಗಮ್
ಗಂಗಾವತಿ(4ಆಟ) ಶಿವೆ
ಕೊಪ್ಪಳ(4ಆಟ) ಶಿವೆ
ಬೀದರ್ ಸಪ್ನ
ಮಂಗಳೂರು PVR
ಕುಂದಾಪುರ Bharath Cinemas

ಗಿರಿನಗರದ ಎಸ್‌ಜಿಎಸ್ ವಾಗ್ದೇವಿ ವಾಕ್ ಶ್ರವಣ ದೋಷವುಳ್ಳವರ ಶಾಲೆಯಲ್ಲಿ ಅಭಿವೃದ್ಧಿ

ಶ್ರವಣ ದೋಷ: ಕನ್ನಡ ಕಲಿಕೆಗೆ ಸಂಕೇತ ಭಾಷೆ

• ವರುಣ ಹೆಗಡೆ

ಬೆಂಗಳೂರು: ಶ್ರವಣ ದೋಷವುಳ್ಳ ಮಕ್ಕಳು ಕನ್ನಡ ವರ್ಣಮಾಲೆಯನ್ನು ಸುಲಭವಾಗಿ ಕಲಿಯುವಂತಾಗಲು ಇಲ್ಲಿನ ಎಸ್‌ಜಿಎಸ್ ವಾಗ್ದೇವಿ ಟ್ರಸ್ಟ್ ಸ್ಥಾಪಕಿ ಡಾ.ಶಾಂತಾ ರಾಧಾಕೃಷ್ಣ ಅವರು ಸಂಕೇತ ಭಾಷೆ (ಕ್ಯೂಡ್ ಸ್ಪೀಚ್) ಅಭಿವೃದ್ಧಿಪಡಿಸಿದ್ದಾರೆ.

ಗಿರಿನಗರದಲ್ಲಿ ಇರುವ ಎಸ್‌ಜಿಎಸ್ ವಾಗ್ದೇವಿ ವಾಕ್ ಶ್ರವಣ ದೋಷವುಳ್ಳವರ ಶಾಲೆಯಲ್ಲಿ ಶ್ರವಣ ದೋಷವುಳ್ಳ ಮಕ್ಕಳಿಗೆ ಈ ಸಂಕೇತ ಭಾಷೆಯ ಮೂಲಕ ಅವರು ಕನ್ನಡ ಕಲಿಸುತ್ತಿದ್ದಾರೆ. ವಾಕ್-ಶ್ರವಣ ತಜ್ಞೆಯಾಗಿರುವ ಅವರು, 48 ವರ್ಷಗಳ ವೃತ್ತಿ ಅನುಭವ ಹೊಂದಿದ್ದಾರೆ. ಅವರು ಕನ್ನಡದಲ್ಲಿ ಮೊದಲ ಬಾರಿ ಸಂಕೇತ ಭಾಷೆ ಅಭಿವೃದ್ಧಿಪಡಿಸಿದ್ದು, ತಮ್ಮ ಶಾಲೆ ಮಕ್ಕಳಿಗೆ ಕಲಿಸುತ್ತಿದ್ದಾರೆ. ಇದು ಆಂಗಿಕ ಭಾಷೆಗಿಂತ ಭಿನ್ನವಾಗಿದೆ.

ಶ್ರವಣ ದೋಷ ಮಕ್ಕಳಿಗೆ ಸಾಮಾನ್ಯವಾಗಿ ತುಟಿಗಳ ಚಲನೆ, ಆಂಗಿಕ ಭಾಷೆಯ ಮೂಲಕ ಕಲಿಸಲಾಗುತ್ತದೆ. ಈಗಲೂ ಹಲವೆಡೆ ಈ ವಿಧಾನ ಪ್ರಚಲಿತದಲ್ಲಿದೆ. ಆಂಗಿಕ ಭಾಷೆಗಿಂತ ಸಂಕೇತ ಭಾಷೆ ಭಿನ್ನವಾಗಿದೆ. ಆಂಗಿಕ ಭಾಷೆಯಲ್ಲಿ ಕೈ, ಬೆರಳುಗಳ ಚಲನೆ ಮಾತ್ರ ಇರಲಿದ್ದು, ಇದು ಅಮೆರಿಕದಿಂದ ಎರವಲು ಪಡೆದ ವಿಧಾನವಾಗಿದೆ.

ಸಂಕೇತ ಭಾಷೆ ಅಭಿವೃದ್ಧಿಪಡಿಸಿರುವ ಡಾ.ಶಾಂತಾ ರಾಧಾಕೃಷ್ಣ ಅವರು, ಮೈಸೂರಿನಲ್ಲಿ ಸ್ಪೀಚ್ ಆ್ಯಂಡ್ ಹಿಯರಿಂಗ್‌ನಲ್ಲಿ ತರಬೇತಿ ಪಡೆದು, ಅಮೆರಿಕದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ. ಬಳಿಕ ಇಲ್ಲಿಗೆ ಬಂದ ಅವರು, 1996ರಲ್ಲಿ ಎಸ್‌ಜಿಎಸ್ ವಾಗ್ದೇವಿ ಟ್ರಸ್ಟ್ ಸ್ಥಾಪಿಸಿ, ಕಿವಿ ಕೇಳಿಸದ ಮಕ್ಕಳ ಶಾಲೆ ಪ್ರಾರಂಭಿಸಿದ್ದರು. ಅಲ್ಲಿ ಎಲ್‌ಕೆಜಿಯಿಂದ 10ನೇ ತರಗತಿವರೆಗೆ ಶಿಕ್ಷಣ ನೀಡಲಾಗುತ್ತಿದ್ದು, ಈಗ 40ಕ್ಕೂ ಅಧಿಕ ಮಕ್ಕಳಿದ್ದಾರೆ.

ಸುಲಭವಾದ ಕಲಿಕೆ: 'ಕನ್ನಡ ವರ್ಣ ಮಾಲೆಗೆ ಸಂಬಂಧಿಸಿದಂತೆ 1976ರಲ್ಲಿಯೇ ಸಂಕೇತ ಭಾಷೆಯನ್ನು ಅಭಿವೃದ್ಧಿಪಡಿಸಿದ್ದೆ. ಇದನ್ನು ಸಂಸ್ಥೆಯಲ್ಲಿನ ಮಕ್ಕಳಿಗೆ ಕಲಿಸಲಾಗುತ್ತಿತ್ತು. ಈಗ ಇದನ್ನು ಬಹಿರಂಗಪಡಿಸಿದ್ದೇನೆ. ಇದರಿಂದಾಗಿ ಬೇರೆ ಸಂಸ್ಥೆಗಳಲ್ಲಿನ ಮಕ್ಕಳ ಕಲಿಕೆಗೂ ಸಹಕಾರಿಯಾಗಲಿದೆ. ಇದು ಸಾಂಪ್ರದಾಯಿಕ ಆಂಗಿಕ ಭಾಷೆಗಿಂತ ಭಿನ್ನವಾಗಿದೆ. ಇಲ್ಲಿ ಸಂಕೇತವು ಕೈಗಳ ಚಲನೆ, ಗಂಟಲು ಹಾಗೂ ತುಟಿಯನ್ನು ಕೇಂದ್ರೀಕರಿಸಿರುತ್ತದೆ. ಒತ್ತಕ್ಷರಗಳನ್ನೂ ಇದೇ ರೀತಿ ಹೇಳಿಕೊಡಲಾಗುತ್ತದೆ. ಇದರಿಂದ ಕಲಿಕೆ ಸುಲಭವಾಗಿದೆ. ಕನ್ನಡ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆ ಇದನ್ನು ಮುಂದಕ್ಕೆ ಕೊಂಡೊಯ್ಯಬೇಕು' ಎಂದು ಡಾ. ಶಾಂತಾ ರಾಧಾಕೃಷ್ಣ ತಿಳಿಸಿದರು.

'ಈ ವಿಧಾನದಿಂದ ಸಾಮಾನ್ಯ ಮಕ್ಕಳಿಗಿಂತ ವೇಗವಾಗಿ ಕಿವುಡು ಮಕ್ಕಳು ಕನ್ನಡ ಕಲಿಯುತ್ತಿದ್ದಾರೆ. 2 ವರ್ಷದಿಂದ 5 ವರ್ಷದೊಳಗಿನ ಮಕ್ಕಳು ಬೇಗ ಕಲಿಯುತ್ತಾರೆ. ಕನ್ನಡ ತಪ್ಪಿಲ್ಲದೆ ಓದಲು, ಬರೆಯಲು ಪ್ರಾರಂಭಿಸಿದ ಬಳಿಕ ಸಂಕೇತ ಭಾಷೆ ನಿಲ್ಲಿಸುತ್ತೇವೆ' ಎಂದರು.

ಡಾ. ಶಾಂತಾ ರಾಧಾಕೃಷ್ಣ ಅವರು ಸಂಕೇತ ಭಾಷೆಯ ಮೂಲಕ ಮಕ್ಕಳಿಗೆ ಕನ್ನಡ ಕಲಿಸುತ್ತಿರುವುದು ಪ್ರಜಾವಾಣಿ ಚಿತ್ರ/ ರಂಜು ಪಿ.

'ಧ್ವನಿ ಆಧಾರದಲ್ಲಿ ಸಂಕೇತ'

'ಶ್ರವಣ ದೋಷವುಳ್ಳ ಮಕ್ಕಳಿಗೆ ಕನ್ನಡ ಕಲಿಸುವುದು ಕಷ್ಟ. ಕನ್ನಡದ ಸ್ವರಗಳಲ್ಲಿಯೇ ಹ್ರಸ್ವ, ದೀರ್ಘವೆಂಬ ವಿಂಗಡಣೆಯಿದೆ. ಅ, ಆ ನಡುವಿನ ವ್ಯತ್ಯಾಸವನ್ನು ತುಟಿಗಳ ಚಲನೆಯಿಂದ ಗುರುತಿಸುವುದು ಮಕ್ಕಳಿಗೆ ಕಷ್ಟವಾಗುತ್ತದೆ. ಆದ್ದರಿಂದ ಅವರು ಸುಲಭವಾಗಿ ಕಲಿಯಲು ಸಂಕೇತ ಅಭಿವೃದ್ಧಿಪಡಿಸಿದ್ದೇನೆ. ಇದರಿಂದಾಗಿ ಮಕ್ಕಳು ಒತ್ತಕ್ಷರಗಳನ್ನೂ ತಪ್ಪಿಲ್ಲದಂತೆ ಬರೆಯುತ್ತಾರೆ. ಧ್ವನಿ ಎಲ್ಲಿ ಹುಟ್ಟುತ್ತದೆ ಎಂಬ ಆಧಾರದಲ್ಲಿ ಈ ಸಂಕೇತಗಳನ್ನು ಅಭಿವೃದ್ಧಿಪಡಿಸಲಾಗಿದೆ. ಇದನ್ನು ಆಧರಿಸಿ ಆಂಗ್ಲ ಭಾಷೆಯನ್ನೂ ಸುಲಭವಾಗಿ ಕಲಿಯಲು ಸಾಧ್ಯ' ಎಂದು ಶಾಂತಾ ರಾಧಾಕೃಷ್ಣ ಹೇಳಿದರು.

> **ಹೊರನಾಡಿನ ಪಾಲಕರಿಗೂ ಸಂಕೇತ ಭಾಷೆ ಮೂಲಕವೇ ಕನ್ನಡ ಕಲಿಸಲಾಗುತ್ತದೆ. ಗುಜರಾತ್ ಸೇರಿ ವಿವಿಧ ರಾಜ್ಯಗಳ ಮಕ್ಕಳ ಪಾಲಕರೂ ಈ ವಿಧಾನದಿಂದ ಕನ್ನಡ ಕಲಿತಿದ್ದಾರೆ**
>
> **ಡಾ. ಶಾಂತಾ ರಾಧಾಕೃಷ್ಣ,** ವಾಕ್–ಶ್ರವಣ ತಜ್ಞೆ

ಕನ್ನಡದಲ್ಲಿ ಸುದ್ದಿ ವಾಚಿಸಿದ ಕೃತಕ ಬುದ್ಧಿಮತ್ತೆಯ ಮಾಯಾ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೃತಕ ಬುದ್ಧಿಮತ್ತೆಯ (ಎಐ) ಸುದ್ದಿ ವಾಚಕಿ ಕನ್ನಡದಲ್ಲಿಯೂ ಸುದ್ದಿ ವಾಚಿಸಿದ್ದಾಳೆ. ಸುದ್ದಿವಾಹಿನಿ ನ್ಯೂಸ್‌ಫಸ್ಟ್ ಈ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದೆ.

ಎಐ ಮಾಯಾ ಹೆಸರಿನ ಸುದ್ದಿ ವಾಚಕಿ ಸಾಮಾನ್ಯ ಸುದ್ದಿ ವಾಚಕರ ರೀತಿಯೇ ಎಲ್ಲವನ್ನೂ ಪ್ರಸ್ತುತ ಪಡಿಸುವ ಸಾಮರ್ಥ್ಯ ಹೊಂದಿದ್ದಾಳೆ. ಸಂದರ್ಶನ, ಚರ್ಚೆ, ವಿಶೇಷ ವರದಿ ಸಹಿತ ಸುದ್ದಿ ಮಾಧ್ಯಮಗಳ ಯಾವುದೇ ಪ್ರಕಾರದ ನಿರೂಪಣೆಯನ್ನು ಮಾಡುವ ಸಾಮರ್ಥ್ಯವನ್ನು ಕೃತಕ ಬುದ್ಧಿಮತ್ತೆಯ ಮಾಯಾ ಹೊಂದಿದ್ದಾಳೆ. ದಕ್ಷಿಣ ಭಾರತದಲ್ಲಿ ಈ ತಂತ್ರಜ್ಞಾನ ಬಳಸಿಕೊಂಡ ಮೊದಲ ಸುದ್ದಿವಾಹಿನಿ ಎಂಬ ಹೆಗ್ಗಳಿಕೆಗೆ ತಮ್ಮ ಸಂಸ್ಥೆ ಪಾತ್ರವಾಗಿದೆ ಎಂದು ನ್ಯೂಸ್ ಫಸ್ಟ್ ಸಿಇಒ ಎಸ್. ರವಿಕುಮಾರ್ ತಿಳಿಸಿದ್ದಾರೆ.

ಬುಧವಾರ ರಾತ್ರಿ 8 ಗಂಟೆಗೆ ನ್ಯೂಸ್‌ಫಸ್ಟ್‌ನ ಪ್ರೈಂ ಟೈಮ್ ಸುದ್ದಿ ಇಂಡಿಯಾ ಫಸ್ಟ್‌ನಲ್ಲಿ ಎಐ ಮಾಯಾ ತನ್ನ ಮೊದಲ ಸುದ್ದಿ ವಾಚನ ಮಾಡಿದ್ದಾಳೆ. ಇನ್ಮುಂದೆ ಪ್ರತಿದಿನ ಸುದ್ದಿ ವಾಚಿಸಲಿದ್ದಾಳೆ ಎಂದಿದ್ದಾರೆ. ಮೂರು ತಿಂಗಳ ನಿರಂತರ ಪ್ರಯತ್ನದ ನಂತರ, ಭಾಷೆ, ನಿರೂಪಣೆ ಶೈಲಿ, ತಾಂತ್ರಿಕ ದೋಷಗಳು ಇವೆಲ್ಲವನ್ನು ಸರಿಪಡಿಸಿಕೊಂಡು ಸ್ಪಷ್ಟ ರೂಪ ಪಡೆದುಕೊಳ್ಳಲು ಸಾಧ್ಯವಾಗಿದೆ. ಸದ್ಯ ಲಿಪಿ ಇರುವ ವಿಶ್ವದ ಯಾವುದೇ ಭಾಷೆಯಲ್ಲಿ ಸುದ್ದಿ ವಾಚಿಸುವ ಸಾಮರ್ಥ್ಯ ಹೊಂದಿದ್ದಾಳೆ. ನ್ಯೂಸ್‌ಫಸ್ಟ್ ಡಿಜಿಟಲ್ ಮಾಧ್ಯಮದಲ್ಲಿ ಇಂಗ್ಲಿಷ್‌ನಲ್ಲಿಯೂ ಸದ್ಯದಲ್ಲೇ ಸುದ್ದಿ ವಾಚಿಸಲಿದ್ದಾಳೆ. ವೀಕ್ಷಕರು ಕೇಳುವ ಆಯ್ದ ಪ್ರಶ್ನೆಗಳಿಗೂ ಉತ್ತರಿಸಲಿದ್ದಾಳೆ ಎಂದು ತಿಳಿಸಿದ್ದಾರೆ.

ಡಿ.ಕೆ. ಶಿವಕುಮಾರ್ ಅಕ್ರಮ ಆಸ್ತಿ ಗಳಿಕೆ ಪ್ರಕರಣ

ಸಿಬಿಐ ಬಾಯಿ ಮುಚ್ಚಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಕ್ರಮ ಆಸ್ತಿ ಗಳಿಕೆ ಪ್ರಕರಣದಲ್ಲಿ, ಅಕ್ರಮ ಆಸ್ತಿ ವಿವರವನ್ನು ತೆರೆದ ನ್ಯಾಯಾಲಯದಲ್ಲಿ ವಿವರಿಸಲು ಮುಂದಾದ ಸಿಬಿಐ ಬಾಯಿ ಮುಚ್ಚಿಸಿದ ಪ್ರಸಂಗಕ್ಕೆ ಹೈಕೋರ್ಟ್ ಸಾಕ್ಷಿಯಾಯಿತು.

ಆದಾಯ ಮೀರಿದ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದ ಎಫ್.ಐ.ಆರ್ ರದ್ದುಕೋರಿ ಡಿ.ಕೆ. ಶಿವಕುಮಾರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್, ಶಿವಕುಮಾರ್ ಅವರು ಎಷ್ಟು ಕೋಟಿ ಹಣ ಅಕ್ರಮ ಆಸ್ತಿ ಗಳಿಸಿದ್ದಾರೆ ಎಂದು ವಿವರಿಸಲು ಮುಂದಾದರು.

ಆದರೆ, ನ್ಯಾಯಮೂರ್ತಿ ಕೆ.ನಟರಾಜನ್ ಅವರು ಪ್ರಸನ್ನ ಕುಮಾರ್ ಬಾಯಿ ಕಟ್ಟಿ ಹಾಕಿದರಲ್ಲದೆ, 'ನೀವು ಈ ವಿವರವನ್ನು ಮುಚ್ಚಿದ ಲಕೋಟೆಯಲ್ಲಿ ಕೋರ್ಟ್‌ಗೆ ನೀಡಿದ್ದೀರಿ. ಇದರ ಮುಖ್ಯಾಂಶದ ಪ್ಯಾರಾ ಸಂಖ್ಯೆ 3.15ರಲ್ಲಿ ಏನಿದೆ ಎಂಬುದು ಗೋಪ್ಯ ಅಲ್ಲವೇ' ಎಂದು ಪ್ರಶ್ನಿಸಿದರು.

ಏನಿದೆ?: ಮುಚ್ಚಿದ ಲಕೋಟೆಯಲ್ಲಿ, 'ಹೈಕೋರ್ಟ್ ತನಿಖೆಗೆ ತಡೆ ನೀಡುವವರೆಗಿನ ತನಕ ಎಷ್ಟಿದೆ. ಈ ಅವಧಿಯಲ್ಲಿ ಫಾರಂ 1ರಿಂದ 6ರ ಕಾಲಂ ಅನುಸಾರದ ಹೇಳಿಕೆಯನ್ನು 11 ಸಂಪುಟಗಳಲ್ಲಿ ಸಲ್ಲಿಸಲಾಗಿದೆ. 2,412 ಪುಟಗಳ ಈ ದಾಖಲೆ ಪರಿಶೀಲನೆ ನಡೆಯುತ್ತಿದೆ' ಎಂದು ಸಿಬಿಐ ವಕೀಲರು ತಿಳಿಸಿದರು.

'ದಾಖಲೆ ಪರಿಶೀಲನೆ ಹೊರತಾಗಿ 596 ದಾಖಲೆ ಸಂಗ್ರಹ ಮಾಡಿದ್ದೇವೆ. 84 ಜನ ಸಾಕ್ಷಿಗಳ ವಿಚಾರಣೆ ನಡೆಸಲಾಗಿದೆ' ಎಂದು ವಿವರಿಸಿದರು.

ಪ್ರಕರಣವೇನು?: ಶಿವಕುಮಾರ್ ಅವರು 2013ರಿಂದ 2018ರ ಮಧ್ಯದ ಅವಧಿಯಲ್ಲಿ ತಮ್ಮ ಆದಾಯಕ್ಕೂ ಮೀರಿದ ಸಂಪತ್ತು ಗಳಿಸಿದ್ದಾರೆ ಎಂದು ಆರೋಪಿಸಿ ಸಿಬಿಐ, ಭ್ರಷ್ಟಾಚಾರ ನಿಗ್ರಹ ಕಾಯ್ದೆ-1988ರ ವಿವಿಧ ಕಲಂಗಳ ಅಡಿಯಲ್ಲಿ 2020ರ ಅಕ್ಟೋಬರ್ 3ರಂದು ಪ್ರಕರಣ ದಾಖಲಿಸಿದೆ.

ವಿಚಾರಣೆ ವೇಳೆ ನಾಡಗೀತೆಯ ಅನುರಣನ

ನಾಡಗೀತೆಯ ರಾಗದ ತಕರಾರಿಗೆ ಸಂಬಂಧಿಸಿದ ಪ್ರಕರಣದಲ್ಲಿ ವಿಚಾರಣೆ ವೇಳೆ ಗಾಯಕ ಕಿಕ್ಕೇರಿ ಕೃಷ್ಣಮೂರ್ತಿ ಅವರು ವಿಭಿನ್ನ ರಾಗದಲ್ಲಿ ಕುವೆಂಪು ವಿರಚಿತ ನಾಡಗೀತೆಯನ್ನು ಹಾಡುವ ಮೂಲಕ ನ್ಯಾಯಪೀಠಕ್ಕೆ ರಾಗದ ಮಹತ್ವ ತಿಳಿಸಿದರು.

ದಿವಂಗತ ಮೈಸೂರು ಅನಂತಸ್ವಾಮಿ ಸಂಯೋಜಿಸಿದ ಧಾಟಿಯಲ್ಲಿ 2 ನಿಮಿಷ 30 ಸೆಕೆಂಡ್‌ಗಳಲ್ಲಿ ನಾಡಗೀತೆ ಹಾಡುವುದನ್ನು ಕಡ್ಡಾಯಗೊಳಿಸಿ ಸರ್ಕಾರವು 2022ರ ಸೆಪ್ಟೆಂಬರ್ 25ರಂದು ಹೊರಡಿಸಿದ ಆದೇಶವನ್ನು ಆಕ್ಷೇಪಿಸಿ ಕಿಕ್ಕೇರಿ ಕೃಷ್ಣಮೂರ್ತಿ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಮೂರ್ತಿಗಳು ಕಿಕ್ಕೇರಿ ಕೃಷ್ಣಮೂರ್ತಿ ಅವರನ್ನು ರಾಗಗಳ ಭಿನ್ನತೆಯ ವಿವರಣೆ ಕೇಳಿದ್ದಲ್ಲದೇ, ಹಾಡುವಂತೆ ಸೂಚಿಸಿದರು.

ಕೋರ್ಟ್ ಹಾಲ್‌ನಲ್ಲಿಯೇ ಕೃಷ್ಣಮೂರ್ತಿಯವರು ತಮ್ಮ ವಾದಕ್ಕೆ ಪೂರಕವಾಗಿ ನಾಡಗೀತೆಯನ್ನು, 'ಉದಯ ರವಿಚಂದ್ರಿಕೆ, ಜಂಜೂಟಿ, ಹಿಂದೋಳ, ಕಲ್ಯಾಣಿ ಮತ್ತು ಮಾಯಾ ಮಾಳವ ಗೌಳ' ರಾಗಗಳಲ್ಲಿ ಹಾಡಿದರು.

ಸಿ.ಅಶ್ವತ್ಥ್ ಅವರು ಸಂಯೋಜಿಸಿರುವ ರಾಗದಲ್ಲೇ ನಾಡಗೀತೆ ಹಾಡುವುದು ಸಮಂಜಸ ಎಂದು ಪ್ರತಿಪಾದಿಸಿದರು. ಕೃಷ್ಣಮೂರ್ತಿಯವರ ಪ್ರತಿಪಾದನೆಯನ್ನು ಪರಿಗಣಿಸಿದ ನ್ಯಾಯಮೂರ್ತಿಗಳು, 'ಪ್ರಕರಣದಲ್ಲಿ ಅಡಗಿರುವ ವಿಚಾರ ಗಂಭೀರವಾಗಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿ, ಸರ್ಕಾರಿ ವಕೀಲರು ಈ ಪ್ರಕರಣದ ವಿಚಾರಗಳನ್ನು ಆಳವಾಗಿ ಶೋಧಿಸಿ, ಸಮಗ್ರ ಮಾಹಿತಿ ಕಲೆ ಹಾಕಿ ನ್ಯಾಯಾಲಯಕ್ಕೆ ನೀಡಬೇಕು ಎಂದು ನಿರ್ದೇಶಿಸಿ, ವಿಚಾರಣೆಯನ್ನು ಇದೇ 31ಕ್ಕೆ ಮುಂದೂಡಿದರು.

ಆರೆಸ್ಸೆಸ್‌ಗೆ 35 ಎಕರೆ ಗೋಮಾಳ: ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರೆಸ್ಸೆಸ್‌ಗೆ ಸೇರಿದ ಜನಸೇವಾ ಟ್ರಸ್ಟ್‌ಗೆ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕುರುಬರಹಳ್ಳಿ ಗ್ರಾಮದ ತಾವರೆಕೆರೆ ಹೋಬಳಿಯಲ್ಲಿ ಹಿಂದಿನ ಬಿಜೆಪಿ ಸರ್ಕಾರ 35 ಎಕರೆ 33 ಗುಂಟೆ ಗೋಮಾಳ ಜಮೀನು ನೀಡಿದ್ದ ಕ್ರಮಕ್ಕೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತಡೆ ನೀಡಿದೆ.

ಕಳೆದ ಸೆಪ್ಟೆಂಬರ್‌ನಲ್ಲಿ ಗೋಮಾಳ ಭೂಮಿಯನ್ನು ಬಿಜೆಪಿ ಸರ್ಕಾರ ಜನಸೇವಾ ಟ್ರಸ್ಟ್‌ಗೆ ನೀಡಿತ್ತು. 2023ರ ಮೇ 22ರಂದು ಜಿಲ್ಲಾಧಿಕಾರಿ ಮಂಜೂರು ಆದೇಶ ಹೊರಡಿಸಿದ್ದರು. ಗೋಮಾಳವು ಜಾನುವಾರುಗಳ ಮೇವಿಗಾಗಿ ಮೀಸಲಿರಿಸಿದ ಸರ್ಕಾರಿ ಭೂಮಿಯಾಗಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಐದು ದಿನಗಳ ನಂತರ, ಅಂದರೆ ಮೇ 25ರಂದು ಸಿದ್ದರಾಮಯ್ಯ ಅವರು, ಜಮೀನು ಮಂಜೂರಾತಿ ಆದೇಶದ ವಿಷಯದಲ್ಲಿ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಕಳೆದ ಮೂರು ವರ್ಷಗಳಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನಲ್ಲಿ ಎಷ್ಟು ಸರ್ಕಾರಿ ಜಮೀನನ್ನು ಸಂಘ ಸಂಸ್ಥೆಗಳಿಗೆ, ಇಲಾಖೆಗಳಿಗೆ ಮತ್ತು ವಿವಿಧ ಉದ್ದೇಶಗಳಿಗೆ ನೀಡಲಾಗಿದೆ ಎಂದು ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಕೇಳಿದ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಕಂದಾಯ ಸಚಿವ ಕೃಷ್ಣ ಬೈರೇಗೌಡ, ಜನಸೇವಾ ಟ್ರಸ್ಟ್‌ಗೆ 35 ಎಕರೆ 33 ಗುಂಟೆ ಮಂಜೂರು ಮಾಡುವುದನ್ನು ತಡೆಹಿಡಿಯಲಾಗಿದೆ ಎಂಬ ಮುಖ್ಯಮಂತ್ರಿಯವರ ಸೂಚನೆಯನ್ನು ಉಲ್ಲೇಖಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಕೃಷ್ಣ ಬೈರೇಗೌಡ, 'ಮುಖ್ಯಮಂತ್ರಿ ನೀಡಿರುವ ಈ ಸೂಚನೆ ಕೇವಲ ಜನಸೇವಾ ಟ್ರಸ್ಟ್‌ಗೆ ಮಾತ್ರ ಅನ್ವಯಿಸುವುದಿಲ್ಲ. ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳುಗಳ ಮೊದಲು ಮಾಡಿದ್ದ ಎಲ್ಲ ಜಮೀನು ಹಂಚಿಕೆಗಳಿಗೂ ಅನ್ವಯ ಆಗಲಿದೆ' ಎಂದರು.

'ತರಾತುರಿಯಲ್ಲಿ ಜಮೀನು ಮಂಜೂರು ಮಾಡಿರುವ ಎಲ್ಲ ಪ್ರಕರಣಗಳನ್ನು ನಾವು ಪರಿಶೀಲಿಸುತ್ತಿದ್ದೇವೆ. ಗೋಶಾಲೆಯ ಉದ್ದೇಶಕ್ಕಾಗಿ ಒಂದು ಲಾಭರಹಿತ ಸಂಸ್ಥೆಗೆ 35 ಎಕರೆ ಜಮೀನು ನೀಡಲಾಗಿದೆ' ಎಂದ ಸಚಿವರು, 'ನಾವು ಅರ್ಹತೆ ಮತ್ತು ಉದ್ದೇಶದ ಆಧಾರದಲ್ಲಿ ಭೂಮಿ ಮಂಜೂರಾತಿಯನ್ನು ಪರಿಶೀಲಿಸುತ್ತೇವೆ. ಸಾರ್ವಜನಿಕ ಹಿತಾಸಕ್ತಿ ಇದೆಯೇ ಅಥವಾ ಇಲ್ಲವೇ ಎಂಬುದನ್ನೂ ನೋಡುತ್ತೇವೆ' ಎಂದೂ ವಿವರಿಸಿದರು. ಮಾಗಡಿ ರಸ್ತೆಯ ಚನ್ನೇನಹಳ್ಳಿಯಲ್ಲಿ ಜನಸೇವಾ ಟ್ರಸ್ಟ್ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿದೆ. ಜನಸೇವಾ ಟ್ರಸ್ಟ್‌ನ ಕಾರ್ಯದರ್ಶಿ ನಿರ್ಮಲ್ ಕುಮಾರ್ ಅವರನ್ನು ಈ ಬಗ್ಗೆ ಪ್ರಶ್ನಿಸಿದಾಗ, 'ಈ ಬಗ್ಗೆ ಟ್ರಸ್ಟ್‌ಗೆ ಸರ್ಕಾರದಿಂದ ಮಾಹಿತಿ ಬಂದಿಲ್ಲ' ಎಂದರು.

ಬಿಜೆಪಿ ಅಧಿಕಾರದ ಅವಧಿಯಲ್ಲಿ (2019–2022) ವಿವಿಧ ಸಂಘಸಂಸ್ಥೆಗಳಿಗೆ ಒಂಬತ್ತು ಜಿಲ್ಲೆಗಳಲ್ಲಿ ಒಟ್ಟು 252 ಎಕರೆ 36 ಗುಂಟೆ ಗೋಮಾಳ ಭೂಮಿಯನ್ನು ಮಂಜೂರು ಮಾಡಿತ್ತು. ಅದರಲ್ಲಿ ಆದಿಚುಂಚನಗಿರಿ ಮಠ, ಸಿದ್ದಗಂಗಾ ಮಠ, ಇಸ್ಕಾನ್, ರಾಷ್ಟ್ರೋತ್ಥಾನ ಪರಿಷತ್, ಕರ್ನಾಟಕ ಲಾನ್ ಟೆನಿಸ್ ಅಸೋಸಿಯೇಷನ್, ಒಕ್ಕಲಿಗರ ಸಂಘ ಮತ್ತು ಇತರರಿಗೆ ಮಂಜೂರಾದ ಗೋಮಾಳ ಭೂಮಿ ಸೇರಿದೆ.

ಗೋಮಾಳ ಜಮೀನು ಹಂಚಿಕೆಗೆ ಮಹಾಲೇಖಪಾಲರು (ಸಿಎಜಿ) 2018ರಲ್ಲಿ ಆಕ್ಷೇಪ ವ್ಯಕ್ತಪಡಿಸಿದ್ದರು.

ಕರ್ನಾಟಕ ಭೂಕಂದಾಯ ನಿಯಮಗಳ ಪ್ರಕಾರ ಪ್ರತಿ 100 ಜಾನುವಾರುಗಳಿಗೆ 30 ಎಕರೆಯನ್ನು ಗೋಮಾಳಕ್ಕೆ ಮೀಸಲಿಡಬೇಕು. ಜಿಲ್ಲಾಧಿಕಾರಿಗಳ ಪೂರ್ವಾನುಮತಿಯ ಬಳಿಕ ಮಾತ್ರ ಗೋಮಾಳ ಭೂಮಿ ಕಡಿಮೆ ಮಾಡಬಹುದು. ವಿವಿಧ ಹೈಕೋರ್ಟ್‌ಗಳು ಗೋಮಾಳ ಭೂಮಿ ಹಂಚಿಕೆ ಮಾಡದಂತೆ ಸರ್ಕಾರಕ್ಕೆ ಸೂಚಿಸಿರುವುದನ್ನು ಸಿಎಜಿ ಎತ್ತಿ ತೋರಿಸಿತ್ತು. ಆದರೆ, ನಗರ ವ್ಯಾಪ್ತಿಯಲ್ಲಿ ಮತ್ತು ಸುತ್ತಮುತ್ತಲಿನ ಗೋಮಾಳ ಭೂಮಿಯನ್ನು ಮಂಜೂರು ಮಾಡಲು 2008ರ ಜನವರಿಯಲ್ಲಿ ನಿಯಮಗಳನ್ನು ತಿದ್ದುಪಡಿ ಮಾಡಲಾಗಿತ್ತು.

ಅಂಕಿ ಅಂಶ

252 ಎಕರೆ **36** ಗುಂಟೆ
ಬಿಜೆಪಿ ಅವಧಿಯಲ್ಲಿ (2019–2022) ಹಂಚಿಕೆಯಾದ ಗೋಮಾಳ ಭೂಮಿ

35 ಎಕರೆ **33** ಗುಂಟೆ
ಜನಸೇವಾ ಟ್ರಸ್ಟ್‌ಗೆ ಮಂಜೂರಾದ ಜಮೀನು

'ಕಳಪೆ ಮೊಟ್ಟೆ ಪೂರೈಕೆದಾರರು ಕಪ್ಪುಪಟ್ಟಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಳಪೆ ಮೊಟ್ಟೆ ಪೂರೈಕೆ ಮಾಡಿದವರನ್ನು ಕಪ್ಪು ಪಟ್ಟಿಗೆ ಸೇರಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಅಲ್ಲದೆ, ಮೊಟ್ಟೆ ವಿತರಣೆ ಮೇಲೆ ನಿಗಾ ವಹಿಸಲು ಕಾರ್ಯಪಡೆ ರಚಿಸಲಾಗುವುದು' ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ ತಿಳಿಸಿದರು.

ಅಂಗನವಾಡಿ ಕೇಂದ್ರಗಳಿಗೆ ಕಳಪೆ ಮೊಟ್ಟೆ ವಿತರಣೆಯಾಗುತ್ತಿರುವ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಕಳಪೆ ಮೊಟ್ಟೆ ಪೂರೈಕೆ ಮಾಡಿದವರರನ್ನು ಮೊಟ್ಟೆ ವಿತರಕರ ಪಟ್ಟಿಯಿಂದ ಕೈಬಿಡಲಾಗುವುದು' ಎಂದರು.

'ಖರೀದಿಯನ್ನು ವಿಕೇಂದ್ರೀಕರಣಗೊಳಿಸಿದ್ದರಿಂದಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲೂ ಮೊಟ್ಟೆ ಖರೀದಿಸಲಾಗುತ್ತಿದೆ, ಯಾವುದೇ ನಿಯಂತ್ರಣ ಇಲ್ಲದೇ ಮೊಟ್ಟೆ ಖರೀದಿ ನಡೆಯುತ್ತಿದೆ. ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಬೇಕು ಎಂಬುದು ಇಲಾಖೆಯ ಮುಖ್ಯ ಉದ್ದೇಶ. ಇಲಾಖೆಯ ಈ ಉದ್ದೇಶವೇ ಈಡೇರುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆ' ಎಂದರು.

'ಮೊಟ್ಟೆ ಖರೀದಿಯನ್ನು ವಿಕೇಂದ್ರೀಕರಣಗೊಳಿಸಿದ್ದರಿಂದ ಪ್ರಾಮಾಣಿಕವಾಗಿ ಪೂರೈಕೆ ಆಗುತ್ತಿಲ್ಲ. ರಾಮನಗರ, ಹಾಸನ, ಉತ್ತರ ಕರ್ನಾಟಕದ ಹಲವೆಡೆ ಕಳಪೆ ಮೊಟ್ಟೆ ಪೂರೈಕೆಯಾಗಿರುವುದು ಗಮನಕ್ಕೆ ಬಂದಿದೆ. ಹೀಗಾಗಿ, ಖರೀದಿ ವ್ಯವಸ್ಥೆಯನ್ನು ಕೇಂದ್ರೀಕರಣಗೊಳಿಸಲು ಕ್ರಮವಹಿಸಲಾಗುವುದು. ಸರ್ಕಾರಿ ಸಂಸ್ಥೆಗಳಿಂದ ಖರೀದಿಗೆ ಚಿಂತನೆ ನಡೆಯುತ್ತಿದೆ. ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ನಿರ್ಧರಿಸಲಾಗುವುದು' ಎಂದೂ ಹೇಳಿದರು.

'ಶಕ್ತಿ ಯೋಜನೆ: ಧರ್ಮಸ್ಥಳದಲ್ಲಿ ಭಕ್ತರ ಸಂತಸ'

ಬೆಂಗಳೂರು: 'ಶಕ್ತಿ ಯೋಜನೆಯಿಂದಾಗಿ ಧರ್ಮಸ್ಥಳಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಬರುತ್ತಿದ್ದು, ಅನೇಕ ಮಹಿಳೆಯರು ನಿಮ್ಮ ಹೆಸರಿನಲ್ಲಿ ಮಂಜುನಾಥ ಸ್ವಾಮಿಗೆ ಸೇವೆ–ಕಾಣಿಕೆ ಸಲ್ಲಿಸುತ್ತಿದ್ದಾರೆ' ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದ ಪತ್ರದಲ್ಲಿ ತಿಳಿಸಿದ್ದಾರೆ.

ವೀರೇಂದ್ರ ಹೆಗ್ಗಡೆ

ಬಜೆಟ್ ಕುರಿತು ಪತ್ರದಲ್ಲಿ ಉಲ್ಲೇಖಿಸಿರುವ ಹೆಗ್ಗಡೆಯವರು, 'ಧರ್ಮಸ್ಥಳಕ್ಕೆ ಬರುವವರಲ್ಲಿ ವಿಶೇಷವಾಗಿ ಮಹಿಳೆಯರು ಸಂತೋಷ ವ್ಯಕ್ತಪಡಿಸುತ್ತಿದ್ದಾರೆ. ಅನೇಕ ಯೋಜನೆಗಳ ಮೂಲಕ ಜನರಿಗೆ ಉಪಯುಕ್ತ ಕಾರ್ಯಕ್ರಮ ನೀಡಿದ್ದೀರಿ. ಜೈನ ಸಮುದಾಯಕ್ಕೆ ವಿಶೇಷ ಅನುದಾನ ನೀಡಿ ಪ್ರೋತ್ಸಾಹಿಸಿರುವ ವಿಚಾರ ತಿಳಿದು ಇಡೀ ಸಮಾಜಕ್ಕೆ ಸಂತೋಷವಾಗಿದೆ' ಎಂದು ಹೇಳಿದ್ದಾರೆ.

'ಅವಕಾಶ ಇದ್ದಾಗ ಕ್ಷೇತ್ರಕ್ಕೆ ಬಂದು ಶ್ರೀ ಮಂಜುನಾಥ ಸ್ವಾಮಿಯ ದರ್ಶನ ಪಡೆದುಕೊಂಡು ಹೋಗಬೇಕೆಂಬುದು ತಮ್ಮ ಅಪೇಕ್ಷೆ' ಎಂದೂ ಪತ್ರದಲ್ಲಿ ತಿಳಿಸಿದ್ದಾರೆ.

ಕಾವೇರಿ ತಂತ್ರಾಂಶ: ಪ್ರಚಾರಕ್ಕೆ ನಿರ್ದೇಶನ

ಬೆಂಗಳೂರು: 'ಸಬ್ ರಿಜಿಸ್ಟ್ರಾರ್ ಕಚೇರಿಗಳಲ್ಲಿ ದಾಖಲೆಗಳ ನೋಂದಣಿಗೆ ಬಳಸುವ ಕಾವೇರಿ 2.0 ತಂತ್ರಾಂಶದ ಬಗ್ಗೆ ವ್ಯಾಪಕ ಪ್ರಚಾರಕ್ಕಾಗಿ ಸಾಫ್ಟ್‌ವೇರ್ ಬಳಕೆ ಮಾಡುವ ಕುರಿತು ಜನಜಾಗೃತಿ ಮೂಡಿಸಬೇಕು' ಎಂದು ಕಂದಾಯ ಇಲಾಖೆಗೆ ಹೈಕೋರ್ಟ್ ನಿರ್ದೇಶಿಸಿದೆ.

ಹುದ್ದೆಗಳೇ ಇಲ್ಲದ ಕಡೆ ಕೆಲವರು ಸಬ್ ರಿಜಿಸ್ಟ್ರಾರ್ ಆಗಿ ಕೆಲಸ ಮಾಡಿ ವೇತನ ಪಡೆದ ಆರೋಪಕ್ಕೆ ಸಂಬಂಧಿಸಿದ ಪ್ರಕರಣಗಳ ಕುರಿತಾದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಿ. ನರೇಂದರ್ ನೇತೃತ್ವದ ವಿಭಾಗೀಯ ನ್ಯಾಯಪೀಠವು ಈ ನಿರ್ದೇಶನ ನೀಡಿದೆ.

ವಿಚಾರಣೆ ವೇಳೆ ಖುದ್ದು ಹಾಜರಿದ್ದ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ, 'ಕೋರ್ಟ್ ಆದೇಶದಂತೆ ಕಾವೇರಿ ತಂತ್ರಾಂಶ ರೂಪಿಸಿ, ನೋಂದಣಿ ಪ್ರಕ್ರಿಯೆಯಲ್ಲಿ ಮಾನವ ಹಸ್ತಕ್ಷೇಪ ನಿಯಂತ್ರಿಸಲಾಗಿದೆ. ವ್ಯವಸ್ಥೆಯ ಸಮಸ್ಯೆಗಳನ್ನು ಸರಿಪಡಿಸಲು ಎರಡು ತಿಂಗಳ ಕಾಲಾವಕಾಶ ಬೇಕಿದೆ' ಎಂದರು.

'ಈ ಕುರಿತು ವ್ಯಾಪಕ ಪ್ರಚಾರದ ಅಗತ್ಯವಿದೆ' ಎಂದ ನ್ಯಾಯಪೀಠ ಇದೇ 19ಕ್ಕೆ ವಿಚಾರಣೆಯನ್ನು ಮುಂದೂಡಿದೆ.

19ರಂದು ಸಚಿವರ ಜೊತೆ ರಾಹುಲ್ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವರ್ಗಾವಣೆಯ ಆರೋಪ ಕೇಳಿಬಂದ ಬೆನ್ನಲ್ಲೆ, ಎಲ್ಲ ಸಚಿವರ ಜೊತೆ ಚರ್ಚೆ ನಡೆಸಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನಿರ್ಧರಿಸಿದ್ದಾರೆ.

ಇದೇ 19ರಂದು ನಗರದ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ನಡೆಯಲಿರುವ ಈ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಎಲ್ಲ ಸಚಿವರು ಭಾಗವಹಿಸಲಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಉಪಸ್ಥಿತರಿರಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

2024ರಲ್ಲಿ ಎದುರಾಗಲಿರುವ ಲೋಕಸಭೆ ಚುನಾವಣೆಗೆ ಈಗಿನಿಂದಲೇ ಸಿದ್ಧತೆ, ಭ್ರಷ್ಟಾಚಾರಕ್ಕೆ ಅವಕಾಶ ನೀಡದೆ ಉತ್ತಮ ಆಡಳಿತ ನೀಡುವ ಕಡೆಗೆ ಗಮನ, ಯಾರ ಜತೆಗೂ ಹೊಂದಾಣಿಕೆ ಇಲ್ಲದಂತೆ ಕಾರ್ಯನಿರ್ವಹಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಲಿದೆ. ರಾಜ್ಯದಲ್ಲಿನ ಸದ್ಯದ ರಾಜಕೀಯ ವಿದ್ಯಮಾನ ಮತ್ತು ಸರ್ಕಾರದ ಕಾರ್ಯವೈಖರಿಯ ಬಗ್ಗೆ ಈಗಾಗಲೇ ಪಕ್ಷದ ವರಿಷ್ಠರಿಗೆ ಕೆಲವು ನಾಯಕರು ಮಾಹಿತಿ ನೀಡಿದ್ದು, ಈ ಬಗ್ಗೆಯೂ ನಾಯಕರು ಸಮಾಲೋಚನೆ ನಡೆಸುವ ಸಾಧ್ಯತೆಯಿದೆ ಎಂದೂ ಮೂಲಗಳು ಹೇಳಿವೆ.

ಜೈನ ಮುನಿ ಹತ್ಯೆ: ಡೈರಿ ಸುಟ್ಟ ಬೂದಿ ಎಫ್‌ಎಸ್‌ಎಲ್‌ಗೆ

ಬೆಳಗಾವಿ: ಚಿಕ್ಕೋಡಿ ತಾಲ್ಲೂಕಿನ ಹಿರೇಕೋಡಿ ನಂದಿಪರ್ವತ ಆಶ್ರಮದ ಮುನಿ ಕಾಮಕುಮಾರ ನಂದಿ ಮಹಾರಾಜ ಅವರ ಹತ್ಯೆ ಮಾಡಿದ ಆರೋಪಿಗಳು, ಮುನಿ ಅವರ ಡೈರಿ ಸುಟ್ಟುಹಾಕಿದ್ದರು. ಡೈರಿ ಸುಟ್ಟ ಸ್ಥಳದ ಪಂಚನಾಮೆ ನಡೆಸಿದ ಪೊಲೀಸರು, ಬೂದಿಯನ್ನು ಎಫ್‌ಎಸ್‌ಎಲ್‌ಗೆ ಕಳುಹಿಸಿದ್ದಾರೆ.

'ಸಾಲ ನೀಡಿದ ಬಗ್ಗೆ ಮುನಿ ಅವರು ಡೈರಿಯಲ್ಲಿ ಬರೆದಿರಬಹುದು. ಅದಕ್ಕೆ ಸುಟ್ಟಿರುವುದಾಗಿ ಪ್ರಮುಖ ಆರೋಪಿ ನಾರಾಯಣ ಮಾಳಿಗೆ ವಿಚಾರಣೆ ವೇಳೆ ಹೇಳಿದ್ದು, ಸಾಕ್ಷ್ಯ ನಾಶಕ್ಕೆ ಪ್ರಯತ್ನ ನಡೆದಿದೆ. ಇದರ ಬಗ್ಗೆ ಇನ್ನಷ್ಟು ತನಿಖೆ ನಡೆಸಿದ್ದೇವೆ. ಆರೋಪಿಗಳಿಂದ ನಾಲ್ಕು ಮೊಬೈಲ್ ಕೂಡ ವಶಕ್ಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ನಾರಾಯಣ ಮಾಳಿ ಜೊತೆ ಇನ್ನೊಬ್ಬ ಆರೋಪಿ ಹಸನ್ ದಲಾಯತ್‌ಗೆ ಪೊಲೀಸರು ಸತತ 8 ಗಂಟೆ ವಿಚಾರಣೆ ನಡೆಸಿದರು.

ನಿಧನ ವಾರ್ತೆ

ಡಾ. ಬೋಪಣ್ಣ ಸತ್ಯನಾರಾಯಣ ರಾವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಡಾ. ಬೋಪಣ್ಣ ಸತ್ಯನಾರಾಯಣ ರಾವ್ (ಬಿ.ಎಸ್.ರಾವ್) (75) ಗುರುವಾರ ಹೃದಯಾಘಾತದಿಂದ ನಿಧನರಾದರು.

ಹೈದರಾಬಾದ್‌ನಲ್ಲಿರುವ ಅವರ ನಿವಾಸದಲ್ಲಿ ಹೃದಯಾಘಾತ ಉಂಟಾಗಿತ್ತು. ಕೂಡಲೇ ಜುಬಿಲಿ ಹಿಲ್ಸ್‌ನಲ್ಲಿರುವ ಅಪೊಲೋ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಅವರು ಮೃತಪಟ್ಟರು.

ಬಿ.ಎಸ್. ರಾವ್ ಅವರ ಮಗಳು ಸೀಮಾ ಬೋಪಣ್ಣ ವಿದೇಶದಿಂದ ಬಂದ ಬಳಿಕ ಮೃತದೇಹವನ್ನು ವಿಜಯವಾಡದ ತಾಡಿಗಡಪಕ್ಕೆ ಒಯ್ದು ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದವರು ತಿಳಿಸಿದ್ದಾರೆ.

ಡಾ.ಬಿ.ಎಸ್. ರಾವ್ ದಂಪತಿ ಇಂಗ್ಲೆಂಡ್ ಮತ್ತು ಇರಾನ್‌ನಲ್ಲಿ ವೈದ್ಯರಾಗಿ ಕರ್ತವ್ಯ ನಿರ್ವಹಿಸಿದ್ದರು. 1986ರಲ್ಲಿ ಈ ದಂಪತಿ ಬಾಲಕಿಯರ ಪದವಿ ಪೂರ್ವ ಕಾಲೇಜು ಆರಂಭಿಸಿದ್ದರು. ಬಳಿಕ ಶ್ರೀ ಚೈತನ್ಯ ಶಿಕ್ಷಣ ಸಂಸ್ಥೆಯ ಹೆಸರಲ್ಲಿ ವಿದ್ಯಾಲಯಗಳನ್ನು ವಿಸ್ತರಿಸಿದ್ದರು. ಪ್ರಸ್ತುತ ದೇಶದಾದ್ಯಂತ 321 ಜೂನಿಯರ್ ಕಾಲೇಜುಗಳು, 322 ಟೆಕ್ನೋ ಶಾಲೆಗಳು ಮತ್ತು 107 ಸಿಬಿಎಸ್‌ಇ ಶಾಲೆಗಳಲ್ಲಿ 8.5 ಲಕ್ಷ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	88.63	2,657	394
ಹಾರಂಗಿ	2,859	2,841.25	1,784	50
ಕಬಿನಿ	2284.00	2,269.45	2,995	800
ಹೇಮಾವತಿ	2,922	2,893.12	1,017	200
ಲಿಂಗನಮಕ್ಕಿ	1,819	1,753.15	14,342	1,838
ಸೂಪಾ (ಮೀ)	564	527.31	4,107.67	2,772.73
ಮಾಣಿ	595	573.48	2,510	00
ತುಂಗಭದ್ರಾ	1,633	1,585.22	5,964	261
ಮಲಪ್ರಭಾ	2079.5	2,050.80	00	194
ಘಟಪ್ರಭಾ	2,175	2,087.03	2,479	91
ಭದ್ರಾ	186	141.1	835	164
ಆಲಮಟ್ಟಿ (ಮೀ)	519.6	508.22	20,028	561
ನಾರಾಯಣಪುರ (ಮೀ)	492.25	486.83	00	50

* ನೆಲಮಟ್ಟದಿಂದ

ಬೆಂಗಳೂರು ತ್ರಿವೇಣಿ DTS 4 ಆಟ
VEERESH CINEMAS
(ಮಾಗಡಿ ರೋಡ್) ನವರಂಗ್ 1 ಆಟ
(ರಾಜಾಜಿನಗರ) ಸಿದ್ಧಲಿಂಗೇಶ್ವರ 2 ಆಟ 1pm & 4pm
(ಜೆ.ಪಿ. ನಗರ) ಕಾಮಾಕ್ಯ 2 ಆಟ 4pm & 9pm
(ಕತ್ರಿಗುಪ್ಪೆ) ವೃದ್ಧಿ 4 ಆಟ
(ನಾಗಾವರ) ಮೋಹನ್ 3 ಆಟ
(ಸುಂಕದಕಟ್ಟೆ) ವಜ್ರೇಶ್ವರಿ 4 ಆಟ
(ಉಲ್ಲಾಳ್) ಉಲ್ಲಾಸ್ 4 ಆಟ
(ಯಶವಂತಪುರ) VR CINEMAS 4 ಆಟ
(ಮಲ್ಲತ್ತಹಳ್ಳಿ) ವೆಂಕಟೇಶ್ವರ 2 ಆಟ
(ಗೊಲ್ಲರಹಟ್ಟಿ) ಪ್ರಕಾಶ್ 4 ಆಟ
(ಯಲಹಂಕ) ಬಾಣಾವರ ಅಶೋಕ 4 ಆಟ
ಬಿಡದಿ ದೀಪಕ್ 4 ಆಟ
ದೊಡ್ಡಬಳ್ಳಾಪುರ ಸೌಂದರ್ಯಮಹಲ್ 2 ಆಟ
ಚನ್ನಪಟ್ಟಣ ಲಕ್ಷ್ಮಿ 4 ಆಟ
ಗೌರಿಬಿದನೂರು ಅಭಿಲಾಷ 4 ಆಟ
ಆನೇಕಲ್ ಲಕ್ಷ್ಮಿನರಸಿಂಹ 4 ಆಟ
ರಾಮನಗರ ಶ್ರೀರಾಮ 4 ಆಟ
ತುಮಕೂರು ಗಾಯತ್ರಿ 4 ಆಟ
ತಿಪಟೂರು ಗಣೇಶ 4 ಆಟ
ಚಿಕ್ಕನಾಯಕನಹಳ್ಳಿ ಶ್ರೀನಿವಾಸ 4 ಆಟ
ಶಿರಾ ಬಾಗ್ಯಲಕ್ಷ್ಮಿ 4 ಆಟ
ಹಾರೋಹಳ್ಳಿ ವಿನಾಯಕ 4 ಆಟ
PVR CINEMAS ORION MALL
PVR CINEMAS FORUM MALL
PVR CINEMAS VAISHNAVI
PVR CINEMAS REGALIA
PVR CINEMAS MARKET CITY
PVR CINEMAS SPIRIT
INOX LIVE the MOVIE MANTRI
INOX LIVE the MOVIE CENTRAL
INOX LIVE the MOVIE SWAGATH
INOX LIVE the MOVIE FORUM
Cinépolis ETA
Cinépolis SHANTINIKETAN
Cinépolis FUN
GOPALAN CINEMAS GOPALAN ARCADE
GOPALAN CINEMAS GOPALAN LEGACY
GOPALAN CINEMAS GOPALAN SIGNATURE
ಮೈಸೂರು ಗಾಯತ್ರಿ 4 ಆಟ
DRC CINEMAS
VISION CINEMAS
sathyam CINEMAS
ಮಂಡ್ಯ ಜಯಲಕ್ಷ್ಮಿ 4 ಆಟ
ಕುಂಬಾರಕೊಪ್ಪಲು ಮಹದೇಶ್ವರ 4 ಆಟ
ಹಾಸನ ಸಹ್ಯಾದ್ರಿ 4 ಆಟ
ಮದ್ದೂರು ಸಂಜಯ 4 ಆಟ
ಮಳವಳ್ಳಿ ಮಹಾಲಕ್ಷ್ಮಿ 4 ಆಟ
ನಂಜನಗೂಡು ಶಾರದ 4 ಆಟ
ಕೆ.ಆರ್. ನಗರ ವೆಂಕಟೇಶ್ವರ 4 ಆಟ
ಕೊಳ್ಳೇಗಾಲ ಕೃಷ್ಣ 4 ಆಟ
ಗುಂಡ್ಲುಪೇಟೆ ವೆಂಕಟೇಶ್ವರ 4 ಆಟ
ಅರಸೀಕೆರೆ ಸಾಧನ 4 ಆಟ
ಚಾಮರಾಜನಗರ ಬಸವೇಶ್ವರ 4 ಆಟ
ಚನ್ನರಾಯನಪಟ್ಟಣ ಧನಲಕ್ಷ್ಮಿ 4 ಆಟ
ಕೆ.ಎಂ. ದೊಡ್ಡಿ ಮಾರುತಿ 4 ಆಟ
ಬಿಳಿಕೆರೆ ಲಕ್ಷ್ಮಿನರಸಿಂಹ 4 ಆಟ
ಪಿರಿಯಾಪಟ್ಟಣ ಮಹದೇಶ್ವರ 4 ಆಟ
ಕೆ.ಆರ್. ಪೇಟೆ ಬಸವೇಶ್ವರ 4 ಆಟ
ಸಕಲೇಶಪುರ ತೇಜಸ್ವಿನಿ 4 ಆಟ
ಬನ್ನೂರು ಸೋಮೇಶ್ವರ 4 ಆಟ
ಟಿ. ನರಸೀಪುರ ವಿಜಯ್ ಭಗವಾನ್ 4 ಆಟ
ದಾವಣಗೆರೆ ಗೀತಾಂಜಲಿ 4 ಆಟ
ಚಿತ್ರದುರ್ಗ ವೆಂಕಟೇಶ್ವರ 4 ಆಟ
ಬಳ್ಳಾರಿ ನಟರಾಜಕಾಂಪ್ಲೆಕ್ಸ್ 4 ಆಟ
ಹರಿಹರ ಶ್ರೀಕಾಂತ 4 ಆಟ
ಹೊಸದುರ್ಗ ಜ್ಯೋತಿ 4 ಆಟ
ಹಿರಿಯೂರು ಶ್ರೀಶೈಲ 4 ಆಟ
ಹೆಚ್.ಬಿ. ಹಳ್ಳಿ ಕೃಷ್ಣ 4 ಆಟ
ಜಗಳೂರು ಜೈ ಭಾರತ್ 4 ಆಟ
ಶಿವಮೊಗ್ಗ Bharath Cinemas
ಭದ್ರಾವತಿ ನೇತ್ರಾವತಿ 4 ಆಟ
ತೀರ್ಥಹಳ್ಳಿ ವೆಂಕಟೇಶ್ವರ 4 ಆಟ
ಕೊಪ್ಪ ಜೆಎಂಜೆ 4 ಆಟ
ತರೀಕೆರೆ ವಿನಾಯಕ 4 ಆಟ
ನ್ಯಾಮತಿ ಶ್ರೀಶೈಲ 4 ಆಟ
ಹೊನ್ನಹಳ್ಳಿ ಶಾಂತ 4 ಆಟ
ಹುಬ್ಬಳ್ಳಿ ಸುಧಾ 4 ಆಟ
PVR CINEMAS LAKSHMI PRIDE
Cinépolis OASIS MALL
ಧಾರವಾಡ ಪದ್ಮ
ಬೆಳಗಾಂ ಚಿತ್ರ 4 ಆಟ
ಬಿಜಾಪುರ ಲಕ್ಷ್ಮಿ 4 ಆಟ
ರಾಣೆಬೆನ್ನೂರು ಶಕ್ತಿ 4 ಆಟ
ಬಾಗಲಕೋಟೆ ಶಕ್ತಿ 4 ಆಟ
ಹಾವೇರಿ ಸರಸ್ವತಿ 4 ಆಟ
ಶಿಗ್ಗಾವ್ ರಾಜಶ್ರೀ 4 ಆಟ
ಇಳಕಲ್ ಮಹಂತೇಶ್ 4 ಆಟ
ಸಿಂಧಗಿ ಪ್ರಶಾಂತ್ 4 ಆಟ
ಗೋಕಾಕ್ ಲಕ್ಷ್ಮಿ 4 ಆಟ
ರಬಕವಿ ಶ್ರೀನಿವಾಸ 4 ಆಟ
ಮಹಾಲಿಂಗಪುರ ಅಪ್ಸರಾ 4 ಆಟ
ಗುಳೇದಗುಡ್ಡ ಅಂಕಿತ 4 ಆಟ
ಮುದೋಳ್ ಸುಭಾಷಿಣಿ 4 ಆಟ
ಅಥಣೀ ಲಕ್ಷ್ಮಿ 4 ಆಟ
ಬೀಳಗಿ ಶ್ರೀನಿವಾಸ 4 ಆಟ
ರಾಯಬಾಗ ದತ್ತ 4 ಆಟ
ಹಾರೋಗೇರಿ ಚಂದ್ರಮ 4 ಆಟ
ತಾಳಿಕೋಟೆ ಅಮೀರ್ 4 ಆಟ
ಹೊನ್ನಾವರ ಪದ್ಮಾಂಜಲಿ 4 ಆಟ
ಬೈಲಹೊಂಗಲ ಸಂಗಮ್ 4 ಆಟ
ಸಂಕೇಶ್ವರ ಸಾಯಿನಾಥ 4 ಆಟ
ರಾಮದುರ್ಗ ಶ್ರೀನಿವಾಸ 4 ಆಟ
ಯಡವಾಡ ಬಸವೇಶ್ವರ
ಬಾದಾಮಿ ಕುಮರೇಶ್ವರ 4 ಆಟ
ಗಂಗಾವತಿ ಶಿವ 4 ಆಟ
ಕೊಪ್ಪಳ ಲಕ್ಷ್ಮಿ 4 ಆಟ
ಸಿಂಧನೂರು ಮಂಜುನಾಥ 4 ಆಟ
ಶಹಪುರ ಭವಾನಿ 4 ಆಟ
ಕರಟಗಿ ಲಕ್ಷ್ಮಿ 4 ಆಟ
ಗಂಗಾವತಿ ರಾಧಿಕ 4 ಆಟ
ಮಂಗಳೂರು ರಮಾಕಾಂತಿ 4 ಆಟ
Bharath Cinemas
ಉಡುಪಿ ಅಲಂಕಾರ್ 4 ಆಟ
ಕುಂದಾಪುರ ವಿನಾಯಕ 4 ಆಟ
ಹಾಗು ರಾಜ್ಯಾದ್ಯಂತ

ದೆಹಲಿಯ ಹಳೇ ಯಮುನಾ ಸೇತುವೆಯ ಅಂಡರ್ ಪಾಸ್‌ನ ನೀರಿನಲ್ಲಿ ಸಿಲುಕಿರುವ ವಾಹನಗಳು –ಪಿಟಿಐ ಚಿತ್ರ

ಜನರ ಪ್ರಾಣ ರಕ್ಷಣೆಯೇ ಸರ್ಕಾರದ ಆದ್ಯತೆ. ಪ್ರವಾಹದಲ್ಲಿ ಸಿಲುಕಿರುವ ಜನರನ್ನು ಸುರಕ್ಷಿತವಾಗಿ ಸ್ಥಳಾಂತರಿಸಲಾಗುತ್ತಿದೆ. ತುರ್ತು ಪರಿಸ್ಥಿತಿಯಲ್ಲಿ ಎಲ್ಲರೂ ಸಹಕಾರ ನೀಡಬೇಕು
ಅರವಿಂದ ಕೇಜ್ರಿವಾಲ್, ಮುಖ್ಯಮಂತ್ರಿ, ದೆಹಲಿ.

ಮಳೆ ಅವಾಂತರ

- ಅಜಿರಾಬಾದ್, ಚಂದ್ರವಾಲ್, ಓಖ್ಲಾ ನೀರು ಶುದ್ಧೀಕರಣ ಘಟಕ ಜಲಾವೃತಗೊಂಡಿದ್ದು, ಕುಡಿಯುವ ನೀರು ಪೂರೈಕೆಯಲ್ಲಿ ಶೇ 25ರಷ್ಟು ವ್ಯತ್ಯಯ ಸಾಧ್ಯತೆ
- ಹಥಿನಿಕುಂಡ್ ಬ್ಯಾರೇಜ್‌ನಿಂದ ಹೊರ ಹರಿವು 80 ಸಾವಿರ ಕ್ಯೂಸೆಕ್ ಇದ್ದು, ಶುಕ್ರವಾರ ಬೆಳಿಗ್ಗೆ 3ಗಂಟೆಗೆ ನದಿಯ ನೀರಿನ ಮಟ್ಟ 208.45 ಮೀಟರ್‌ಗೆ ಇಳಿಯುವ ನಿರೀಕ್ಷೆ
- ನಾಲ್ಕೂ ಗಡಿ ಭಾಗಗಳ ಮೂಲಕ ದೆಹಲಿ ಪ್ರವೇಶಿಸಿದಂತೆ ಭಾರೀ ಸರಕು ಸಾಗಣೆ ವಾಹನಗಳಿಗೆ ನಿರ್ಬಂಧ
- ಐತಿಹಾಸಿಕ ಕೆಂಪು ಕೋಟೆ ಗೋಡೆಯ ಬಳಿ ಸೃಷ್ಟಿಯಾದ ಪ್ರವಾಹ. ರಾಜ್‌ಘಾಟ್, ಪುರಾಣ ಖಿಲಾ ಪ್ರದೇಶಗಳೂ ಜಲಾವೃತ
- ಸರ್ಕಾರಿ ಸುಶ್ರುತ ಟ್ರಾಮಾ ಕೇಂದ್ರದ ಮುಖ್ಯದ್ವಾರವೂ ಮುಳುಗಡೆಯಾಗಿದ್ದು, 40 ರೋಗಿಗಳು ಎಲ್‌ಎನ್‌ಜೆಪಿ ಆಸ್ಪತ್ರೆಗೆ ಸ್ಥಳಾಂತರ
- ದೆಹಲಿ ಪಾರ್ಕ್, ಗೀತಾ ಘಾಟ್ ಬಳಿಯ ಪುನರ್ವಸತಿ ಕೇಂದ್ರಗಳ ಸ್ಥಳಾಂತರ
- ನೀರಿನ ಮಟ್ಟ 208.66 ಮೀಟರ್ ತಲುಪಿದ್ದು, ಇದು 45 ವರ್ಷಗಳ ಬಳಿಕ ಸಾರ್ವಕಾಲಿಕ ದಾಖಲೆಯಾಗಿದೆ
- ಗುರುವಾರ 300ಕ್ಕೂ ಹೆಚ್ಚು ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳು, 406 ಪ್ಯಾಸೆಂಜರ್ ರೈಲುಗಳ ಸಂಚಾರ ವ್ಯತ್ಯಯಗೊಂಡಿದೆ
- ಪ್ರಯಾಣಿಕರಿಗೆ ನೆರವಾಗಲು ಸಹಾಯವಾಣಿ ತೆರೆಯಲಾಗಿದೆ
- ಜುಲೈ 15ರ ವರೆಗೆ ರೈಲುಗಳ ಸೇವೆಯಲ್ಲಿ ವ್ಯತ್ಯಯವಾಗಲಿದೆ. ಒಟ್ಟಾರೆ 600ಕ್ಕೂ ಹೆಚ್ಚು ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳು, 500ಕ್ಕೂ ಹೆಚ್ಚು ಪ್ಯಾಸೆಂಜರ್ ರೈಲುಗಳ ಸಂಚಾರಕ್ಕೆ ಮಳೆ ಅಡ್ಡಿಪಡಿಸಿದೆ
- ನಾಲ್ವರು ಸಾವು: ಉತ್ತರ ಪ್ರದೇಶದ ವಿವಿಧೆಡೆ ಸಂಭವಿಸಿದ ಪ್ರತ್ಯೇಕ ಮಳೆ ಅವಘಡಗಳಲ್ಲಿ ನಾಲ್ವರು ಮೃತಪಟ್ಟಿದ್ದು, ಮೂವರು ಗಾಯಗೊಂಡಿದ್ದಾರೆ

ಕೇಂದ್ರಕ್ಕೆ ಪತ್ರ ಬರೆದ ಕೇಜ್ರಿವಾಲ್

ದೆಹಲಿಯಲ್ಲಿ ಜಿ20 ಸಭೆಗೆ ಕೆಲವೇ ದಿನಗಳು ಬಾಕಿ ಉಳಿದಿವೆ. ರಾಷ್ಟ್ರ ರಾಜಧಾನಿಯ ಪ್ರವಾಹ ಪರಿಸ್ಥಿತಿಯು ವಿಶ್ವಕ್ಕೆ ಕೆಟ್ಟ ಸಂದೇಶ ರವಾನಿಸಲಿದೆ. ಜೊತೆಗೆ, ನಾವು ಸಂತ್ರಸ್ತರನ್ನು ಸುರಕ್ಷಿತವಾಗಿ ಸ್ಥಳಾಂತರಿಸಬೇಕಿದೆ. ಹಾಗಾಗಿ, ಬ್ಯಾರೇಜ್‌ನಿಂದ ನೀರಿನ ಹೊರ ಹರಿವು ತಗ್ಗಿಸಬೇಕು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ, ಮುಖ್ಯಮಂತ್ರಿ ಕೇಜ್ರಿವಾಲ್ ಪತ್ರ ಬರೆದಿದ್ದಾರೆ.

41 ಸಾವಿರ ಜನರಿಗೆ ಪ್ರವಾಹ ಸಂಕಷ್ಟ; ಮೂರು ದಿನ ಶಾಲೆ, ಕಾಲೇಜುಗಳಿಗೆ ರಜೆ

ದಣಿಯಿತು ದೆಹಲಿ: ತಣಿಯಲಿಲ್ಲ ಯಮುನಾ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ವರುಣನ ಆರ್ಭಟ ನಿಂತಿದ್ದರೂ ಯಮುನೆಯ ಮುನಿಸು ಇನ್ನೂ ತಣಿದಿಲ್ಲ. ಗುರುವಾರವೂ ನದಿಯ ನೀರು ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದು, ಜನಜೀವನ ಅಸ್ತ-ವ್ಯಸ್ತವಾಯಿತು.

ಮೆಟ್ರೊ ಸೇವೆ ವ್ಯತ್ಯಯಗೊಂಡಿತು.

ದೆಹಲಿ ವಿಪತ್ತು ನಿರ್ವಹಣಾ ಪ್ರಾಧಿಕಾರದ ಅಧಿಕಾರಿಗಳ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಭಾನುವಾರದವರೆಗೆ ಎಲ್ಲಾ ಶಾಲಾ, ಕಾಲೇಜುಗಳಿಗೆ ರಜೆ ಘೋಷಿಸಿದ್ದಾರೆ. ತುರ್ತು ಸೇವೆ ಹೊರತುಪಡಿಸಿ ಉಳಿದ ಸರ್ಕಾರಿ ಅಧಿಕಾರಿಗಳಿಗೆ ಮನೆಯಲ್ಲಿಯೇ ಕೆಲಸ ನಿರ್ವಹಿಸಲು ಸೂಚಿಸಲಾಗಿದೆ. ಖಾಸಗಿ ಕಂಪನಿಗಳು ನೌಕರರಿಗೆ ಮನೆಯಿಂದಲೇ ಕೆಲಸ ನಿರ್ವಹಿಸಲು ಸೂಚಿಸಿದೆ.

ಪ್ರವಾಹ ಪೀಡಿತ ಪ್ರದೇಶದಲ್ಲಿ ವ್ಯಕ್ತಿಯೊಬ್ಬರು ತನ್ನ ನಾಯಿಯನ್ನು ರಕ್ಷಿಸಿದರು –ಪಿಟಿಐ ಚಿತ್ರ

ಹರಿಯಾಣದ ಹಥಿನಿಕುಂಡ್ ಬ್ಯಾರೇಜ್ ನೀರಿನ ಹೊರ ಹರಿವು ದೆಹಲಿಯನ್ನು ಸಂಕಷ್ಟದಲ್ಲಿ ಮುಳುಗಿಸಿದೆ. ಹೊರ ಹರಿವಿನ ಪ್ರಮಾಣ ತಗ್ಗಿಸಲು ದೆಹಲಿ ಸರ್ಕಾರ ಮಾಡಿದ ಮನವಿಗೆ ಪ್ರತಿಕ್ರಿಯಿಸಿರುವ ಕೇಂದ್ರವು, 'ಹೆಚ್ಚುವರಿ ನೀರನ್ನು ನದಿಗೆ ಹರಿಸದೆ ಬೇರೆ ಮಾರ್ಗವಿಲ್ಲ' ಎಂದು ಉತ್ತರಿಸಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ 12 ತಂಡಗಳು ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ನಾಲ್ಕುವರೆ ಸಾವಿರ ಜನರನ್ನು ಸ್ಥಳಾಂತರಿಸಿವೆ. ಜನರನ್ನು ದೋಣಿಗಳಲ್ಲಿ ಸುರಕ್ಷಿತ ಸ್ಥಳಕ್ಕೆ ಕರೆತರಲಾಗುತ್ತಿದೆ. ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆ ನಡೆಸಿ ತುರ್ತು ಪರಿಹಾರ ಕಾರ್ಯಕ್ಕೆ ಸೂಚಿಸಿದರು.

ಮುಳುಗಡೆ ಎಲ್ಲೆಲ್ಲಿ?: ಯಮುನಾ ನದಿ ಸಮೀಪದ ತಗ್ಗು ಪ್ರದೇಶಗಳಲ್ಲಿ ವಾಸಿಸುತ್ತಿರುವ 41 ಸಾವಿರಕ್ಕೂ ಹೆಚ್ಚು ಜನರು ಪ್ರವಾಹಕ್ಕೆ ಸಿಲುಕಿದ್ದಾರೆ. ಈಶಾನ್ಯ, ಪಶ್ಚಿಮ, ಕೇಂದ್ರ ಮತ್ತು ಆಗ್ನೇಯ ನಗರ ಜಿಲ್ಲೆಯಲ್ಲಿ ಪ್ರವಾಹ ಹೆಚ್ಚಿದೆ. ದೆಹಲಿಯ ಪಶ್ಚಿಮ ಭಾಗವು ಹೆಚ್ಚು ಬಾಧಿತವಾಗಿದೆ.

ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನಿವಾಸದ 350 ಮೀಟರ್ ಸಮೀಪದಲ್ಲಿಯೇ ಪ್ರವಾಹ ತಲೆದೋರಿದೆ. ಸಚಿವರು, ಸಚಿವಾಲಯದ ಅಧಿಕಾರಿಗಳೂ ಪ್ರವಾಹದಿಂದ ತತ್ತರಿಸಿದ್ದಾರೆ. ದೆಹಲಿ ಹೊರಭಾಗದ ರಿಂಗ್ ರಸ್ತೆ ಸೇರಿದಂತೆ ಹಲವು ಪ್ರಮುಖ ರಸ್ತೆಗಳು ಮುಳುಗಡೆಯಾಗಿವೆ. ದಟ್ಟಣೆ ನಿಯಂತ್ರಿಸಲು ಪರ್ಯಾಯ ಮಾರ್ಗಸೂಚಿಸಲಾಗಿದೆ..

ಮೂರು ನೀರು ಶುದ್ಧೀಕರಣ ಘಟಕಗಳು ಮುಳುಗಡೆಯಾಗಿವೆ. ಕೆಲವು ಭಾಗಗಳಿಗೆ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಕೇಜ್ರಿವಾಲ್ ತಿಳಿಸಿದ್ದಾರೆ.

ಮೆಟ್ರೊ ಸೇವೆ ವ್ಯತ್ಯಯ: ಯುಮುನಾ ಬ್ಯಾಂಕ್ ಮೆಟ್ರೊ ಮಾರ್ಗಕ್ಕೆ ತಲುಪುವ ರಸ್ತೆ ಜಲಾವೃತಗೊಂಡಿದೆ. ಈ ನಿಲ್ದಾಣದ ಸೇವೆಯನ್ನು ತಾತ್ಕಾಲಿಕವಾಗಿ ಬಂದ್ ಮಾಡಲಾಗಿದೆ.

'ಈ ನೀಲಿ ಮಾರ್ಗವು ನೋಯ್ಡಾ ಮತ್ತು ಗಾಜಿಯಾಬಾದ್ ನಡುವೆ ಸಂಪರ್ಕ ಬೆಸೆಯುತ್ತದೆ. ಸದ್ಯಕ್ಕೆ ಈ ಮಾರ್ಗದ ಸೇವೆ ಬಂದ್ ಆಗಿದೆ. ಪ್ರಯಾಣಿಕರು ಪರ್ಯಾಯ ಮಾರ್ಗದಲ್ಲಿ ಸಂಚರಿಸಬೇಕು' ಎಂದು ದೆಹಲಿ ಮೆಟ್ರೊ ರೈಲು ಕಾರ್ಪೊರೇಷನ್ (ಡಿಎಂಆರ್‌ಸಿ) ಟ್ವೀಟ್ ಮಾಡಿದೆ.

ನವದೆಹಲಿಯ ಉಸ್ಮಾನ್‌ಪುರದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ ಸಿಬ್ಬಂದಿ ಪ್ರವಾಹದಲ್ಲಿ ಸಿಲುಕಿದ್ದ ಕುಟುಂಬದ ಸದಸ್ಯರನ್ನು ರಕ್ಷಿಸಿದರು –ಪಿಟಿಐ ಚಿತ್ರ

ಬಾಂಬೆ ಹೈಕೋರ್ಟ್ ನ್ಯಾಯಮೂರ್ತಿ ಭಾರತೀ ಡಾಂಗರೆ ಅಭಿಮತ

'ಹದಿಹರೆಯದವರ ಲೈಂಗಿಕ ಸಂಬಂಧ; ಜಗತ್ತನ್ನು ಗಮನಿಸಿ'

ಮುಂಬೈ (ಪಿಟಿಐ): 'ಹದಿಹರೆಯ-ದವರು ಪರಸ್ಪರ ಸಮ್ಮತಿಯ ಲೈಂಗಿಕ ಸಂಬಂಧ ಹೊಂದುವ ನಿಗದಿತ ವಯಸ್ಸಿನ ನಿರ್ಬಂಧನೆಯನ್ನು ಹಲವು ದೇಶಗಳು ಕಡಿಮೆಗೊಳಿಸಿದ್ದು; ನಮ್ಮ ದೇಶ ಮತ್ತು ಸಂಸತ್ತು ಸಹ ಅದರತ್ತ ಗಮನ ಕೊಡಬೇಕು' ಎಂದು ಬಾಂಬೆ ಹೈಕೋರ್ಟ್ ಹೇಳಿದೆ.

ಪೋಕ್ಸೊ ಕಾಯ್ದೆಯಡಿ ದಾಖಲಾಗುವ ಹದಿಹರೆಯದವರ ಲೈಂಗಿಕ ಅಪರಾಧಗಳ ಕ್ರಿಮಿನಲ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದಕ್ಕೆ ನ್ಯಾಯಮೂರ್ತಿ ಭಾರತೀ ಡಾಂಗರೆ ಅವರ ಏಕ ಸದಸ್ಯ ಪೀಠ, ಜುಲೈ 10ರಂದು ಕಳವಳ ವ್ಯಕ್ತಪಡಿಸಿದೆ.

'ಲೈಂಗಿಕ ಸ್ವಾಯತ್ತತೆಯು, ಅಪೇಕ್ಷಿತ ಲೈಂಗಿಕ ಚಟುವಟಿಕೆಯಲ್ಲಿ ತೊಡಗುವ ಮತ್ತು ಅನಪೇಕ್ಷಿತ ಲೈಂಗಿಕ ಆಕ್ರಮಣದಿಂದ ರಕ್ಷಿಸುವ ಹಕ್ಕನ್ನು ಒಳಗೊಂಡಿದೆ. ಹದಿಹರೆಯದವರ ಹಕ್ಕುಗಳ ಈ ಎರಡೂ ಅಂಶಗಳನ್ನು ಪರಿಗಣಿಸಿದಾಗ ಮಾತ್ರ; ಮಾನವನ ಲೈಂಗಿಕ ಘನತೆಯನ್ನು ಸಂಪೂರ್ಣವಾಗಿ ಗೌರವಿಸಿದಂತೆ' ಎಂದು ನ್ಯಾಯಪೀಠ ಹೇಳಿದೆ.

17 ವರ್ಷದ ಬಾಲಕಿ ಮೇಲೆ ಅತ್ಯಾಚಾರ ಎಸಗಿದ ಆರೋಪದ ಮೇಲೆ ವಿಶೇಷ ಕೋರ್ಟ್ ಶಿಕ್ಷೆ ವಿಧಿಸಿದ್ದನ್ನು ಪ್ರಶ್ನಿಸಿ, 25 ವರ್ಷದ ಯುವಕನೊಬ್ಬ ಮೇಲ್ಮನವಿ ಸಲ್ಲಿಸಿದ್ದ ಪ್ರಕರಣದ ವಿಚಾರಣೆ ಸಂದರ್ಭ ನ್ಯಾಯಾಲಯ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ಸಂದರ್ಭ, ಸಹಮತದಿಂದಲೇ ಲೈಂಗಿಕ ಸಂಬಂಧ ಹೊಂದಿದ್ದೆವು ಎಂಬುದನ್ನು ಇಬ್ಬರೂ ತಿಳಿಸಿದ್ದರು. 'ಮುಸ್ಲಿಂ ಕಾನೂನಿನ್ವಯ ನಾನು ವಯಸ್ಕಳು. ಆರೋಪಿ ಜೊತೆಗೆ 'ನಿಖಾ' ಮಾಡಿಕೊಂಡಿರುವೆ' ಎಂದು ಬಾಲಕಿ ಹೇಳಿಕೆ ನೀಡಿದ್ದಳು.

ಈ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಡಾಂಗರೆ, ಪರಸ್ಪರ ಸಮ್ಮತಿಯ ಲೈಂಗಿಕ ಸಂಬಂಧಕ್ಕೆ ಸಾಕ್ಷಿಗಳು ಪೂರಕವಾಗಿವೆ ಎಂದು ವಿಶೇಷ ನ್ಯಾಯಾಲಯ ವಿಧಿಸಿದ್ದ ಶಿಕ್ಷೆಯನ್ನು ರದ್ದುಗೊಳಿಸಿದರು. ಆರೋಪ ಹೊತ್ತಿದ್ದ ಯುವಕನನ್ನು ಖುಲಾಸೆಗೊಳಿಸಿ, ಜೈಲಿನಿಂದ ಬಿಡುಗಡೆಗೂ ಆದೇಶಿಸಿದರು.

'ಲೈಂಗಿಕ ಕ್ರಿಯೆಗಳು ಮದುವೆಯ ಪರಿಮಿತಿಯಲ್ಲೇ ಮಾತ್ರ ನಡೆಯ-ದಿದ್ದರಿಂದ; ಸಮ್ಮತಿಯ ವಯಸ್ಸನ್ನು ಮದುವೆಯ ವಯಸ್ಸಿನಿಂದ ಪ್ರತ್ಯೇಕಿಸಿ ನೋಡಬೇಕಿದೆ. ಸಮಾಜದ ದೃಷ್ಟಿಯಿಂದಲೂ ಅಲ್ಲ; ನ್ಯಾಯಾಂಗ ವ್ಯವಸ್ಥೆಯೂ ಈ ಮಹತ್ವದ ಅಂಶವನ್ನು ಗಮನಿಸಬೇಕು' ಎಂದು ಹೈಕೋರ್ಟ್ ಹೇಳಿದೆ.

'ದೇಶದ ವಿವಿಧ ರಾಜ್ಯಗಳಲ್ಲಿ ಪರಸ್ಪರ ಸಮ್ಮತಿಯ ಲೈಂಗಿಕ ಸಂಬಂಧದ ವಯಸ್ಸು ವಿವಿಧ ಕಾಲಘಟ್ಟದಲ್ಲಿ ಹೆಚ್ಚಿದೆ. 1940ರಿಂದ 2012ರವರೆಗೆ 16 ವರ್ಷ ನಿಗದಿಯಾಗಿತ್ತು. ಪೋಕ್ಸೊ ಕಾಯ್ದೆ ಜಾರಿಗೊಂಡ ಬಳಿಕ ಇದು 18 ವರ್ಷಕ್ಕೆ ನಿಗದಿಯಾಗಿದೆ. ಪ್ರಪಂಚದ-ಲ್ಲಿನ ರಾಷ್ಟ್ರಗಳಲ್ಲಿ ನಮ್ಮಲ್ಲೇ ವಯಸ್ಸಿನ ಮಿತಿ ಹೆಚ್ಚಿರೋದು. ಬಹುತೇಕ ದೇಶಗಳಲ್ಲಿ 14ರಿಂದ 16 ವರ್ಷವಿದೆ' ಎಂದಿದೆ.

ಜರ್ಮನಿ, ಇಟಲಿ, ಪೋರ್ಚುಗಲ್, ಹಂಗೇರಿಯಲ್ಲಿ 14 ವರ್ಷದ ಮಕ್ಕಳಲ್ಲಿ ಲೈಂಗಿಕತೆಗೆ ಒಪ್ಪಿಗೆ ನೀಡುವ ಸಾಮರ್ಥ್ಯ ಇದೆ ಎಂದು ಪರಿಗಣಿಸಲಾಗಿದೆ. ಲಂಡನ್ ಮತ್ತು ವೇಲ್ಸ್‌ನಲ್ಲಿ ಸಮ್ಮತಿಯ ವಯಸ್ಸು 16 ಇದ್ದರೆ, ಜಪಾನ್‌ನಲ್ಲಿ 13 ವರ್ಷವಿದೆ ಎಂದು ನ್ಯಾಯಾಲಯ ಹೇಳಿದೆ.

ಪ್ರಾಧ್ಯಾಪಕರ ಕೈ ಕತ್ತರಿಸಿದ್ದ ಮೂವರಿಗೆ ಜೀವಾವಧಿ ಶಿಕ್ಷೆ

ಕೊಚ್ಚಿ (ಪಿಟಿಐ): ಕಾಲೇಜು ಪ್ರಾಧ್ಯಾಪಕ ಪ್ರೊ.ಟಿ.ಜೆ. ಜೋಸೆಫ್ ಅವರ ಬಲ ಮುಂಗೈ ಕತ್ತರಿಸಿದ್ದ ಪ್ರಕರಣದಲ್ಲಿ ಆರು ಆರೋಪಿಗಳ ಪೈಕಿ ಮೂವರು ಅಪರಾಧಿಗಳಿಗೆ ಇಲ್ಲಿನ ವಿಶೇಷ ಎನ್‌ಐಎ ನ್ಯಾಯಾಲಯ ಗುರುವಾರ ಜೀವಾವಧಿ ಶಿಕ್ಷೆ ವಿಧಿಸಿದೆ. ಇವರೆಲ್ಲ ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾಗೆ (ಪಿಎಫ್‌ಐ) ಸೇರಿದವರು.

ಇಡುಕ್ಕಿ ಜಿಲ್ಲೆಯ ತೋಡುಪುಳದ ನ್ಯೂಮನ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಪ್ರೊ. ಜೋಸೆಫ್ ಅವರ ಮೇಲೆ 2010ರ ಜುಲೈ 4ರಂದು ಪಿಎಫ್‌ಐ ಕಾರ್ಯಕರ್ತರು ದಾಳಿ ನಡೆಸಿದ್ದರು.

ನ್ಯಾಯಾಧೀಶ ಅನಿಲ್ ಕೆ. ಭಾಸ್ಕರ್ ಅವರು, ಅಪರಾಧಿಗಳಾದ ಸಜಿಲ್, ನಾಸರ್ ಮತ್ತು ನಜೀಬ್‌ಗೆ ಎರಡನೇ ಹಂತದ ವಿಚಾರಣೆಯಲ್ಲಿ ಜೀವಾವಧಿ ಶಿಕ್ಷೆ ಪ್ರಕಟಿಸಿದರು. ಯುಎಪಿಎ, ಐಪಿಸಿ ಮತ್ತು ಸ್ಫೋಟಕ ವಸ್ತುಗಳ ಕಾಯ್ದೆಗಳಡಿ ಶಿಕ್ಷೆ ವಿಧಿಸಲಾಗಿದೆ.

ಮೊದಲ ಹಂತದ ವಿಚಾರಣೆಯಲ್ಲಿ 10 ಜನರಿಗೆ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. ಅಪರಾಧಿಗಳಿಗೆ ಆಶ್ರಯ ನೀಡಿದ್ದಕ್ಕಾಗಿ ಇತರ ಮೂವರನ್ನು ತಪ್ಪಿತ-ಸ್ಥರೆಂದು ಘೋಷಿಸಿತ್ತು.

ಕೇಜ್ರಿವಾಲ್‌ಗೆ ಕೋರ್ಟ್ ಸೂಚನೆ

ಅಹಮದಾಬಾದ್ (ಪಿಟಿಐ): ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ವಿದ್ಯಾರ್ಹತೆಯ ಪದವಿ ಪ್ರಮಾಣಪತ್ರಕ್ಕೆ ಸಂಬಂಧಿಸಿದಂತೆ ನೀಡಿದ ಅವಹೇಳನಕಾರಿ ಹೇಳಿಕೆಗಳಿಂದಾಗಿ, ಕ್ರಿಮಿನಲ್ ಮಾನನಷ್ಟ ಮೊಕದ್ದಮೆ ಎದುರಿಸುತ್ತಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಆಮ್ ಆದ್ಮಿ ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್‌ಗೆ ಇದೇ 26ರಂದು ಖುದ್ದು ಹಾಜರಾಗುವಂತೆ ಮೆಟ್ರೊಪಾಲಿಟನ್ ನ್ಯಾಯಾಲಯ ಗುರುವಾರ ಸೂಚಿಸಿದೆ.

ಗುಜರಾತ್ ವಿಶ್ವವಿದ್ಯಾಲಯ ಈ ಇಬ್ಬರ ವಿರುದ್ಧವೂ ಮಾನನಷ್ಟ ಮೊಕದ್ದಮೆ ದಾಖಲಿಸಿದೆ.

ಜುಲೈ 13ರಂದು ವಿಚಾರಣೆಗೆ ಹಾಜರಾಗುವಂತೆ ನ್ಯಾಯಾಲಯ ಈ ಇಬ್ಬರಿಗೂ ಹಿಂದಿನ ವಿಚಾರಣೆಯಲ್ಲಿ ಸೂಚಿಸಿತ್ತು. ಗುರುವಾರ ಇಬ್ಬರೂ ಗೈರಾಗಿದ್ದರು. ನವದೆಹಲಿಯಲ್ಲಿ ಭಾರಿ ಮಳೆಯಾಗುತ್ತಿದ್ದು, ಖುದ್ದು ಹಾಜರಾತಿಯಿಂದ ವಿನಾಯಿತಿ ನೀಡಬೇಕು ಎಂದು ಇವರ ಪರ ವಕೀಲರು ಕೋರ್ಟ್‌ಗೆ ಮನವಿ ಮಾಡಿಕೊಂಡರು.

ಎಎಪಿ ನಾಯಕರ ಪರ ವಕೀಲರು ಸಲ್ಲಿಸಿದ ಈ ಮನವಿಗೆ ಗುಜರಾತ್ ವಿಶ್ವವಿದ್ಯಾಲಯದ ಪರ ವಕಾಲತ್ತು ವಹಿಸಿರುವ ವಕೀಲ ಅಮಿತ್ ನಾಯರ್ ಆಕ್ಷೇಪ ವ್ಯಕ್ತಪಡಿಸಲಿಲ್ಲ. ಆದರೆ ವಿಚಾರಣೆ ಪ್ರಕ್ರಿಯೆ ವಿಳಂಬವಾಗುವುದನ್ನು ತಪ್ಪಿಸಲು ಮುಂದಿನ ವಿಚಾರಣೆಗೆ ಖುದ್ದು ಹಾಜರಿಗೆ ಸೂಚಿಸಬೇಕು ಎಂದು ನ್ಯಾಯಾ ಧೀಶರನ್ನು ಕೋರಿದರು. ಈ ಮನವಿ ಪರಿಗಣಿಸಿದ ಹೆಚ್ಚುವರಿ ಮುಖ್ಯ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಎಸ್.ಜೆ.ಪಾಂಚಾಲ್, ಜುಲೈ 26ರಂದು ಮುಂದಿನ ವಿಚಾರಣೆ ನಡೆಯಲಿದ್ದು, ಅಂದು ಇಬ್ಬರೂ ನ್ಯಾಯಾಲಯಕ್ಕೆ ಹಾಜರಾಗಬೇಕು ಎಂದು ಸೂಚಿಸಿದರು.

ಗುಜರಾತ್ ಹೈಕೋರ್ಟ್‌ನಲ್ಲಿ ಪ್ರಕರಣವೊಂದಿರುವುದರಿಂದ ವಿಚಾರಣೆಯನ್ನು ಮುಂದೂಡಬೇಕು ಎಂದು ಎಎಪಿ ನಾಯಕರ ಪರ ವಕೀಲರು ಮನವಿ ಮಾಡಿಕೊಂಡರು. ಈ ಪ್ರಕರಣಕ್ಕೂ, ಅದಕ್ಕೂ ಸಂಬಂಧವಿಲ್ಲ ಎಂದು ಗುಜರಾತ್ ವಿ.ವಿ ಪರ ವಕೀಲರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ, ಕೇಜ್ರಿವಾಲ್ ಹಾಗೂ ಸಿಂಗ್ ಪರ ವಕೀಲರು ತಮ್ಮ ಮನವಿ ಹಿಂತೆಗೆದುಕೊಂಡರು.

ಹೈಕೋರ್ಟ್‌ನ ಮೂವರು ನ್ಯಾಯಮೂರ್ತಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದ 8 ತಿಂಗಳ ಬಳಿಕ ಹೈಕೋರ್ಟ್‌ನ ಮೂವರು ನ್ಯಾಯಮೂರ್ತಿಗಳನ್ನು ಕೇಂದ್ರ ಸರ್ಕಾರ ಗುರುವಾರ ವರ್ಗಾವಣೆ ಮಾಡಿದೆ.

ನ್ಯಾಯಮೂರ್ತಿ ಡಿ. ರಮೇಶ್ ಅವರನ್ನು ಆಂಧ್ರ ಪ್ರದೇಶ ಹೈಕೋರ್ಟ್‌ನಿಂದ ಅಲಹಾಬಾದ್ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಲಲಿತಾ ಕನ್ನೆಗಂಟಿ ಅವರನ್ನು ತೆಲಂಗಾಣ ಹೈಕೋರ್ಟ್‌ನಿಂದ ಕರ್ನಾಟಕ ಹೈಕೋರ್ಟ್‌ಗೆ ಮತ್ತು ನ್ಯಾಯಮೂರ್ತಿ ವಿಪುಲ್ ಎಂ. ಪಾಂಚೋಲಿ ಅವರನ್ನು ಗುಜರಾತ್ ಹೈಕೋರ್ಟ್‌ನಿಂದ ಪಟ್ನಾ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾವ್ ಮೇಘವಾಲ್ ಟ್ವೀಟ್ ಮಾಡಿ ತಿಳಿಸಿದ್ದಾರೆ.

ನ್ಯಾ. ಪಂಚೋಲಿ ವರ್ಗಾವಣೆಗೆ 2022ರ ಸೆ.29ರಂದು, ನ್ಯಾ.ರಮೇಶ್ ಮತ್ತು ಕನ್ನೆಗಂಟಿ ಅವರ ವರ್ಗಾವಣೆಗೆ ನ.24ರಂದು ಕೊಲಿಜಿಯಂ ಶಿಫಾರಸು ಮಾಡಿತ್ತು.

ಗುಜರಾತ್ ಹೈಕೋರ್ಟ್‌ನಿಂದ ಪಾಂಚೋಲಿ ಅವರನ್ನು ವರ್ಗಾವಣೆ ಮಾಡಿದ್ದನ್ನು ವಿರೋಧಿಸಿರುವ ಗುಜರಾತ್ ಹೈಕೋರ್ಟ್ ವಕೀಲರ ಸಂಘ ಪ್ರತಿಭಟನೆ ನಡೆಸಿದೆ.

ಕಲ್ಲುಗಣಿ ಅಕ್ರಮ: ಶಾಸಕ ಮುನಿರತ್ನ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ

'ಹುಣಸಮಾರನಹಳ್ಳಿ ಗ್ರಾಮದ ಸರ್ವೆ ನಂಬರ್ 179ರಲ್ಲಿ ಸರ್ಕಾರಿ ಖರಾಬು ಬಂಡೆ ಜಮೀನಿತ್ತು. ವಿಶೇಷ ಜಿಲ್ಲಾಧಿಕಾರಿ ಆದೇಶದ ಮೇರೆಗೆ ಖರಾಬು ಬಂಡೆ ಜಮೀನನ್ನು ಆರೋಪಿಗಳು ತಮ್ಮ ಹೆಸರಿಗೆ ಖಾತೆ ಮಾಡಿ-ಸಿಕೊಂಡಿದ್ದಾರೆ. ಇದೇ ಜಾಗದಲ್ಲಿದ್ದ ಬಂಡೆಗಳನ್ನು ಜಿಲಿಟಿನ್ ಕಡ್ಡಿ ಬಳಸಿ ಸ್ಫೋಟಿಸಲಾಗಿದೆ. ನಂತರ, ಬಂಡೆಗಳ ಚೂರುಗಳನ್ನು ಮಾರಾಟ ಮಾಡಿರುವ ಅನುಮಾನವಿರುವುದಾಗಿ ತಹಶೀಲ್ದಾರ್ ದೂರಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಸ್ಫೋಟಕ ವಸ್ತುವಿಗೆ ಸಂಬಂಧಿಸಿದಂತೆ ನಿರ್ಲಕ್ಷ್ಯದ ನಡವಳಿಕೆ (ಐಪಿಸಿ 286), ಸ್ಫೋಟಕ ನಿಷೇಧ ಕಾಯ್ದೆ ಹಾಗೂ ಕರ್ನಾಟಕ ಭೂ ಕಂದಾಯ ಕಾಯ್ದೆಯಡಿ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ವಿಚಾರಣೆಗೆ ಹಾಜರಾಗುವಂತೆ ನಾಲ್ವರು ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಹಾಗೂ ಬಾಂಬ್ ನಿಷ್ಕ್ರಿಯ ದಳದ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಲ ಮಾದರಿಗಳನ್ನು ಸಂಗ್ರಹಿಸಿದ್ದಾರೆ. ಅವರಿಂದ ವರದಿ ಬಂದ ನಂತರ, ಮತ್ತಷ್ಟು ಮಾಹಿತಿ ಲಭ್ಯವಾಗಲಿದೆ' ಎಂದು ತಿಳಿಸಿವೆ.

ತಹಶೀಲ್ದಾರ್ ದೂರಿನ ವಿವರ: 'ಸರ್ಕಾರಿ ಖರಾಬು ಬಂಡೆ ಜಮೀನಿಗೆ ಹೊಂದಿಕೊಂಡಂತೆ ಸರ್ವೆ ನಂಬರ್ 177/3, 178/1-2-3, 179 ಮತ್ತು ಸೊಣ್ಣಪ್ಪನಹಳ್ಳಿ ಗ್ರಾಮದ ಸರ್ವೆ ನಂಬರ್ 34/1-2-3 ಹಾಗೂ ಸರ್ವೆ ನಂಬರ್ 17/7-8-9 ಜಮೀನಿದೆ. ಇದೇ ಜಮೀನುಗಳಲ್ಲಿ ಜಿಲೆಟಿನ್ ಕಡ್ಡಿ ಬಳಸಿ ಬಂಡೆಗಳನ್ನು ಸ್ಫೋಟಿಸಿ ಅಕ್ರಮವಾಗಿ ಗಣಿಗಾರಿಕೆ ನಡೆಯುತ್ತಿರುವ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಿಸಿ ಜೈ ಭೀಮ್ ಸೇನೆ ಸಂಘಟನೆ ಪದಾಧಿಕಾರಿಗಳು ಮನವಿ ಸಲ್ಲಿಸಿದ್ದರು' ಎಂದು ತಹಶೀಲ್ದಾರ್ ಅವರು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ದೂರು ಆಧರಿಸಿ ಉಪ ವಿಭಾಗಾಧಿಕಾರಿ ಜೊತೆ ಜಂಟಿ ತನಿಖೆ ನಡೆಸಿ ವರದಿ ಸಿದ್ಧಪಡಿಸ-ಲಾಗಿದೆ. ಜಮೀನಿನಲ್ಲಿ ಅಕ್ರಮವಾಗಿ ಬಂಡೆಗಳನ್ನು ಸ್ಫೋಟಿಸಿರುವ ಆರೋಪಿ ಹಿಡುವಳಿದಾರರು, ಬಂಡೆಗಳನ್ನು ಮಾರಾಟ ಮಾಡಿ ಸರ್ಕಾರಕ್ಕೆ ನಷ್ಟವನ್ನುಂಟು ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ದೂರಿನಲ್ಲಿ ತಿಳಿಸಲಾಗಿದೆ.

'ಅಕ್ರಮವಾಗಿ ಬಂಡೆಗಳನ್ನು ಸ್ಫೋಟಿಸಿರುವ ಜಮೀನು ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಿ' ಎಂದು ತಹಶೀಲ್ದಾರ್ ಅವರು ಕೋರಿದ್ದಾರೆ.

'ಜಿಲ್ಲಾಧಿಕಾರಿ ಆದೇಶ ಉಲ್ಲಂಘನೆ'

'ಸರ್ವೆ ನಂಬರ್ 179ರಲ್ಲಿದ್ದ ಸರ್ಕಾರಿ ಖರಾಬು ಜಮೀನನ್ನು, ಆರೋಪಿಗಳು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದಾರೆ. ಸೊಣ್ಣಪ್ಪನಹಳ್ಳಿ ಗ್ರಾಮದಲ್ಲಿರುವ ಜಮೀನು ಶಾಸಕ ಮುನಿರತ್ನ ಮಾಲೀಕತ್ವದಲ್ಲಿದೆ. ಎಲ್ಲರೂ ಸೇರಿಯೇ ಬಂಡೆಗಳನ್ನು ಸ್ಫೋಟಿಸಿರುವು ದಕ್ಕೆ ಪುರಾವೆಗಳು ಸಿಕ್ಕಿವೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಜಮೀನಿನ ಕೆಲಭಾಗದ ಕೃಷಿ ಭೂಮಿಯನ್ನು ಮಾತ್ರ ವಾಣಿಜ್ಯ ಉಪಯೋಗಕ್ಕೆಂದು ಪರಿವರ್ತಿಸಲಾಗಿದೆ. ಉಳಿದ ಕೃಷಿ ಭೂಮಿಯನ್ನು ಅನ್ಯ ಉದ್ದೇಶಕ್ಕೆ ಬಳಸದಂತೆ ಜಿಲ್ಲಾಧಿಕಾರಿ ಆದೇಶವಿದೆ. ಇದನ್ನು ಉಲ್ಲಂಘಿಸಿ ಆರೋಪಿಗಳು ಅಕ್ರಮ ಗಣಿಗಾರಿಕೆ ನಡೆಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದರು.

ಚಂದ್ರಾನ್ವೇಷಣೆಗೆ ಎರಡು ದಶಕ

ಒಂದನೇ ಪುಟದಿಂದ

ವಿಜ್ಞಾನಿಗಳ ನಿರಂತರ ಶ್ರಮದ ಫಲವಾಗಿ 2008ರ ಅಕ್ಟೋಬರ್ 22ರಂದು ಇಸ್ರೊದ 'ಪಿಎಸ್‌ಎಲ್‌ವಿ-ಸಿ11' ರಾಕೆಟ್ ವ್ಯೋಮದತ್ತ ಹಾರಿತ್ತು. ಖ್ಯಾತ ವಿಜ್ಞಾನಿ ಎಂ.ದೊರೈಸ್ವಾಮಿ ನಿರ್ದೇಶಕರಾಗಿದ್ದರು.

ತಿರುವನಂತಪುರದಲ್ಲಿರುವ ವಿಕ್ರಮ ಸಾರಾಭಾಯಿ ಬಾಹ್ಯಾಕಾಶ ಕೇಂದ್ರವು 'ಪಿಎಸ್‌ಎಲ್‌ವಿ = ಸಿ11' ರಾಕೆಟ್‌ಅನ್ನು ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿತ್ತು.

ಗಗನನೌಕೆಯೂ ಸೇರಿದಂತೆ ಈ ಉಡಾವಣಾ ವಾಹಕದ ತೂಕ 320 ಟನ್‌ಗಳಷ್ಟಿತ್ತು. ಅಮೆರಿಕ, ಬ್ರಿಟನ್, ಜರ್ಮನಿ, ಸ್ವೀಡನ್ ಹಾಗೂ ಬಲ್ಗೇರಿ-ಯಾದಲ್ಲಿ ತಯಾರಿಸಲಾಗಿದ್ದ ಒಟ್ಟು 11 ವೈಜ್ಞಾನಿಕ ಸಾಧನಗಳನ್ನು ಈ ಗಗನನೌಕೆಯಲ್ಲಿ ಅಳವಡಿಸಲಾಗಿತ್ತು.

ಚಂದ್ರನಿಂದ 100 ಕಿ.ಮೀ. ಅಂತರದಲ್ಲಿ ಪರಿಭ್ರಮಣೆ ಮಾಡಿತ್ತು. ಚಂದ್ರನ ಮೇಲ್ಮೈಯ ರಾಸಾಯನಿಕ ಸಂಯೋಜನೆ, ಅಲ್ಲಿರಬಹುದಾದ ಖನಿಜಗಳ ಕುರಿತ ಅಧ್ಯಯನ ಮೊದಲ ಚಂದ್ರಯಾನದ ಉದ್ದೇಶವಾಗಿತ್ತು.



ಇಸ್ರೊ ಅಧ್ಯಕ್ಷ ಎಸ್‌.ಸೋಮನಾಥ ಅವರು ತಿರುಪತಿ ಬಳಿಯ ಸೂಳ್ಳೂರುಪೇಟದ ಶ್ರೀಚೆಂಗಲಮ್ಮ ಪರಮೇಶ್ವರಿಣಿ ದೇವಾಲಯದಲ್ಲಿ ಗುರುವಾರ ಪೂಜೆ ಸಲ್ಲಿಸಿ 'ಚಂದ್ರಯಾನ–3' ಕಾರ್ಯಕ್ರಮದ ಯಶಸ್ಸಿಗಾಗಿ ಪ್ರಾರ್ಥಿಸಿದರು –ಪಿಟಿಐ ಚಿತ್ರ

ತಿರುಪತಿ: ಇಸ್ರೊ ಅಧ್ಯಕ್ಷರಿಂದ ಪೂಜೆ

ತಿರುಪತಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಅಧ್ಯಕ್ಷ ಎಸ್.ಸೋಮನಾಥ ಅವರು ಸಮೀಪದ ಸೂಳ್ಳೂರುಪೇಟದ-ಲ್ಲಿರುವ ಶ್ರೀಚೆಂಗಲಮ್ಮ ಪರಮೇಶ್ವರಿಣಿ ದೇವಾಲಯಕ್ಕೆ ಗುರುವಾರ ಭೇಟಿ, 'ಚಂದ್ರಯಾನ–3' ಕಾರ್ಯಕ್ರಮ ಯಶಸ್ಸಿಗಾಗಿ ಪೂಜೆ ಸಲ್ಲಿಸಿದರು.

ಇಸ್ರೊ ವಿಜ್ಞಾನಿಗಳು ಹಾಗೂ ಅಧಿ-ಕಾರಿಗಳನ್ನು ಒಳಗೊಂಡ ಮತ್ತೊಂದು ತಂಡ ಗುರುವಾರ ತಿರುಮಲಕ್ಕೆ ತೆರಳಿ, ವೆಂಕಟೇಶ್ವರ ದೇವರಿಗೆ ಪೂಜೆ ಸಲ್ಲಿಸಿ, ಚಂದ್ರಯಾನ–3 ಕಾರ್ಯಕ್ರಮದ ಯಶಸ್ಸಿಗೆ ಪ್ರಾರ್ಥಿಸಿತು.

ಸಿಯುಇಟಿ–ಯುಜಿ ಪರೀಕ್ಷೆ: 17ರಂದು ಫಲಿತಾಂಶ ಪ್ರಕಟ

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸಲಾಗುವ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಯುಇಟಿ- ಯುಜಿ) ಫಲಿತಾಂಶವನ್ನು ಜುಲೈ 17ಕ್ಕೆ ಪ್ರಕಟಿಸಲಾಗುವುದು ಎಂದು ವಿಶ್ವವಿದ್ಯಾಲಯಗಳ ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಗುರುವಾರ ತಿಳಿಸಿದ್ದಾರೆ.

ಫಲಿತಾಂಶ ಪ್ರಕಟಿಸಿದ ಬಳಿಕ ಸುಮಾರು 200 ವಿಶ್ವವಿದ್ಯಾಲಯಗಳ ಪ್ರವೇಶಾತಿ ಆರಂಭವಾಗಲಿದೆ.

ಜುಲೈ 15ರಂದು ಸಿಯುಇಟಿ–ಯುಜಿ ಫಲಿತಾಂಶ ಪ್ರಕಟಿಸಲಾಗು-ವುದು ಎಂದು ಯುಜಿಸಿ ಈ ಹಿಂದೆ ಘೋಷಿಸಿತ್ತು.

'ನೆಕ್ಸ್ಟ್' ಮುಂದೂಡಿಕೆ

ನವದೆಹಲಿ (ಪಿಟಿಐ): ಅಂತಿಮ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಗಳ (2019ರ ಬ್ಯಾಚ್) ರಾಷ್ಟ್ರೀಯ ನಿರ್ಗಮನ ಪರೀಕ್ಷೆ (ನೆಕ್ಸ್ಟ್) ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ಗುರುವಾರ ಮುಂದೂಡಿದೆ.

ಆದರೆ, ಇದೇ 28ರಂದು ನಿಗದಿಯಾಗಿದ್ದ ಅಣಕು ಪರೀಕ್ಷೆಯನ್ನು ನಡೆಸ-ಲಾಗುತ್ತದೆಯೋ, ಇಲ್ಲವೋ ಎಂಬುದು ಇನ್ನೂ ಖಚಿತವಾಗಿಲ್ಲ.

'ಆರೋಗ್ಯ ಸಚಿವಾಲಯದ ಸಲಹೆ ಮೇರೆಗೆ 'ನೆಕ್ಸ್ಟ್' ಅನ್ನು ಮುಂದಿನ ಆದೇಶದವರೆಗೆ ಮುಂದೂಡಲಾಗಿದೆ' ಎನ್‌ಎಂಸಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ರಕ್ಷಣೆ, ಬಾಂಧವ್ಯ ವೃದ್ಧಿಗೆ ಆದ್ಯತೆ

ಫ್ರಾನ್ಸ್‌ಗೆ ಬಂದಿಳಿದ ಮೋದಿ, ಸ್ವಾಗತ ಕೋರಿದ ಬೋರ್ನ್

ಪ್ಯಾರಿಸ್ (ಪಿಟಿಐ): ಫ್ರಾನ್ಸ್‌ಗೆ ಎರಡು ದಿನದ ಅಧಿಕೃತ ಪ್ರವಾಸಕ್ಕಾಗಿ ಭಾರತದ ಪ್ರಧಾನಿ ನರೇಂದ್ರ ಮೋದಿ ಗುರುವಾರ ಇಲ್ಲಿಗೆ ಆಗಮಿಸಿದರು. ಭೇಟಿ ಅವಧಿಯಲ್ಲಿ ಅಧ್ಯಕ್ಷ ಎಮ್ಯಾನುಯೆಲ್ ಮ್ಯಾಕ್ರನ್ ಅವರೊಂದಿಗೆ ವಿಸ್ತೃತ ವಿಷಯಗಳ ಕುರಿತು ಚರ್ಚಿಸುವರು.

ಮೋದಿ ಅವರು ಫ್ರಾನ್ಸ್‌ನ ರಾಷ್ಟ್ರೀಯ ದಿನದ ಸಮಾರಂಭದ ಮುಖ್ಯ ಅತಿಥಿಯಾಗಿ ಭಾಗವಹಿಸಲಿ-ದ್ದಾರೆ. ರಕ್ಷಣಾ ಕ್ಷೇತ್ರದಲ್ಲಿ ಬಾಂಧವ್ಯ ವಿಸ್ತರಿಸುವುದು ಮುಖಂಡರ ಚರ್ಚೆಯ ಪ್ರಮುಖ ವಿಷಯವಾಗಿರಲಿದೆ ಎಂದು ತಿಳಿದುಬಂದಿದೆ. 'ಫ್ರಾನ್ಸ್‌ಗೆ ಬಂದಿದ್ದೇನೆ. ಭಾರತ ಸಮುದಾಯದವರ ಜೊತೆಗೆ ಭೇಟಿ ಸೇರಿ ಇಂದು ಹಲವು ಕಾರ್ಯ-ಕ್ರಮಗಳಿವೆ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ವಿಮಾನನಿಲ್ದಾಣದಲ್ಲಿ ಪ್ರಧಾನಿಗೆ ಸಾಂಪ್ರದಾಯಿಕ ಸ್ವಾಗತ ನೀಡಿದ್ದು, ಪ್ರಧಾನಿ ಎಲಿಜಬೆತ್ ಬೋರ್ನ್ ಅವರು ಸ್ವಾಗತಿಸಿದರು. ಫ್ರಾನ್ಸ್‌ನ ಗಣ್ಯರು, ಪ್ರಮುಖ ನಾಯಕರು, ಸಿಇಒಗಳನ್ನು ಭೇಟಿಯಾಗುವ ಕಾರ್ಯಕ್ರಮವಿದೆ ಎಂದು ವಿದೇಶಾಂಗ ಸಚಿವಾಲಯ ಟ್ವೀಟ್ ಮಾಡಿದೆ.

ಭಾರತ ಸಮುದಾಯದವರ ಜೊತೆಗೆ ಚರ್ಚಿಸಿದ ಸಂದರ್ಭದಲ್ಲಿ ಹೋಟೆಲ್ ಹೊರಗೆ 'ಭಾರತ್ ಮಾತಾಕಿ ಜೈ' ಘೋಷಣೆಗಳು ಕೇಳಿಬಂದವು.

ಫ್ರಾನ್ಸ್ ಅಧ್ಯಕ್ಷರ ಜೊತೆಗೆ ಹಲವು ಕ್ಷೇತ್ರಗಳ ಕುರಿತಾಗಿ ಚರ್ಚಿಸುವು ದನ್ನು ನಾನು ಎದುರು ನೋಡುತ್ತಿದ್ದೇನೆ. ಇದು, ಉಭಯ ರಾಷ್ಟ್ರಗಳ ನಡುವಿನ ಬಾಂಧವ್ಯವನ್ನು ಮುಂದಿನ 25 ವರ್ಷ-ಗಳವರೆಗೆ ವಿಸ್ತರಿಸಲಿದೆ. ಪ್ರಾದೇಶಿಕ ಮತ್ತು ಜಾಗತಿಕ ವಿಷಯ ಕುರಿತು ನಾವು ಒಟ್ಟಿಗೆ ಕಾರ್ಯನಿರ್ವಹಿಸಬಹುದಾಗಿದೆ ಎಂದು ಪ್ರಧಾನಿ ಫ್ರಾನ್ಸ್‌ಗೆ ನಿರ್ಗಮಿಸುವ ಮೊದಲು ಟ್ವೀಟ್ ಮಾಡಿ ವಿಶ್ವಾಸ ವ್ಯಕ್ತ-ಪಡಿಸಿದ್ದರು.

ಪ್ರಧಾನಿ ಮೋದಿಗೆ ಪ್ಯಾರಿಸ್‌ನಲ್ಲಿ ಸಾಂಪ್ರದಾಯಿಕ ಸ್ವಾಗತ ನೀಡಿದ್ದು, ಪ್ರಧಾನಿ ಎಲಿಜಬೆತ್ ಬೋರ್ನ್ ಅವರು ಬರಮಾಡಿಕೊಂಡರು –ಎಎಫ್‌ಪಿ ಚಿತ್ರ

ನೌಕಾಪಡೆಗೆ 26 ರಫೇಲ್ ಜೆಟ್ ಖರೀದಿಗೆ ಡಿಎಸಿ ಅನುಮೋದನೆ

ನವದೆಹಲಿ (ಪಿಟಿಐ): ನೌಕಾಪಡೆಗೆ ಫ್ರಾನ್ಸ್‌ನಿಂದ 26 ರಫೇಲ್ ಜೆಟ್‌ಗಳನ್ನು ಖರೀದಿಸುವ ಪ್ರಸ್ತಾವಕ್ಕೆ ರಕ್ಷಣಾ ಸಚಿವಾಲಯ ಗುರುವಾರ ಅನುಮೋದನೆ ನೀಡಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪ್ರಧಾನಿ ಮೋದಿ ಪ್ಯಾರಿಸ್‌ಗೆ ಪ್ರವಾಸ ಆರಂಭಿಸಿದ ದಿನವೇ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಖರೀದಿ ಮಂಡಳಿ (ಡಿಎಸಿ) ಈ ಕುರಿತ ಪ್ರಸ್ತಾವಕ್ಕೆ ಅನುಮೋದನೆ ನೀಡಿದೆ.

ಇದೇ ವೇಳೆ ಡಿಎಸಿ, ಭಾರತದಲ್ಲಿ ಇನ್ನೂ 3 ಸ್ಕಾರ್ಪೀನ್ ಜಲಾಂತರ್ಗಾಮಿ ನೌಕೆಗಳ ನಿರ್ಮಾಣದ ಪ್ರಸ್ತಾ ವನೆಯನ್ನೂ ಅನುಮೋದಿಸಿದೆ.

ಪ್ರಧಾನಿ ಮೋದಿ ಮತ್ತು ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯಲ್ ಮ್ಯಾಕ್ರನ್ ಶುಕ್ರವಾರ ಮಾತುಕತೆ ನಡೆಸಿದ ಬಳಿಕ ರಕ್ಷಣಾ ಯೋಜನೆಗಳನ್ನು ಘೋಷಿಸುವ ನಿರೀಕ್ಷೆಯಿದೆ.

ಖಾತೆ ಬಿಕ್ಕಟ್ಟು: ಶಾ ಜೊತೆ ಅಜಿತ್ ಚರ್ಚೆ

ನವದೆಹಲಿ (ಪಿಟಿಐ): ಮಹಾರಾಷ್ಟ್ರದಲ್ಲಿ ತಲೆದೋರಿರುವ ಖಾತೆ ಹಂಚಿಕೆ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಎನ್‌ಸಿಪಿ ನಾಯಕರಾದ ಅಜಿತ್ ಪವಾರ್ ಮತ್ತು ಪ್ರಫುಲ್ ಪಟೇಲ್ ಅವರು, ಬುಧವಾರ ರಾತ್ರಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಹಿರಿಯ ನಾಯಕರನ್ನು ಭೇಟಿ ಮಾಡಿ ಚರ್ಚಿಸಿದರು.

ಸುಭಾಷಿತ
ನಾಲಿಗೆಯು ಹರಿತವಾದ ಚಾಕು ಇದ್ದಂತೆ... ರಕ್ತವನ್ನು ಹರಿಸದೇ ಕೊಲ್ಲಬಲ್ಲದು.
–ಗೌತಮ ಬುದ್ಧ

ದತ್ತಾಂಶ ಸಂರಕ್ಷಣಾ ಮಸೂದೆ ಲೋಪ ಸರಿಪಡಿಸಿಕೊಳ್ಳಬೇಕಿದೆ

ದತ್ತಾಂಶ ಸಂರಕ್ಷಣೆಗೆ ಸಂಬಂಧಿಸಿದ ಕರಡು ಮಸೂದೆಗೆ ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ. ಇದರಿಂದಾಗಿ, ಆರು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಮಸೂದೆಯನ್ನು ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಮಂಡಿಸಬಹುದಾಗಿದೆ. ವೈಯಕ್ತಿಕ, ಸಾಮಾಜಿಕ, ಆರ್ಥಿಕ ಸೇರಿದಂತೆ ಬದುಕಿನ ಎಲ್ಲ ಆಯಾಮಗಳಲ್ಲಿಯೂ ದತ್ತಾಂಶವು ಮಹತ್ವದ ಪಾತ್ರ ವಹಿಸುತ್ತಿರುವ ಇಂದಿನ ದಿನಗಳಲ್ಲಿ ಬಲಿಷ್ಠವಾದ ದತ್ತಾಂಶ ಸಂರಕ್ಷಣಾ ವ್ಯವಸ್ಥೆಯೊಂದು ಜಾರಿಯಲ್ಲಿ ಇರುವುದು ಅತ್ಯಗತ್ಯ. ಸರ್ಕಾರವೂ ಸೇರಿದಂತೆ ಎಲ್ಲ ಸಂಸ್ಥೆಗಳು ವೈಯಕ್ತಿಕ ದತ್ತಾಂಶ ಬಳಸುವುದನ್ನು ನಿಯಂತ್ರಿಸಲು ಕಾನೂನಿನ ಅಗತ್ಯ ಇದೆ. ದತ್ತಾಂಶ ಸಂಗ್ರಹಿಸುವ ಸಂಸ್ಥೆಗಳು ಅದನ್ನು ಯಾವ ರೀತಿ ನಿರ್ವಹಿಸಬೇಕು ಎಂಬುದಕ್ಕೆ ಪ್ರಕ್ರಿಯೆಗಳನ್ನು ರೂಪಿಸಬೇಕು. ಸಂಗ್ರಹ ಮತ್ತು ಬಳಕೆ ಯಾವ ರೀತಿ ಇರಬೇಕು ಎಂಬುದರಲ್ಲಿ ಸ್ಪಷ್ಟತೆ ಇರಬೇಕು. ದತ್ತಾಂಶ ಸಂಗ್ರಹಿಸಲಾದ ವ್ಯಕ್ತಿಗಳ ಹಕ್ಕುಗಳ ರಕ್ಷಣೆಗೂ ಕ್ರಮ ಬೇಕು. ಉದ್ದೇಶಿತ ಮಸೂದೆಯ ಪೂರ್ಣ ವಿವರಗಳು ಇನ್ನೂ ಬಹಿರಂಗ ಆಗಿಲ್ಲ. ಆದರೆ, ಈಗ ಸಿಕ್ಕ ಮಾಹಿತಿಯ ಆಧಾರದಲ್ಲಿ ಹೇಳುವುದಾದರೆ, ಕಳೆದ ವರ್ಷ ಸಿದ್ಧಪಡಿಸಲಾದ ಮಸೂದೆಯಲ್ಲಿ ಇದ್ದ ಕೆಲವು ಗಂಭೀರ ಲೋಪಗಳನ್ನು ಸರಿಪಡಿಸಲಾಗಿಲ್ಲ.

ದತ್ತಾಂಶ ರಕ್ಷಣೆಯ ಯಾವುದೇ ಕಾಯ್ದೆಯು ಖಾಸಗಿತನದ ರಕ್ಷಣೆಯ ಖಾತರಿ ಕೊಡಬೇಕು. ಈ ವಿಚಾರದಲ್ಲಿ ಯಾವುದೇ ರಾಜಿಗೆ ಅವಕಾಶ ಇರಬಾರದು

ಪೌರರ ದತ್ತಾಂಶ ಬಳಕೆಯಲ್ಲಿ ಸರ್ಕಾರ ಮತ್ತು ಅದರ ಅಧೀನ ಸಂಸ್ಥೆಗಳಿಗೆ ನೀಡಲಾಗಿರುವ ವಿನಾಯಿತಿಗಳು ಮತ್ತು ರಕ್ಷಣೆಯು ಬಹಳ ಕಳವಳಕಾರಿ ವಿಚಾರ. ರಾಷ್ಟ್ರೀಯ ಭದ್ರತೆ, ವಿದೇಶಗಳ ಜೊತೆಗಿನ ಸಂಬಂಧ ಮತ್ತು ಸಾರ್ವಜನಿಕ ಸುವ್ಯವಸ್ಥೆಯ ಹೆಸರಿನಲ್ಲಿ ತನ್ನ ಯಾವುದೇ ಸಂಸ್ಥೆಗೆ ದತ್ತಾಂಶ ರಕ್ಷಣೆಯ ನಿಯಮಗಳಿಂದ ವಿನಾಯಿತಿ ನೀಡಲು ಸರ್ಕಾರಕ್ಕೆ ಅಧಿಕಾರ ಇದೆ. ಇಂತಹ ವ್ಯಾಪಕ ಅಧಿಕಾರವನ್ನು ಸರ್ಕಾರವು ತನಗೆ ತಾನೇ ಕೊಟ್ಟುಕೊಂಡರೆ, ಮುಂದೆ ಅದು ದುರ್ಬಳಕೆ ಆಗುವ ಅಪಾಯ ಇದ್ದೇ ಇದೆ. ಸರ್ಕಾರವು ಬಹಳಷ್ಟು ದತ್ತಾಂಶ ಸಂಗ್ರಹಿಸಿ ತನ್ನೊಂದಿಗೆ ಇರಿಸಿಕೊಳ್ಳುತ್ತದೆ. ಹಾಗಾಗಿ, ಸರ್ಕಾರಕ್ಕೆ ಇಂತಹ ವ್ಯಾಪಕ ಮತ್ತು ನಿರಂಕುಶ ಅಧಿಕಾರ ಇರಬಾರದು. ದತ್ತಾಂಶ ಸಂರಕ್ಷಣೆ ಮಂಡಳಿಗೆ ಸದಸ್ಯರನ್ನು ನೇಮಿಸುವಲ್ಲಿ ಸರ್ಕಾರಕ್ಕೆ ವಿವೇಚನಾಧಿಕಾರವನ್ನೂ ನೀಡಲಾಗಿದೆ. ಮಸೂದೆಯಲ್ಲಿ ಇರುವ ಪ್ರಕಾರ, ಮಂಡಳಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯನ್ನು ನೇಮಿಸುವ ಅಧಿಕಾರವೂ ಸರ್ಕಾರದ್ದೇ ಆಗಿದೆ. ದತ್ತಾಂಶ ಸಂರಕ್ಷಣೆಗೆ ಸಂಬಂಧಿಸಿ ಪೌರರ ಹಕ್ಕುಗಳನ್ನು ಕಾಪಾಡಲು ಗಟ್ಟಿಯಾದ ಮತ್ತು ಸ್ವತಂತ್ರವಾದ ನಿಯಂತ್ರಣ ಪ್ರಾಧಿಕಾರದ ಅಗತ್ಯ ಇದೆ. ಕಾಯ್ದೆಯಲ್ಲಿರುವ ಅಂಶಗಳನ್ನು ಪಾಲಿಸಲಾಗುತ್ತಿದೆಯೇ ಎಂಬುದರ ಮೇಲೆ ನಿಗಾ ಇರಿಸುವುದರ ಜೊತೆಗೆ ಜನರ ದೂರುಗಳನ್ನೂ ಈ ಪ್ರಾಧಿಕಾರವು ಪರಿಹರಿಸಬೇಕು. ಇದು ಸರ್ಕಾರದ ಅಧೀನ ಸಂಸ್ಥೆಯಂತೆ ಇರಬಾರದು.

ಈ ಮಸೂದೆಯು ಅಂಗೀಕಾರಗೊಂಡು ಕಾಯ್ದೆಯಾಗಿ ಜಾರಿಗೆ ಬಂದರೆ ಮಾಹಿತಿ ಹಕ್ಕು ಕಾಯ್ದೆಯು ದುರ್ಬಲಗೊಳ್ಳಬಹುದು. ಏಕೆಂದರೆ, ಸರ್ಕಾರದಲ್ಲಿ ಇರುವವರ ವೈಯಕ್ತಿಕ ದತ್ತಾಂಶಕ್ಕೆ ಈ ಕಾಯ್ದೆಯ ಅಡಿಯಲ್ಲಿ ರಕ್ಷಣೆ ದೊರೆಯಬಹುದು. ಇಂತಹ ದತ್ತಾಂಶವು ಸಾರ್ವಜನಿಕ ಹಿತದ ದೃಷ್ಟಿಯಿಂದ ಮಹತ್ವದ್ದೇ ಆದರೂ ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆಯಲು ಸಾಧ್ಯವಾಗದೇ ಹೋಗಬಹುದು. ಪರಿಭಾವಿತ ಸಮ್ಮತಿ ಅವಕಾಶದಿಂದಾಗಿ ದತ್ತಾಂಶ ಬಳಕೆಗೆ ಪೌರರ ಸಮ್ಮತಿ ಇದೆ ಎಂದು ಸರ್ಕಾರ ಭಾವಿಸಬಹುದು ಮತ್ತು ಇದು ದುರ್ಬಳಕೆಗೆ ಅವಕಾಶ ಮಾಡಿಕೊಡಬಹುದು. ಇತರ ಕೆಲವು ಕಳವಳಗಳೂ ಇವೆ. ದತ್ತಾಂಶ ರಕ್ಷಣೆಯ ಯಾವುದೇ ಕಾಯ್ದೆಯು ಖಾಸಗಿತನದ ರಕ್ಷಣೆಯ ಖಾತರಿ ಕೊಡಬೇಕು. ಏಕೆಂದರೆ, ಇದು ಮೂಲಭೂತ ಹಕ್ಕು. ಈ ವಿಚಾರದಲ್ಲಿ ಯಾವುದೇ ರಾಜಿಗೆ ಅವಕಾಶ ಇರಬಾರದು. 2018ರಲ್ಲಿ ಈ ಮಸೂದೆಯ ಮೊದಲ ಕರಡು ಸಿದ್ಧಪಡಿಸಿದ್ದ ನ್ಯಾಯಮೂರ್ತಿ ಬಿ.ಎನ್. ಶ್ರೀಕೃಷ್ಣ ಅವರು ಈಗಿನ ಕರಡು ಮಸೂದೆಯು ದೋಷಪೂರಿತವಾಗಿದೆ ಎಂದಿದ್ದಾರೆ. ಮಹತ್ವದ ವಿಚಾರಗಳಲ್ಲಿ ಈ ಹಿಂದಿನ ಮಸೂದೆಗಿಂತಲೂ ಕೆಟ್ಟದಾಗಿದೆ ಎಂದು ಹೇಳಿದ್ದಾರೆ. ಈ ಕಳವಳಗಳನ್ನು ಸಂಸತ್ತು ಪರಿಹರಿಸಬೇಕಿದೆ.

ದಿನದ ಟ್ವೀಟ್

ಎಚ್ಚರಿಕೆಯ ಗಂಟೆಯಾಗಲಿ

ಭಾರತ ಮತ್ತು ಇತರ ಹಲವು ದೇಶಗಳಲ್ಲಿ ಭಾರಿ ಮಳೆಯಿಂದ ಉಂಟಾಗಿರುವ ಪ್ರವಾಹವು ಹವಾಮಾನ ಬದಲಾವಣೆ ಬಗ್ಗೆ ಹಾಗೂ ಮನುಷ್ಯನ ಚಟುವಟಿಕೆಗಳು ತಂದೊಡ್ಡುತ್ತಿರುವ ಸಮಸ್ಯೆಗಳ ಬಗ್ಗೆ ಜನರಿಗೆ ಎಚ್ಚರಿಕೆಯ ಗಂಟೆಯಾಗಬೇಕು. ನದಿಗಳ ಹರಿವಿಗೆ ಜಾಗವಿರಲಿ. ಇಲ್ಲವಾದರೆ, ಅಂತಿಮವಾಗಿ ಅವು ತಮ್ಮ ಜಾಗವನ್ನು ಮತ್ತೆ ಪಡೆದುಕೊಳ್ಳುತ್ತವೆ. ರಾಜಕೀಯ ಕೆಸರೆರಚಾಟದಿಂದ ಪ್ರಯೋಜನವಿಲ್ಲ; ಕ್ರಮಗಳು ಮಾತ್ರ ನೆರವಿಗೆ ಬರುತ್ತವೆ.

ಮಯಾಂಕ್ ಅಗರವಾಲ್, ಪತ್ರಕರ್ತ

ಕಿಡಿನುಡಿ

ಯಮುನಾ ನದಿಯ ನೀರಿನ ಮಟ್ಟ ಏರುತ್ತಿರುವುದರಿಂದ ಜನರು ಪ್ರಾಣ ಉಳಿಸಿಕೊಳ್ಳಲು ಪರದಾಡುತ್ತಿದ್ದಾರೆ... ಉತ್ತರ ಭಾರತವು ಪ್ರವಾಹದಿಂದ ತತ್ತರಿಸುತ್ತಿದೆ. ಈ ನಡುವೆ, ಸಂಸದೀಯ ಸಮಿತಿಯು 'ಅರಣ್ಯ' ಎಂಬ ಪದದ ವ್ಯಾಖ್ಯಾನವನ್ನು ಬದಲಿಸುವುದಕ್ಕೆ ಇಂದು ಸದ್ದಿಲ್ಲದೇ ಅನುಮೋದನೆ ನೀಡಿದೆ. ಹೀಗಾಗಿ, ನೀವು ಹೆಚ್ಚು ಕಾಡುಗಳನ್ನು ಕಡಿಯಬಹುದು...

ಬರ್ಖಾ ದತ್, ಪರಿಸರ ಪತ್ರಕರ್ತೆ

25 ವರ್ಷಗಳ ಹಿಂದೆ

ಮಂಗಳವಾರ, 14-7-1998

• ಮಹಿಳಾ ಮಸೂದೆ ಪ್ರತಿ ಹರಿದು ಮಂಡನೆಗೆ ತಡೆ; ತೀವ್ರ ಪ್ರತಿಭಟನೆ

ನವದೆಹಲಿ, ಜುಲೈ 13– ವಿವಾದಿತ ಮಹಿಳಾ ಮೀಸಲಾತಿ ಮಸೂದೆಯ ಪ್ರತಿಯನ್ನು ಕಸಿದುಕೊಂಡು ಹರಿದುಹಾಕುವ ಮೂಲಕ ಮಸೂದೆಯು ಮಂಡನೆಯಾಗದಂತೆ ತಡೆದ ಅಪರೂಪದ ಘಟನೆ ಇಂದು ಲೋಕಸಭೆಯಲ್ಲಿ ನಡೆಯಿತು.

ತೀವ್ರ ವಿರೋಧ ಮತ್ತು ಪ್ರತಿಭಟನೆಯ ಮಧ್ಯೆ ವಿವಾದಿತ ಮಹಿಳಾ ಮೀಸಲಾತಿ ಮಸೂದೆಯನ್ನು ಮಂಡಿಸುವ ಯತ್ನ ನಡೆಯಿತು. ಆಗ ಪ್ರತಿಪಕ್ಷಗಳಲ್ಲಿನ ಹಿಂದುಳಿದ ವರ್ಗಗಳ, ವಿಶೇಷವಾಗಿ ಬಿಹಾರ ಮತ್ತು ಉತ್ತರಪ್ರದೇಶದ ಸದಸ್ಯರು, ಸಭಾಧ್ಯಕ್ಷ ಮತ್ತು ಕಾನೂನು ಸಚಿವರಿಂದ ಮಸೂದೆಯ ಪ್ರತಿ ಕಸಿದುಕೊಂಡು ಹರಿದುಹಾಕಿದರು.

ಮಸೂದೆ ಮಂಡನೆ ವಿರೋಧಿಸಿ ಬೆಳಿಗ್ಗೆಯಿಂದ ಸಂಜೆವರೆಗೆ ಐದು ಬಾರಿ ಸದನದ ಕಲಾಪವನ್ನು ಮುಂದಕ್ಕೆ ಹಾಕಬೇಕಾಯಿತು. ಸಂಜೆ ಆಳುವ ಬಿಜೆಪಿ ಸದಸ್ಯರು ಮತ್ತು ಕುಪಿತರಾದ ಹಿಂದುಳಿದ ವರ್ಗಗಳ ಕೆಲವು ಸದಸ್ಯರ ಮಧ್ಯೆ ಕೈ ಕೈ ಮಿಲಾಯಿಸುವಷ್ಟರ ಮಟ್ಟಿಗೆ ಪರಿಸ್ಥಿತಿಯು ವಿಕೋಪಕ್ಕೆ ಹೋಯಿತು.

• ಸಚಿವ, ಶಾಸಕರ ಆಸ್ತಿ ಘೋಷಣೆಗೆ ಕೋರ್ಟ್ ಗಡುವು

ಬೆಂಗಳೂರು, ಜುಲೈ 13– ಸಚಿವರು ಮತ್ತು ಶಾಸಕರು ತಮ್ಮ ಆಸ್ತಿ ವಿವರವನ್ನು ಪ್ರತಿವರ್ಷ ಜೂನ್ 30ರೊಳಗೆ ಕಡ್ಡಾಯವಾಗಿ ಘೋಷಿಸಿಕೊಳ್ಳಬೇಕೆಂದು ಹೈಕೋರ್ಟ್ ಆದೇಶಿಸಿತು.

ಘೋಷಿಸಿಕೊಳ್ಳದವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸುವ ಮೂಲಕ ಕ್ರಮಕೈಗೊಳ್ಳಬೇಕೆಂದು ಲೋಕಾಯುಕ್ತಕ್ಕೆ ಸೂಚಿಸಿತು.

ಆಸ್ತಿ ಘೋಷಿಸಿಕೊಳ್ಳದ ಸಚಿವರು ಮತ್ತು ಶಾಸಕರನ್ನು ಸದಸ್ಯತ್ವದಿಂದ ಅನರ್ಹಗೊಳಿಸಬೇಕೆಂದು ಕೋರಿ ಹೊಟ್ಟೆ ಪಕ್ಷದ ರಂಗಸ್ವಾಮಿ ಸಾರ್ವಜನಿಕ ಹಿತಾಸಕ್ತಿಯ ರಿಟ್ ಅರ್ಜಿ ಸಲ್ಲಿಸಿದ್ದರು.

50 ವರ್ಷಗಳ ಹಿಂದೆ

ಶನಿವಾರ, 14-7-1973

• ವಿಜಯನಗರ ಉಕ್ಕು ಕಾರ್ಖಾನೆ ಕೈಬಿಟ್ಟಿಲ್ಲ: ಯೋಜನಾ ಆಯೋಗ

ನವದೆಹಲಿ, ಜುಲೈ 13– ಐದನೆಯ ಯೋಜನೆಯಲ್ಲಿ ವಿಜಯನಗರ ಉಕ್ಕು ಕಾರ್ಖಾನೆ ಸ್ಥಾಪನೆಯನ್ನು ಯೋಜನಾ ಆಯೋಗ ಕೈಬಿಟ್ಟಿಲ್ಲವೆಂದು ಗೊತ್ತಾಗಿದೆ.

ಬೊಕಾರೊ, ಭಿಲಾಯ್ ಕಾರ್ಖಾನೆಗಳ ವಿಸ್ತರಣೆ ಹಾಗೂ ಹೊಸಪೇಟೆ, ವಿಶಾಖಪಟ್ಟಣ, ಸೇಲಂಗಳಲ್ಲಿ ಹೊಸ ಕಾರ್ಖಾನೆಗಳ ಸ್ಥಾಪನೆಗಳನ್ನೊಳಗೊಂಡಂತೆ ಉಕ್ಕು ಖಾತೆಯ ಎಲ್ಲ ಕಾರ್ಯಕ್ರಮಗಳಿಗೂ ಯೋಜನಾ ಆಯೋಗ ಸಮ್ಮತಿಸಿದೆಯೆಂದು ಆಯೋಗದ ಮೂಲಗಳಿಂದ ತಿಳಿದುಬಂದಿದೆ.

ಉಕ್ಕು ಖಾತೆಯ 2,800 ಕೋಟಿ ರೂಪಾಯಿಗಳ ಕಾರ್ಯಕ್ರಮಗಳಿಗೆ ಅಂಗೀಕಾರ ನೀಡಲಾಗಿದೆ. ಆದರೆ, ಐದನೆ ಯೋಜನೆಯ ಕಾರ್ಯಕ್ರಮಗಳನ್ನು ಅಂತಿಮಗೊಳಿಸುವ ಮುನ್ನ ಕೆಲವು ಅಂಶಗಳು ಇತ್ಯರ್ಥವಾಗಬೇಕಿದೆಯೆಂದು ಉಕ್ಕು ಖಾತೆ ಮೂಲಗಳು ಹೇಳಿವೆ.

• ಪ್ರಧಾನಿ ಇಚ್ಛೆಯಂತೆ ಸೇಠಿ ವಿರುದ್ಧ ಬಲ ಪರೀಕ್ಷೆ ಮುಂದಕ್ಕೆ

ಭೋಪಾಲ್, ಜುಲೈ 13– ಪ್ರಧಾನಿ ಇಂದಿರಾ ಗಾಂಧಿ ಅವರ ಇಚ್ಛೆ ಪ್ರಕಾರ ಮಧ್ಯಪ್ರದೇಶ ಮುಖ್ಯಮಂತ್ರಿ ಪಿ.ಸಿ. ಸೇಠಿ ಅವರ ವಿರುದ್ಧ ಬಲಾಬಲ ಪ್ರದರ್ಶನ ಮಾಡುವ ಯತ್ನವನ್ನು ಭಿನ್ನಮತೀಯ ಕಾಂಗ್ರೆಸಿಗರು ಮುಂದೆ ಹಾಕಿದ್ದಾರೆ.

ಆದರೆ, ಸೇಠಿ ಅವರ ನಾಯಕತ್ವದ ವಿರುದ್ಧ ತಮಗೆ ಇರುವ ಅವಿಶ್ವಾಸ ವ್ಯಕ್ತಪಡಿಸಲು ತಾವು ಆರಿಸಿಕೊಂಡಿರುವ ಪ್ರಜಾಸತ್ತಾತ್ಮಕ ಮಾರ್ಗವನ್ನು ತ್ಯಜಿಸಲು ಸಿದ್ಧರಿಲ್ಲವೆಂದು ಮಾಜಿ ಸಚಿವ ಗೌತಮ ಶರ್ಮಾ ಅವರು ಇಂದು ಸುದ್ದಿಗಾರರಿಗೆ ತಿಳಿಸಿದರು.

ಇಸ್ರೊದ ಅಂತರ್‌ಗ್ರಹ ಯೋಜನೆಗಳಿಗೆ ಸತ್ವ, ನೆಲೆ ಒದಗಿಸುವ ಉದ್ದೇಶ ಈ ಯೋಜನೆಯದು

ಚಂದ್ರಯಾನ– 3 ಏಕೆ ಮುಖ್ಯ?

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಭಾರತೀಯ ಬಾಹ್ಯಾಕಾಶ ಸಂಸ್ಥೆ ಇಸ್ರೊದ ಮಹತ್ವಾಕಾಂಕ್ಷಿ ಯೋಜನೆ ಚಂದ್ರಯಾನ– 3ಕ್ಕೆ ಕ್ಷಣಗಣನೆ ಶುರುವಾಗಿದೆ. ಇಂದು (ಜುಲೈ 14) ಮಧ್ಯಾಹ್ನ 2.35ಕ್ಕೆ ಶ್ರೀಹರಿಕೋಟಾದ ಸತೀಶ್ ಧವನ್ ಉಡ್ಡಯನ ನೆಲೆಯಿಂದ ದೇಸಿ ಪ್ರೊಪಲ್ಶನ್ ಮಾಡ್ಯೂಲ್ (ಪಿಎಂ), ಲ್ಯಾಂಡರ್ ಮಾಡ್ಯೂಲ್ (ಎಲ್‌ಎಂ) ಮತ್ತು ರೋವರ್‌ಗಳನ್ನು (ಚಂದ್ರನೆಲದ ಮೇಲೆ ಸಂಚರಿಸುವ ರೊಬಾಟು ವಾಹನ) ಹೊತ್ತ ನಮ್ಮ ಅತ್ಯಂತ ಭಾರದ, ದೊಡ್ಡದಾದ ಶಕ್ತಿಶಾಲಿ ರಾಕೆಟ್ ಜಿಎಸ್‌ಎಲ್‌ವಿ ಮಾರ್ಕ್ III (ಜಿಯೊಸಿಂಕ್ರೊನಸ್ ಸ್ಯಾಟಲೈಟ್ ಲಾಂಚ್ ವೆಹಿಕಲ್ 3) ಚಂದ್ರನ ದಕ್ಷಿಣ ಧ್ರುವಕ್ಕೆ ಪಯಣಿಸಲಿದೆ. ಆಗಸ್ಟ್ 23ರಂದು ಚಂದ್ರನ ನೆಲದ ಮೇಲೆ ಇಳಿದು, ಸೂರ್ಯನ ಬೆಳಕು ದೊರಕುವ 14 ದಿನಗಳ ಕಾಲ ಪ್ರಯೋಗ ಕೈಗೊಳ್ಳಲಿದೆ.

ಜಗತ್ತಿನ ಎಲ್ಲ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಗಳು, ಸಂಶೋಧಕರು ಮತ್ತು ಖಗೋಳ ಆಸಕ್ತಿ ಇರುವ ಜನಸಾಮಾನ್ಯರಿಗೆ ಇದು ಅತ್ಯಂತ ಮಹತ್ವದ ಘಟನೆಯಾಗಲಿದೆ. ಅಂದುಕೊಂಡಂತೆ ನಡೆದರೆ ಇದುವರೆಗೂ ಯಾವ ದೇಶವೂ ಸಾಧಿಸದ ಸಾಧನೆ ನಮ್ಮ ದೇಶದ್ದಾಗಲಿದೆ.

ನಾಲ್ಕು ವರ್ಷಗಳ ಹಿಂದೆ ಕೈಗೊಂಡ ಚಂದ್ರಯಾನ–2 ಯೋಜನೆ ಕೂದಲೆಳೆಯಲ್ಲಿ ಅಪಯಶಸ್ಸು ಕಂಡಿತ್ತು. ಚಂದ್ರನ ದಕ್ಷಿಣ ಧ್ರುವದಲ್ಲಿ ವ್ಯೋಮ ನೌಕೆಯನ್ನಿಳಿಸಿದ ಪ್ರಥಮ ದೇಶ ಭಾರತ ಎಂಬುದು ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತಿತ್ತು. ಸದಾ ನಮ್ಮಿಂದ ಮರೆಯಾಗಿಯೇ ಇರುವ ಚಂದ್ರನ ದಕ್ಷಿಣ ಭಾಗದ ನೆಲದ ಮೇಲೆ ಮೃದುವಾಗಿ ಪ್ರಯೋಗ ನೌಕೆಯನ್ನಿಳಿಸುವ ಮೊದಲ ಪ್ರಯತ್ನ ಅಂದು ಕೈಗೂಡಿರಲಿಲ್ಲ. ಭಾರತೀಯ ಬಾಹ್ಯಾಕಾಶ ವಿಜ್ಞಾನಿಗಳ ಅಪರೂಪದ ಪ್ರಯತ್ನ ಸಫಲವಾಗಲಿ ಎಂದು ಬಯಸಿದ್ದ ಕೋಟ್ಯಂತರ ಅಭಿಮಾನಿಗಳಿಗೆ ದೊಡ್ಡ ನಿರಾಸೆಯಾಗಿತ್ತು. ವೈಫಲ್ಯದ ನೆನಪು ಹಸಿಯಾಗಿರುವಾಗಲೇ ಇಸ್ರೊ ಮತ್ತೊಂದು ಚಂದ್ರಯಾನಕ್ಕೆ ಸಜ್ಜುಗೊಂಡಿದೆ.

ಅಲ್ಲಿನ 'ಚಂದ್ರಹಿಮ'ದಲ್ಲಿ ಅಪಾರ ನೀರಿದೆ ಎಂಬ ನಿರೀಕ್ಷೆ ವಿಶ್ವ ವಿಜ್ಞಾನಿಗಳದ್ದು. ಅಲ್ಲದೆ ಅಲ್ಲಿರುವ ದೈತ್ಯ ಕುಳಿಗಳಲ್ಲಿ ಸೌರವ್ಯೂಹದ ಉಗಮದ ಮಾಹಿತಿ ಸಿಗಬಹುದೆಂಬ ಆಸೆ ಹೊತ್ತು ಅಲ್ಲಿಗೆ ಪಯಣ ಕೈಗೊಳ್ಳುತ್ತಿರುವ ಭಾರತದ ಎರಡನೆಯ ಪ್ರಯತ್ನವಿದು. ಅಮೆರಿಕ ತನ್ನ ಆರ್ಟೆಮಿಸ್– 3 ಯೋಜನೆಯಲ್ಲಿ ಮನುಷ್ಯನನ್ನೇ ಅಲ್ಲಿಗೆ ಕಳುಹಿಸುವ ನೀಲನಕ್ಷೆ ತಯಾರು ಮಾಡಿಕೊಂಡಿದೆ.

ಇದುವರೆಗೆ ಚಂದ್ರನ ಅಧ್ಯಯನಕ್ಕೆ ವಿಶೇಷವಾಗಿ ನೆರವಾಗಿರುವ ಅಮೆರಿಕದ ಅಪೊಲೊ, ಚೀನಾದ ಚಾಂಗಿ ಮತ್ತು ಇತರ ದೇಶಗಳ ಪ್ರಯತ್ನಗಳು ಚಂದ್ರಗ್ರಹದ ಮಧ್ಯರೇಖೆಯ ಬಳಿಯಿರುವ ವಾತಾವರಣದ ಬಗ್ಗೆ ರಾಶಿ ಮಾಹಿತಿ ಹೊತ್ತು ತಂದಿವೆಯಾದರೂ ದಕ್ಷಿಣ ಭಾಗದ ಅಧ್ಯಯನ ನಡೆದೇ ಇಲ್ಲ. ಈಗ ಭಾರತ ಕೈಗೊಂಡಿರುವ ಚಂದ್ರಯಾನ– 3 ಯೋಜನೆಯಿಂದ ಚಂದ್ರಗ್ರಹದಲ್ಲಿನ ನಮಗೆ ಕಾಣಿಸದ ಭಾಗದ ಕುರಿತು ವಿಶೇಷ ಮಾಹಿತಿ ದೊರಕಲಿದೆ ಎಂದಿರುವ ಕ್ಯಾನ್‌ಬೆರಾ ಯೂನಿವರ್ಸಿಟಿಯ ಜಿಯೊಕೆಮಿಸ್ಟ್ ಮಾರ್ಕ್ ನಾರ್ಮನ್, 'ನಾವೆಲ್ಲ ಚಂದ್ರಯಾನ– 3 ಹೊತ್ತು ತರುವ ಮಾಹಿತಿಯ ಅಧ್ಯಯನಕ್ಕಾಗಿ ಕಾಯುತ್ತಿದ್ದೇವೆ' ಎಂದು ಹೇಳಿದ್ದಾರೆ.

ಚಂದ್ರಯಾನ– 3 ಮೂರು ಮುಖ್ಯ ಉದ್ದೇಶಗಳನ್ನು ಸಾಧಿಸುವ ತವಕದಲ್ಲಿದೆ. ಚಂದ್ರನ ದಕ್ಷಿಣ ಧ್ರುವದ ಮೇಲೆ ಲ್ಯಾಂಡರ್ನ್ ಅನ್ನು ಮೃದುವಾಗಿ ಯಶಸ್ವಿಯಾಗಿ ಇಳಿಸುವುದು, ಲ್ಯಾಂಡರ್ನ್‌ನಿಂದ ರೋವರ್ ಅನ್ನು ರ್‍ಯಾಂಪ್ ಬಳಸಿ ಚಂದ್ರನ ನೆಲಕ್ಕಿಳಿಸಿ ಓಡಾಡಿಸುವುದು ಮತ್ತು ಸಂಗ್ರಹಿಸಿದ ಮಾದರಿಗಳನ್ನು ಅಲ್ಲಿಯೇ ಪ್ರಯೋಗಕ್ಕೆ ಒಳಪಡಿಸುವುದು.

ಚಂದ್ರಯಾನ– 2ರ ಮುಂದುವರಿದ ಭಾಗವಾಗಿರುವ ಈ ಯೋಜನೆಯಲ್ಲಿ ಹಲವು ಬದಲಾವಣೆಗಳಿವೆ. ಹಿಂದಿನ ಸಲ ನಾವು ಹಾರಿಸಿದ ನೌಕೆಯು ಚಂದ್ರನನ್ನು ದೀರ್ಘ ವೃತ್ತಾಕಾರದಲ್ಲಿ ಸುತ್ತುತ್ತಿತ್ತು. ಈ ನೌಕೆಯು ಚಂದ್ರನ ಗುರುತ್ವಾಕರ್ಷಣೆಗೆ ಒಳಗಾದ ನಂತರ ನೆಲದಿಂದ ನೂರು ಕಿ.ಮೀ. ದೂರದ ವೃತ್ತಾಕಾರದ ಕಕ್ಷೆಯಲ್ಲಿ ಸುತ್ತಿ ದಕ್ಷಿಣ ಧ್ರುವಕ್ಕೆ ಇಳಿಯುತ್ತದೆ. ಚಂದ್ರಯಾನ– 2ರಲ್ಲಿ ಆರ್ಬಿಟರ್ (ಕಕ್ಷಾಕೋಶ), ಲ್ಯಾಂಡರ್ (ಇಳಿಯುವ ಕೋಶ) ಮತ್ತು ರೋವರ್ (ಚಲಿಸುವ ರೊಬಾಟು) ಎಂಬ ಮೂರು ಭಾಗಗಳಿದ್ದವು. ಪ್ರಸಕ್ತ ಯೋಜನೆಯಲ್ಲಿ ಆರ್ಬಿಟರ್ ಇರುವುದಿಲ್ಲ. ಲ್ಯಾಂಡರ್ ಮತ್ತು ರೋವರ್‌ಗಳು ನೇರವಾಗಿ ಚಂದ್ರನ ದಕ್ಷಿಣ ಭಾಗಕ್ಕೆ ತೆರಳಿ ಕೆಲಸ ಶುರುಮಾಡುತ್ತವೆ. ಚಂದ್ರಯಾನ– 2ರಲ್ಲಿ ಕಳಿಸಲಾಗಿದ್ದ ಆರ್ಬಿಟರ್ ಈಗಲೂ ಚಂದ್ರನ ಸುತ್ತ ಸುತ್ತುತ್ತಿದೆ.

2008ರಲ್ಲಿ ಕೈಗೊಂಡ ಮೊದಲ ಚಂದ್ರಯಾನ ಯೋಜನೆ ನಿರೀಕ್ಷಿತ ಯಶಸ್ಸು ಕಂಡಿತ್ತು. ಆಗ ನೌಕೆಯಲ್ಲಿದ್ದ ಇಂಪ್ಯಾಕ್ಟರ್ ಅನ್ನು ಅಲ್ಲಿ ನಿಧಾನವಾಗಿ ಇಳಿಸದೆ, ವೇಗವಾಗಿ ಡಿಕ್ಕಿ ಹೊಡೆಸಲಾಗಿತ್ತು. 29 ಕಿಲೊ ತೂಕದ ಇಂಪ್ಯಾಕ್ಟರ್ ಅನ್ನು ಚಂದ್ರನ ದಕ್ಷಿಣ ಧ್ರುವಕ್ಕೆ ಜೋರಾಗಿ ಗುದ್ದುವಂತೆ ಮಾಡಿದಾಗ, ಹಿಮಯುಕ್ತ ನೀರಿನ ಕಣ ಪತ್ತೆಯಾಗಿತ್ತು. ಇದನ್ನು ನಮ್ಮ ನೌಕೆಗೆ ಅಂಟಿಸಲಾಗಿದ್ದ ನಾಸಾದ 'ಮೂನ್ ಮಿನರಾಲಜಿ ಮ್ಯಾಪರ್' ಯಂತ್ರವು ಪತ್ತೆಮಾಡಿತ್ತು. ಖಗೋಳ ವಿಜ್ಞಾನಿಗಳ ಊಹೆ ನಿಜವಾಗಿತ್ತು. ಇದನ್ನು ರಿಮೋಟ್ ಸೆನ್ಸಿಂಗ್ ವಿಧಾನದಲ್ಲಿ ಪತ್ತೆ ಹಚ್ಚಲಾಗಿತ್ತು.

ದೂರಸಂವೇದಿ ಅಧ್ಯಯನಗಳ ಪ್ರಕಾರ, ಚಂದ್ರನ ದಕ್ಷಿಣದ ಕೆಲವು ಪ್ರದೇಶಗಳ ಮೇಲೆ ಕೋಟ್ಯಂತರ ವರ್ಷಗಳಿಂದ ಸೂರ್ಯನ ಬೆಳಕೇ ಬಿದ್ದಿಲ್ಲ. ಗಾಢ ಕತ್ತಲೆ- ತಂಪಿನ (-200°ಸೆಂ) ಈ ಜಾಗದಲ್ಲಿ ಬೃಹತ್ ಪ್ರಮಾಣದ ನೀರು ಇರಬಹುದೆಂಬ ಅಭೀಪ್ಸೆ ಎಲ್ಲರದ್ದು. ಚಂದ್ರನ ಮೇಲ್ಮೈ ಪರೀಕ್ಷೆಗಳಿಂದ ಅಲ್ಲಿನ ನೆಲದಲ್ಲಿ ಜಲಜನಕ, ಅಮೋನಿಯ, ಮೀಥೇನ್, ಸೋಡಿಯಂ, ಪಾದರಸ ಮತ್ತು ಬೆಳ್ಳಿ ಇದೆಯೆಂದು ಗೊತ್ತಾಗಿದೆ. ಅದರ ಪ್ರಮಾಣವೇನು ಎಂಬುದು ಇನ್ನೂ ಪೂರ್ತಿ ತಿಳಿದಿಲ್ಲ.

ಚಂದ್ರಯಾನ– 2ರಲ್ಲಿ ಚಂದ್ರನ ನೆಲಕ್ಕಿಳಿಯಲು ನಿಯೋಜಿಸಿದ್ದ ವಿಕ್ರಂ ಲ್ಯಾಂಡರ್ ಚಂದ್ರನ ನೆಲ ಇನ್ನೂ 2 ಕಿ.ಮೀ. ದೂರವಿದ್ದಾಗ ಭೂಮಿಯ ನಿಯಂತ್ರಣ ಕೇಂದ್ರದ ಸಂಪರ್ಕ ಕಡಿದುಕೊಂಡಿತ್ತು. ಮೂರು ಲಕ್ಷದ ಎಂಬತ್ನಾಲ್ಕು ಸಾವಿರ ಕಿ.ಮೀ. ದೂರ ಕ್ರಮಿಸಿದ್ದ ಲ್ಯಾಂಡರ್‌ನ ಎಂಜಿನ್‌ಗಳು ಚಾಲನೆಗೊಂಡು ನಿಧಾನವಾಗಿ ವಿಕ್ರಂ ಅನ್ನು ಚಂದ್ರನ ನೆಲದ ಮೇಲೆ ಇಳಿಸಬೇಕಿತ್ತು. ಇದಾದ ಎರಡು ತಾಸುಗಳ ನಂತರ ಲ್ಯಾಂಡರ್‌ನ ಬಾಗಿಲು ತೆರೆದುಕೊಂಡು ಹೊರಬರುವ 'ಪ್ರಜ್ಞಾನ್' ಅಲ್ಲಿ 14 ದಿನಗಳ ಕಾಲ ಓಡಾಡಿ ಮಾಹಿತಿ ಸಂಗ್ರಹಿಸಬೇಕಿತ್ತು. ಆದರೆ ಯೋಜನೆಯ ಕೊನೆಯ ಭಾಗದಲ್ಲಿ ನಿಧಾನವಾಗಿ ಇಳಿಯಬೇಕಿದ್ದ ಲ್ಯಾಂಡರ್ ವೇಗವಾಗಿ ಬಿದ್ದು ಧ್ವಂಸಗೊಂಡಿತ್ತು. ಅದನ್ನು ಕ್ರಿಯಾಶೀಲಗೊಳಿಸಲು ಭೂಮಿಯ ನಿಯಂತ್ರಣ ಕೇಂದ್ರದಿಂದ ಮಾಡಿದ ಪ್ರಯತ್ನಗಳೆಲ್ಲ ವಿಫಲವಾಗಿದ್ದವು.

ಇಸ್ರೊದ ಮುಂದಿನ ಅಂತರ್‌ಗ್ರಹ ಯೋಜನೆಗಳಿಗೆ ಸತ್ವ, ನೆಲೆ ಎರಡನ್ನೂ ಒದಗಿಸುವ ಉದ್ದೇಶದ ಈ ಯೋಜನೆಯಲ್ಲಿ ಅಲ್ಲಿಯೇ ಪ್ರಯೋಗ ಕೈಗೊಳ್ಳುವ ವ್ಯವಸ್ಥೆ ಇದೆ. ಲ್ಯಾಂಡರ್‌ನಲ್ಲಿ ಮೂರು, ರೋವರ್‌ನಲ್ಲಿ ಎರಡು ಮತ್ತು ಪ್ರೊಪಲ್ಶನ್ ಮಾಡ್ಯೂಲ್‌ನಲ್ಲಿ ಒಂದು, ಒಟ್ಟು ಆರು ಉಪಕರಣಗಳನ್ನು ಪ್ರಯೋಗಾಧ್ಯಯನಕ್ಕಾಗಿ ನಿಯೋಜಿಸಲಾಗಿದೆ. ಚಂದ್ರನೆಲದ ಪ್ಲಾಸ್ಮಾ ಸಾಂದ್ರತೆ (ಇಲೆಕ್ಟ್ರಾನ್ ಮತ್ತು ಅಯಾನು) ಅಳೆಯಲು ರಂಭ ಎಲ್‌ಪಿ, (ಲ್ಯಾಂಗ್‌ಮ್ಯೂರ್ ಪ್ರೋಬ್), ಧ್ರುವಪ್ರದೇಶದ ಚಂದ್ರನ ಮೇಲ್ಮೈನ ಕಣಗಳ ಶಾಖಗ್ರಹಣ ಮತ್ತು ಪ್ರಸರಣ ಪರಿಮಾಣ ಅಳೆಯಲು ಛಾಸ್ಟ್ (ಚಂದ್ರಾಸ್ ಸರ್ಫೇಸ್ ಥರ್ಮೊ ಫಿಸಿಕಲ್ ಎಕ್ಸ್‌ಪೆರಿಮೆಂಟ್), ಲ್ಯಾಂಡರ್ ಇಳಿಯುವ ಜಾಗದ ಕಂಪನದ ಕಂಪನಾಂಕ ಅಳೆಯಲು ಇಲ್ಸ (ಇನ್‌ಸ್ಟ್ರುಮೆಂಟ್ ಫಾರ್ ಲೂನಾರ್ ಸೈಸ್ಮಿಕ್ ಆ್ಯಕ್ಟಿವಿಟಿ), ಅಲ್ಲಿನ ಮಣ್ಣು ಮತ್ತು ಬಂಡೆಗಳನ್ನು ಛಿದ್ರಿಸಿ ಅವುಗಳಲ್ಲಿರುವ ವಿವಿಧ ಲೋಹಗಳನ್ನು ಪತ್ತೆ ಮಾಡಲು ಲಿಬ್ಸ್ (ಲೇಸರ್ ಇಂಡ್ಯೂಸ್ಡ್ ಬ್ರೇಕ್‌ಡೌನ್ ಸ್ಪೆಕ್ಟ್ರೊಸ್ಕೋಪ್), ಚಂದ್ರನ ನೆಲದಲ್ಲಿ ಇರಬಹುದಾದ ಅದಿರು ನಿಕ್ಷೇಪ ಹಾಗೂ ರಾಸಾಯನಿಕ ಸಂರಚನೆ ಪತ್ತೆಗೆ ಎಪಿಎಕ್ಸ್‌ಎಸ್ (ಅಲ್ಫಾ ಪಾರ್ಟಿಕಲ್ ಎಕ್ಸ್‌ರೇ ಸ್ಪೆಕ್ಟ್ರೊಮೀಟರ್) ಮತ್ತು ಇನ್‌ಫ್ರಾರೆಡ್ ಕಿರಣಗಳ ತರಂಗದೂರ ವ್ಯಾಪ್ತಿಯಲ್ಲಿ ಭೂಮಿಯು ಹೊಮ್ಮಿಸುವ ಬೆಳಕನ್ನು ಅಳೆಯುವ ಶೇಪ್ (ಸ್ಪೆಕ್ಟ್ರೊ ಪೋಲಾರಿಮೆಟ್ರಿ ಆಫ್ ಹ್ಯಾಬಿಟಬಲ್ ಪ್ಲ್ಯಾನೆಟ್ ಅರ್ಥ್) ಎಂಬ ಉಪಕರಣಗಳು ಅಗಾಧ ಮಾಹಿತಿಯ ಕಣಜವನ್ನೇ ಭೂಮಿಗೆ ರವಾನಿಸಲಿವೆ. ನಂತರದ ಕೆಲಸ ವಿಜ್ಞಾನಿಗಳದ್ದು.

ಚುರುಮುರಿ



ಯಾಪ್ ಬೇಕ್ರಿ ಯಾಪು

• ಗುರು ಪಿ.ಎಸ್.

'ಒಂದು ಯಾಪ್ ಮಾಡಬೇಕಾಗೈತಿ' ಲೀಡರ್ ಕುರ್ಚಿ ಮೇಲೆ ಕಣ್ಣಿಟ್ಟಿದ್ದ ಉಪಧ್ಯಾಪಿ ಮುದ್ದಣ್ಣ ದಾಳ ಉರುಳಿಸಿದ.

ಸುತ್ತಮುತ್ತ ನಿಂತಿದ್ದ ಪಾರ್ಟಿ ಮೆಂಬರ್ಸ್ ಎಲ್ಲ ತಲೆ ಕೆರೆದುಕೊಂಡು, 'ಯಾಪ್ ಅಂದ್ರ ಏನ್ ಲೇ ಪಾ' ಎಂದು ಒಟ್ಟಿಗೇ ಕೇಳಿದ್ರು.

'ಯಾಪ್ ಲೇ ಪಾ ಯಾಪು, ನಾವ್ ಹೇಳ್ದಂಗ ಕೇಳೋ ಯಾಪು, ಭಾಷಾ ಕಲ್ಸೋ ಯಾಪು'.

'ಯಾಪ್ ಅಲ್ಲಲೇ ಪಾ ಅದು, ಆ್ಯಪ್ ಅನ್ನು... ನಿಂಗ ನೆಟ್ಟಗ ಮಾತಾಡಾಕ ಬರಲ್ಲ, ಊರ ಮಂದೀಗೆಲ್ಲ ಹಂಗಿಸ್ಕೋಂತ ಮಾತಾಡ್ತೀ' ಹಿರಿಯರೊಬ್ಬರು ಬೈದರು.

'ಆ್ಯಪ್ ರೆಡಿ ಮಾಡಿಕೊಟ್ರೂ ಏನ್ ಮಾಡಾಂವ ಅದ್ರಿಂದ' ಮತ್ತೊಬ್ಬ ಮೆಂಬರ್ ಕೇಳಿದ್ರು.

'ಏನಿಲ್ರೀ, ಆ ಆ್ಯಪೂ ನಾನ್ ಮಾಡಿದ್ದಂಗ ಮಾಡಿದ್ರಾತು'.

'ಅಂದ್ರ?'

'ರಾಜಕಾರಣಿಗಳ ಮುಂದ ಮೀಡಿಯಾದವ್ರನ್ನ ಬೈಯೂದ, ಮೀಡಿಯಾದವ್ರ ಮುಂದ ರಾಜಕಾರಣಿಗಳನ್ನ ಬೈಯೂದು, ಇನ್ನೂ ಜಾಸ್ತಿ ನ್ಯೂಸ್‌ನಾಗ ಇರಬೇಕಂದ್ರ ನಮ್ ಪಾರ್ಟಿಯವರನ್ನೂ ಬೈಯೂದ... ಯಾವ ಟೈಮ್‌ನಾಗ ಯಾರನ್ನ ಬೈಯೂದು ಅಂತ ಆ ಆ್ಯಪ್ ನಂಗೆ ಅಪ್‌ಡೇಟ್ ಮಾಡ್ತಿರಬೇಕಷ್ಟ' ಹಲ್ಲು ಕಿರಿದ ಮುದ್ದಣ್ಣ.

'ಇದು ಅಧ್ಯಕ್ಷ. ಎಲ್ಲರೂ ಹೇಗೇಗೋ ಮಾತಾಡೋದಲ್ಲ. ತಲೆಹರಟೆ ಮಾಡೋರಿಗೆ ಏನ್ ಮಾಡಬೇಕು ಅಂತ ನನಗೆ ಗೊತ್ತುಂಟು' ಗರಂ ಆಗಿಯೇ ಎಂಟ್ರಿ ಕೊಟ್ಟರು ಪಾರ್ಟಿ ಪ್ರೆಸಿಡೆಂಟ್ ವಿಜಿ.

'ನಮ್ ಪಾರ್ಟಿ ಹೀನಾಯವಾಗಿ ಸೋತರೂ ಇವರನ್ನೇ ಯಾಕೆ ಇನ್ನೂ ಅಧ್ಯಕ್ಷರಾಗಿ ಇಟ್ಟವರೆ' ಮೆತ್ತಗೆ ಗೊಣಗಿದರು ಮೆಂಬರ್ ಒಬ್ಬರು.

'ನಮ್ ಪ್ರೆಸಿಡೆಂಟ್‌ನ ಚೇಂಜ್ ಮಾಡೋಕೆ ಎದುರು ಪಾರ್ಟಿಯವರೇ ಬಿಡ್ತಿಲ್ವಂತೆ'.

'ಯಾಕೆ?'

'ನಮ್ ಪ್ರೆಸಿಡೆಂಟ್, ಬಾಲ್ ವೇಸ್ಟ್ ಮಾಡೋ ಬ್ಯಾಟ್ಸ್‌ಮನ್ ಇದ್ದಂಗೆ. ಅವರು ಸ್ಕ್ರೀಜ್‌ನಲ್ಲಿದ್ದಷ್ಟೂ ಹೊತ್ತು ಎದುರು ಟೀಮ್‌ಗೇ ಗೆಲ್ಲೋ ಅವಕಾಶ ಜಾಸ್ತಿ ಅಂತ!'

ಸಂಗತ

ಕಲಿಕೆಗೆ ತಾಂತ್ರಿಕ ಸವಾಲು

ಕೃತಕ ಬುದ್ಧಿಮತ್ತೆಯ ನೆರವಿನಿಂದ ಹೊರಹೊಮ್ಮುವ ಹೊಸ ತಾಂತ್ರಿಕ ಆವಿಷ್ಕಾರಗಳ ಸಾಧಕ–ಬಾಧಕ ಕುರಿತು ಶೈಕ್ಷಣಿಕ ವಲಯದಲ್ಲಿ ವ್ಯಾಪಕ ಚರ್ಚೆ ನಡೆಯುವ ಅಗತ್ಯವಿದೆ

• ಎಚ್.ಕೆ.ಶರತ್

ಗುಣಮಟ್ಟ ನಿರ್ವಹಣೆಗೆ ಸಂಬಂಧಿಸಿದಂತೆ ಐಎಸ್‌ಒ ಪ್ರಮಾಣೀಕರಣದ ಮಹತ್ವ ಮನದಟ್ಟು ಮಾಡಿಕೊಡುವ ವಿಷಯ ಆರಿಸಿಕೊಂಡು ಎಂಜಿನಿಯರಿಂಗ್ ವಿದ್ಯಾರ್ಥಿಗಳು ವಿಚಾರ ಮಂಡಿಸುತ್ತಿದ್ದರು. ಸುರಕ್ಷಾ ಮಾನದಂಡಗಳನ್ನು ಪಾಲಿಸದಿದ್ದರೆ ಅದು ಎಂತಹ ಅವಘಡಗಳಿಗೆ ಕಾರಣವಾಗಲಿದೆ ಎಂಬುದನ್ನು ನಿರೂಪಿಸಲು, ಇತ್ತೀಚೆಗೆ ನಡೆದ 'ಓಷನ್‌ಗೇಟ್ ಟೈಟನ್' ಹೆಸರಿನ ಸಬ್‌ಮರ್ಸಿಬಲ್ ಜಲನೌಕೆಯ ಅಂತಃಸ್ಫೋಟ ಪ್ರಕರಣವನ್ನು ಉದಾಹರಿಸಿದರು.

ಗೂಗಲ್‌ನಂತಹ ಹುಡುಕುತಾಣಗಳ ನೆರವಿನಿಂದಲೋ ವಿಕಿಪೀಡಿಯಾದಂತಹ ತಾಣಗಳನ್ನು ಪರಾಮರ್ಶಿಸಿಯೋ ಅಥವಾ ಯಥಾವತ್ತಾಗಿ ನಕಲಿಸಿಯೋ ವಿದ್ಯಾರ್ಥಿಗಳು ವಿಚಾರ ಮಂಡಿಸುವುದು ಸರ್ವೇಸಾಮಾನ್ಯ. ಎಂಜಿನಿಯರಿಂಗ್ ವಿದ್ಯಾರ್ಥಿಗಳು ವಿಚಾರ ಮಂಡನೆಗೆ 'ದಿ ನ್ಯೂಯಾರ್ಕ್ ಟೈಮ್ಸ್' ಮತ್ತು 'ದಿ ಗಾರ್ಡಿಯನ್' ಪತ್ರಿಕೆಗಳಿಂದ ಮಾಹಿತಿ ಎರವಲು ಪಡೆದಿದ್ದುದು ನಮ್ಮ ಪಾಲಿಗೆ ಹೊಸ ಬೆಳವಣಿಗೆಯಾಗಿತ್ತು.

ಈ ವಿದ್ಯಾರ್ಥಿಗಳು ತಾವು ಪರಾಮರ್ಶಿಸಿರುವ ಆಕರಗಳು ಯಾವುವು ಎಂದು ಕೊನೆಗೆ ತಿಳಿಸುವವರೆಗೂ, ವಿಷಯ ಮಂಡನೆಗಾಗಿ ಅವರು ಹಾಕಿರಬಹುದಾದ ಶ್ರಮ ಮತ್ತು ಬದ್ಧತೆಯ ಕುರಿತು ಮೆಚ್ಚುಗೆ ಮೂಡತೊಡಗಿತ್ತು. ಆದರೆ, ವಾಸ್ತವವಾಗಿ ಅವರು ಮಂಡಿಸಿದ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನೆಲ್ಲ ಪಡೆದದ್ದು ಯುಟ್ಯೂಬ್‌ನಲ್ಲಿನ ಒಂದು ವಿಡಿಯೊ ಹಾಗೂ ಚಾಟ್‌ಜಿಪಿಟಿ ನೆರವಿನಿಂದ ಎಂಬುದು ಕೊನೆಗೆ ಅನಾವರಣವಾಯಿತು.

ಎಂಜಿನಿಯರಿಂಗ್ ಪದವಿ ಪಡೆಯಲು ಕೈಗೊಳ್ಳಬೇಕಿರುವ ಪ್ರಾಜೆಕ್ಟ್ ವರ್ಕ್‌ನ ಭಾಗವಾಗಿ ಸಂಯೋಜಿತ ವಸ್ತು (ಕಾಂಪೊಸಿಟ್ ಮೆಟೀರಿಯಲ್) ಒಂದರ ಗುಣಲಕ್ಷಣಗಳನ್ನು ಅರಿಯುವ ಪ್ರಯೋಗಗಳನ್ನು ವಿದ್ಯಾರ್ಥಿಗಳು ಮಾಡಿದ್ದರು. ಅವರು ಸಲ್ಲಿಸಿದ್ದ ಪ್ರಾಜೆಕ್ಟ್ ವರದಿಯಲ್ಲಿದ್ದ ಕೆಲವು ವಿವರಣೆಗಳಲ್ಲಿ ಎಲ್ಲಿಯೂ ಪ್ರಯೋಗಗಳ ಫಲಿತಾಂಶದ ಮೂಲಕ ತಾವು ಕಂಡುಕೊಂಡದ್ದೇನು ಎಂಬುದನ್ನು ನೇರವಾಗಿ ವಿವರಿಸಿರಲಿಲ್ಲ. ಯಾವುದೋ ಸಂಶೋಧನಾ ಪತ್ರಿಕೆಯಲ್ಲಿ ಪ್ರಕಟವಾಗಿರುವುದನ್ನು ನಕಲು ಮಾಡಿ ಹಾಕಿದಂತಿತ್ತು. ಕೊನೆಗೆ ತಿಳಿದುಬಂದದ್ದೆಂದರೆ, ಈ ವಿದ್ಯಾರ್ಥಿಗಳು ತಾವು ಕೇಳಿದ ವಿವರಗಳಿಗೆ ಚಾಟ್‌ಜಿಪಿಟಿಯಲ್ಲಿ ದೊರೆತ ಪ್ರತಿಕ್ರಿಯೆಗಳನ್ನೇ ಯಥಾವತ್ತಾಗಿ ನಕಲಿಸಿ ಪ್ರಾಜೆಕ್ಟ್ ವರದಿಗೆ ಸೇರಿಸಿದ್ದರು.

ಮೂರು ವರ್ಷಗಳ ಹಿಂದೆ ಪಿಎಚ್.ಡಿ ಮುಗಿಸಿ ಖಾಸಗಿ ಎಂಜಿನಿಯರಿಂಗ್ ಕಾಲೇಜೊಂದರಲ್ಲಿ ಅಧ್ಯಾಪಕನಾಗಿ ಕಾರ್ಯನಿರ್ವಹಿಸುತ್ತಿರುವ ಸ್ನೇಹಿತನ ಮೇಲೆ ವರ್ಷಕ್ಕೆರಡು ಸಂಶೋಧನಾ ಲೇಖನಗಳನ್ನು ಪ್ರಕಟಿಸಲೇಬೇಕು ಎನ್ನುವ ಒತ್ತಡವಿದೆ. ಅದಕ್ಕಾಗಿ ಮೊದಲೆಲ್ಲಾ ಅವನು ಬರೆಯಲು ತಾನು ಆರಿಸಿಕೊಂಡಿರುವ ವಿಷಯದ ಕುರಿತು ವಿವಿಧ ಸಂಶೋಧನಾ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸಂಶೋಧನಾ ಲೇಖನಗಳನ್ನು ಪರಾಮರ್ಶಿಸಿ ಲೇಖನ ಸಿದ್ಧಪಡಿಸುತ್ತಿದ್ದವನು, ಇದೀಗ ಚಾಟ್‌ಜಿಪಿಟಿ ನೆರವು ಕೂಡ ಪಡೆಯುತ್ತಿದ್ದಾನೆ. 'ಚಾಟ್‌ಜಿಪಿಟಿ ಬಳಸಿ ಸಂಶೋಧನಾ ಲೇಖನ ಸಿದ್ಧಪಡಿಸುವುದನ್ನು ನಿರ್ಬಂಧಿಸುವ ಮತ್ತು ಅದನ್ನು ಪತ್ತೆಹಚ್ಚುವ ದಾರಿ ಕಂಡುಕೊಳ್ಳುವ ಮುನ್ನ ಎಷ್ಟು ಸಾಧ್ಯವೋ ಅಷ್ಟು ಲೇಖನಗಳನ್ನು ಪ್ರಕಟಿಸೋಣ ಅಂದುಕೊಂಡಿದ್ದೀನಿ' ಎಂದು ತಿಳಿಸಿದ.

ಇತ್ತೀಚೆಗೆ ಬಹಳಷ್ಟು ಸದ್ದು ಮಾಡುತ್ತಿರುವ ಚಾಟ್‌ಜಿಪಿಟಿಯನ್ನೂ ಒಳಗೊಂಡಂತೆ ಕೃತಕ ಬುದ್ಧಿಮತ್ತೆಯ ನೆರವಿನಿಂದ ಹೊರಹೊಮ್ಮುವ ಹೊಸ ತಾಂತ್ರಿಕ ಹತಾರಗಳು ಉನ್ನತ ಶಿಕ್ಷಣ ವಲಯದ ಮೇಲೆ ಉಂಟುಮಾಡಬಹುದಾದ ಪ್ರಭಾವ ಮತ್ತು ಅದರ ಪರಿಣಾಮಗಳ ಕುರಿತು ಕೂಲಂಕಷವಾಗಿ ಅವಲೋಕಿಸುವ ಅಗತ್ಯ ನಿರ್ಮಾಣವಾಗಿದೆ. ಇದಕ್ಕೆ ಮೇಲಿನ ನಿದರ್ಶನಗಳು ಪುರಾವೆ ಒದಗಿಸುತ್ತಿವೆ.

ಈ ಕಾಲಘಟ್ಟದ ಅಗತ್ಯಕ್ಕೆ ತಕ್ಕಂತೆ ಬದಲಾವಣೆಗಳನ್ನು ತರುವ ಮೂಲಕ, ನೆನಪಿನ ಶಕ್ತಿ ಕೇಂದ್ರಿತ ಕಲಿಕಾ ವ್ಯವಸ್ಥೆಯಿಂದ ಹೊರಬರಲು ಇರುವ ದಾರಿಗಳತ್ತ ಕಣ್ಣು ಹಾಯಿಸಬೇಕಿದೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಈ ದಿಸೆಯಲ್ಲಿ ಕೆಲ ಹೆಜ್ಜೆಗಳನ್ನು ಇಡುತ್ತಿದೆ. ವಿದ್ಯಾರ್ಥಿಗಳು ಸೂತ್ರಗಳನ್ನು ನೆನಪಿಟ್ಟುಕೊಳ್ಳಲು ಶ್ರಮ ಹಾಕುವುದನ್ನು ತಪ್ಪಿಸುವ ಸಲುವಾಗಿ ಆಯಾ ವಿಷಯಕ್ಕೆ ಸಂಬಂಧಿಸಿದ ಸೂತ್ರಗಳ ಕೈಪಿಡಿ ಸಿದ್ಧಪಡಿಸಿ, ಪರೀಕ್ಷೆಯಲ್ಲೂ ಅದರ ಬಳಕೆಗೆ ಅನುವು ಮಾಡಿಕೊಡಲಾಗುತ್ತಿದೆ. ಈ ಮೊದಲು ಬೆರಳೆಣಿಕೆಯಷ್ಟು ವಿಷಯಗಳಿಗೆ ಮಾತ್ರ ಸೂತ್ರಗಳ ಕೈಪಿಡಿ ಬಳಸಲು ಅವಕಾಶವಿತ್ತು. ಆದರೆ ಈಗ ಹೆಚ್ಚು ಸೂತ್ರಗಳನ್ನು ಬಳಸುವ ಬಹುತೇಕ ವಿಷಯಗಳಿಗೆ ಪ್ರತ್ಯೇಕ ಕೈಪಿಡಿ ಸಿದ್ಧಪಡಿಸಿ, ಪರೀಕ್ಷೆಯಲ್ಲೂ ಅದರ ಬಳಕೆಗೆ ಅನುವು ಮಾಡಿಕೊಡಲಾಗುತ್ತಿದೆ.

ಸದ್ಯದ ಪರೀಕ್ಷಾ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳು ಪಠ್ಯದಲ್ಲಿ ಇರುವುದನ್ನು ನೆನಪಿಟ್ಟುಕೊಳ್ಳಲು ಹೆಚ್ಚಿನ ಸಮಯ ಹಾಗೂ ಶ್ರಮ ವಿನಿಯೋಗಿಸಬೇಕಿದೆ. ನಮ್ಮ ಶೈಕ್ಷಣಿಕ ವ್ಯವಸ್ಥೆ ಚಟುವಟಿಕೆ ಆಧಾರಿತ ಹಾಗೂ ಪ್ರಾಯೋಗಿಕ ಕಲಿಕೆಯೆಡೆಗೆ ನಿಧಾನವಾಗಿ ಹೊರಳಿಕೊಳ್ಳತೊಡಗಿರುವ ಹೊತ್ತಿನಲ್ಲಿಯೇ ಹೊರಹೊಮ್ಮತೊಡಗಿರುವ ನವನವೀನ ತಾಂತ್ರಿಕ ಪರಿಕರಗಳು, ಹೊಸ ಅಡ್ಡದಾರಿಗಳನ್ನು ವಿದ್ಯಾರ್ಥಿಗಳ ಎದುರು ತೆರೆದಿಡತೊಡಗಿವೆ. ವಿದ್ಯಾರ್ಥಿಗಳಲ್ಲಿನ ವಿಶ್ಲೇಷಣಾತ್ಮಕ ಸಾಮರ್ಥ್ಯವನ್ನು ಒರೆಗೆಹಚ್ಚಿ, ಜಟಿಲ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಚಟುವಟಿಕೆಗಳಲ್ಲಿ ಅವರನ್ನು ತೊಡಗಿಸುವ ಸದುದ್ದೇಶವೂ ತಾಂತ್ರಿಕ ಹತಾರಗಳ ದುರ್ಬಳಕೆಯಿಂದ ಈಡೇರದೇ ಹೋಗುವ ಅಪಾಯವಿದೆ.

ವಾಚಕರ ವಾಣಿ

ಮುಖ್ಯಮಂತ್ರಿ ಹೆಸರನ್ನೇ ಘೋಷಿಸಬಹುದು!

ವಿಧಾನಸಭೆಯ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡಲು ಬಿಜೆಪಿಗೆ ಇನ್ನೂ ಆಗಿಲ್ಲ. 'ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಪತನಗೊಳ್ಳುವ ಕಾಲ ಸಮೀಪಿಸುತ್ತಿದೆ' ಎಂದು ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿಯ ಕೆಲ ನಾಯಕರು ಹೇಳುತ್ತಿದ್ದಾರೆ. ಇದನ್ನು ನೋಡಿದರೆ, ಮಹಾರಾಷ್ಟ್ರದಂತೆ ಇಲ್ಲೂ ಆಗಬಹುದು ಅನಿಸುತ್ತದೆ! ವಿರೋಧಪಕ್ಷದ ನಾಯಕನ ಆಯ್ಕೆ ಪಟ್ಟಿಯನ್ನು ಪಕ್ಷದ ರಾಜ್ಯ ಮುಖಂಡರು ದೆಹಲಿಗೆ ಕೊಂಡುಹೋಗಿದ್ದಾಗ, ದೆಹಲಿಯ ಚಾಣಾಕ್ಷ ದೊರೆಗಳು 'ಸ್ವಲ್ಪ ತಾಳ್ಮೆಯಿಂದ ಕಾಯಿರಿ. ಮುಖ್ಯಮಂತ್ರಿ ಹೆಸರನ್ನೇ ಸೂಚಿಸುತ್ತೇವೆ' ಎಂದಿರಲೂಬಹುದು! ಅಲ್ಲಿಗೆ ವಿರೋಧ ಪಕ್ಷದ ನಾಯಕನನ್ನು ಆಯ್ಕೆ ಮಾಡುವುದೇಕೆ, ಅಲ್ಲವೇ?

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಪಠ್ಯಕ್ರಮ ಚೌಕಟ್ಟು: ಸ್ಪಷ್ಟನೆ ಅಗತ್ಯ

'ಮಕ್ಕಳ ಸುಲಭ ಹಾಗೂ ಪರಿಣಾಮಕಾರಿ ಕಲಿಕೆಗೆ ಪೂರಕವಾಗಿ ಪಠ್ಯಪುಸ್ತಕ ರಚಿಸಬೇಕಿದೆ. ಅದಕ್ಕಾಗಿ ರಾಜ್ಯ ಶಿಕ್ಷಣ ನೀತಿ ಸಿದ್ಧಪಡಿಸಲು ಶೀಘ್ರ ಸಮಿತಿ ರಚಿಸಲಾಗುವುದು' ಎಂಬ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಹೇಳಿಕೆ (ಪ್ರ.ವಾ., ಜುಲೈ 12) ಸ್ವಾಗತಾರ್ಹ. ಮುಂದಿನ ದಿನಗಳಲ್ಲಿ ಮಕ್ಕಳು ಸರಳವಾಗಿ, ಒತ್ತಡಮುಕ್ತವಾಗಿ ಕಲಿಯಲು ಅನುಕೂಲವಾಗುವಂತೆ ಸಂವಿಧಾನದ ಆಶಯಗಳಿಗೆ ಪೂರಕವಾಗಿ ಪಠ್ಯಕ್ರಮ ಚೌಕಟ್ಟು ಸಿದ್ಧಪಡಿಸಲಾಗುವುದು, ಬ್ಯಾಗ್ ಹೊರೆ ತಗ್ಗಿಸಲಾಗುವುದು ಎಂದು ಕೂಡ ಸಚಿವರು ಹೇಳಿರುವುದು ಅಭಿನಂದನಾರ್ಹ. ಆದರೆ ಈ ಎಲ್ಲಾ ಬದಲಾವಣೆಗಳು ಅನ್ವಯವಾಗುವುದು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೋ ಅಥವಾ ಬರಲಿರುವ ಸಾಲಿನಿಂದಲೋ ಎಂಬುದನ್ನು ಸಚಿವರು ಸ್ಪಷ್ಟಪಡಿಸಬೇಕಿದೆ. ಏಕೆಂದರೆ ಹಿಂದಿನ ಶೈಕ್ಷಣಿಕ ಸಾಲಿನ ಕೆಲವು ಪಾಠಗಳನ್ನು ಈ ಸಾಲಿನಿಂದ ಕೈ ಬಿಟ್ಟಿರುವುದರಿಂದ, ಪೋಷಕರು ಮತ್ತು ವಿದ್ಯಾರ್ಥಿಗಳ ಅನುಮಾನ ನಿವಾರಣೆ ಸಲುವಾಗಿ ಈಗ ಇಂತಹ ಸ್ಪಷ್ಟನೆ ಅಗತ್ಯವಾಗಿದೆ.

ಬ್ಯಾಗ್ ಹೊರೆ ತಗ್ಗಿಸಲಾಗುವುದು ಎಂಬ ಹೇಳಿಕೆ ದಶಕಗಳಿಂದ ಆಚರಣೆಗೆ ಬಾರದಿರುವುದು ಒಗಟಾಗಿ ಉಳಿದಿದೆ. ಒಂದು ವೇಳೆ ಈಗ ಸರ್ಕಾರದ ಈ ಮಾತು ನಿಜವೇ ಆದರೂ ಈ ನಿಯಮ ಖಾಸಗಿ ಶಾಲೆಗಳಿಗೂ ಅನ್ವಯವಾಗುವುದೇ? ಏಕೆಂದರೆ ಬಹುತೇಕ ಎಲ್ಲಾ ಖಾಸಗಿ ಶಾಲೆಗಳು ಸರ್ಕಾರದ ಪಠ್ಯದ ಜೊತೆಗೆ ಹೆಚ್ಚುವರಿ ಪುಸ್ತಕಗಳನ್ನು ಪಠ್ಯವಾಗಿ ಬೋಧಿಸುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಕನಿಷ್ಠ ಈ ಸರ್ಕಾರದ ಅವಧಿಯಲ್ಲಾದರೂ ಬ್ಯಾಗ್ ಹೊರೆ ತಗ್ಗಿಸುವ ಕೆಲಸ ಕಾರ್ಯರೂಪಕ್ಕೆ ಬರಲಿ.

ಪ್ರೊ. ಎಂ.ಜಿ.ರಂಗಸ್ವಾಮಿ, ಹಿರಿಯೂರು

ಪೈಪೋಟಿ ಯಾನ...

ಅತ್ತ,
ಶ್ರೀಹರಿಕೋಟಾದಲ್ಲಿ
ಬಹು ನಿರೀಕ್ಷಿತ ಚಂದ್ರಯಾನ-3
ಉಪಗ್ರಹ ಉಡಾವಣೆ...
ಇತ್ತ,
ಹಾಲು, ಬೇಳೆಕಾಳು,
ಟೊಮೆಟೊ, ತರಕಾರಿ
ದರಗಳು ದಿನೇದಿನೇ
ಮಾಡುತ್ತಿವೆ
ಸ್ವಯಂ ಗಗನಯಾನ!

ಮ.ಗು.ಬಸವಣ್ಣ, ನಂಜನಗೂಡು

ಶಿಕ್ಷಕರೇಕೆ ದಾನಿಗಳ ಬಳಿ ಹೋಗಬೇಕು?

'ದಾನಿಗಳ ಕೊರತೆ ಇಲ್ಲ, ಆದರೆ...' ಎನ್ನುವ ಪತ್ರದಲ್ಲಿ (ವಾ.ವಾ., ಜುಲೈ 12), 'ಶಿಕ್ಷಕರು ಗಾಣದೆತ್ತಿನ ಹಾಗೆ ಇರಬಾರದು, ಸಂಕೋಚ ಬಿಟ್ಟು, ದಾನಿಗಳನ್ನು ವಿನಂತಿಸಿಕೊಳ್ಳಬೇಕು, ಆಗ ಶಾಲೆಗೆ ಸೌಲಭ್ಯಗಳು ಸಿಗುತ್ತವೆ' ಎಂದು ಸಿ. ಚಿಕ್ಕತಿಮ್ಮಯ್ಯ ಹಂದನಕೆರೆ ಅವರು ಬರೆದಿದ್ದಾರೆ. ಶಿಕ್ಷಕರು ಯಾಕೆ ಸೌಲಭ್ಯ ಕೇಳಬೇಕು, ವಿನಂತಿಸಿಕೊಳ್ಳಬೇಕು? ಒಂದು ವೇಳೆ ಶಿಕ್ಷಕರೇ ಖುದ್ದಾಗಿ ದಾನಿಗಳ ಹತ್ತಿರ ಹೋಗಿ ವಿನಂತಿಸಿಕೊಂಡರು ಎಂದುಕೊಳ್ಳೋಣ. ದೇಣಿಗೆ ನೀಡಿದ ದಾನಿಗಳು ಅವರ ತಂದೆ, ತಾಯಿ ಅಥವಾ ಸಂಬಂಧಿಗಳ ಫೋಟೊವನ್ನು ಶಾಲೆಯಲ್ಲಿ ಹಾಕಲು ಅಥವಾ ಹೆಸರನ್ನು ಇಡಲು ಹೇಳುತ್ತಾರೆ. ಇಂತಹ ಫೋಟೊಗಳು, ಹೆಸರುಗಳು ಮಕ್ಕಳ ಮನಸ್ಸಿನ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತವೆ. ಇದರ ಬದಲಿಗೆ ಶಿಕ್ಷಕರು ಶಾಲೆಗೆ ಬೇಕಾಗಿರುವ ಸೌಲಭ್ಯಗಳ ಬಗ್ಗೆ ಎಸ್‌ಡಿಎಂಸಿ, ಗ್ರಾಮ ಪಂಚಾಯಿತಿ ಹಾಗೂ ಸ್ಥಳೀಯ ಶಾಸಕರ ಗಮನಕ್ಕೆ ತರಬೇಕು. ಹೆಚ್ಚಾಗಿ ಶಾಲೆಗೆ ಹಳೆ ವಿದ್ಯಾರ್ಥಿಗಳು, ದಾನಿಗಳು ದೇಣಿಗೆ ನೀಡಲು ಸರ್ಕಾರ 'ನನ್ನ ಶಾಲೆ ನನ್ನ ಕೊಡುಗೆ ಪೋರ್ಟಲ್' ಆರಂಭಿಸಿದೆ. ಎಲ್ಲರೂ ಇಲ್ಲಿಯೂ ದೇಣಿಗೆ ನೀಡಬಹುದು.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಪ್ರತಿಭಟನೆಯೆಂಬ ಪ್ರಹಸನ ಕೊನೆಗೊಳ್ಳಲಿ

ತಮ್ಮ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿರುವುದರ ವಿರುದ್ಧ ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಪಕ್ಷದ ಹಲವು ಸಚಿವರು ಮತ್ತು ಶಾಸಕರು ಸದನ ನಡೆಯುತ್ತಿರುವ ಸಂದರ್ಭದಲ್ಲೇ ಬೆಂಗಳೂರಿನಲ್ಲಿ ಮೌನ ಪ್ರತಿಭಟನೆ ನಡೆಸಿದ್ದಾರೆ. ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದುಬಿದ್ದಿದೆ ಎಂದು ಆರೋಪಿಸಿ ವಿರೋಧಪಕ್ಷವಾದ ಬಿಜೆಪಿಯ ಶಾಸಕರು ಬೆಂಗಳೂರಿನ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿ, ಜೈನ ಮುನಿಗಳ ಹತ್ಯೆ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಲು ಸರ್ಕಾರಕ್ಕೆ ನಿರ್ದೇಶನ ನೀಡುವಂತೆ ಕೋರಿ ರಾಜ್ಯಪಾಲರಿಗೆ ಮನವಿ ಸಲ್ಲಿಸಿದ್ದಾರೆ.

ಮಾನನಷ್ಟ ಮೊಕದ್ದಮೆಯಲ್ಲಿ ಸೂರತ್ ಕೋರ್ಟ್ ನೀಡಿರುವ ಶಿಕ್ಷೆಗೆ ತಡೆ ನೀಡುವಂತೆ ಕೋರಿ ರಾಹುಲ್ ಅವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವುದು ಗುಜರಾತ್ ಹೈಕೋರ್ಟ್. ಹೀಗಿರುವಾಗ ಅದರಲ್ಲಿ ಕೇಂದ್ರ ಸರ್ಕಾರದ ಪಾತ್ರವೇನಿದೆ? ಹಾಗಾದರೆ, ಕಾಂಗ್ರೆಸ್ ಪಕ್ಷದ ಪ್ರತಿಭಟನೆ ಯಾರ ವಿರುದ್ಧ? ಕಾಂಗ್ರೆಸ್ ಪಕ್ಷಕ್ಕೆ ಉಳಿದಿರುವ ಏಕೈಕ ರಾಜಮಾರ್ಗವೆಂದರೆ, ಸುಪ್ರೀಂ ಕೋರ್ಟಿನಲ್ಲಿ ಮೇಲ್ಮನವಿ ಸಲ್ಲಿಸಿ, ಸಮರ್ಥ ವಾದವನ್ನು ಮಂಡಿಸುವುದೇ ವಿನಾ ಪ್ರತಿಭಟನೆಯೆಂಬ ನಾಟಕವಲ್ಲ. ಬಿಜೆಪಿ ಸಹ ಹೊರಗೆ ಪ್ರತಿಭಟಿಸುವುದನ್ನು ಕೈಬಿಟ್ಟು ಅಗತ್ಯ ಮಾಹಿತಿಯೊಡನೆ ಸದನದಲ್ಲೇ ಸಮರ್ಥವಾಗಿ ವಿಷಯ ಮಂಡನೆ ಮಾಡಿ ಚರ್ಚಿಸುವುದು ಸರಿಯಾದ ಮಾರ್ಗ. ಸದನ ನಡೆಯುತ್ತಿರುವಾಗಲೂ, ವಿಷಯಗಳನ್ನು ಅಲ್ಲಿ ಚರ್ಚಿಸದೆ, ರಾಜಕೀಯ ಪಕ್ಷಗಳು ಪ್ರತಿಭಟನೆಗೇ ಅಂಟಿಕೊಳ್ಳುವುದಾದರೆ, ಕೋಟ್ಯಂತರ ರೂಪಾಯಿ ವೆಚ್ಚದಲ್ಲಿ ಸದನ ನಡೆಸುವುದರ ಔಚಿತ್ಯವಾದರೂ ಏನು? ಪ್ರತಿಭಟನೆಗಳೆಂಬ ಇಂತಹ ಪ್ರಹಸನದಿಂದ ಪಕ್ಷಗಳಿಗೆ ಸ್ವಲ್ಪ ಮಟ್ಟಿಗಿನ ರಾಜಕೀಯ ಲಾಭ ದೊರಕಬಹುದೇ ವಿನಾ ಅವುಗಳಿಂದ ಕಿಂಚಿತ್ತೂ ಸಾರ್ವಜನಿಕ ಒಳಿತನ್ನಂತೂ ನಿರೀಕ್ಷಿಸುವಂತಿಲ್ಲ.

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಚಂದ್ರನ ದಕ್ಷಿಣ ಧ್ರುವದತ್ತ ಇಸ್ರೊ



ಎಲ್‌ಎಂವಿ–3 ನೌಕೆಯು ನೆಲದಿಂದ ಜಿಗಿದ ಕೆಲವೇ ನಿಮಿಷಗಳಲ್ಲಿ ಪ್ರೊಪಲ್ಷನ್ ನೌಕೆಯನ್ನು ಭೂಮಿಯಿಂದ ಪೂರ್ವನಿಗದಿತ ಎತ್ತರದ ಕಕ್ಷೆಗೆ ಸೇರಿಸಲಿದೆ. ಭೂಮಿಯ ಸುತ್ತ ವೃತ್ತಾಕಾರದ ಕಕ್ಷೆಯಲ್ಲಿ ಸುತ್ತುವ ಪ್ರೊಪಲ್ಷನ್ ನೌಕೆಯು ಹಲವು ಹಂತಗಳಲ್ಲಿ ತನ್ನ ಕಕ್ಷೆಯ ಎತ್ತರವನ್ನು ಹೆಚ್ಚಿಸಿಕೊಳ್ಳಲಿದೆ. ನಂತರ ಭೂಮಿಯ ಕಕ್ಷೆಯಿಂದ ಚಂದ್ರನ ಕ್ಷಕೆಯತ್ತ ಪ್ರಯಾಣ ಆರಂಭಿಸಲಿದೆ.

ಹಲವು ದಿನಗಳ ಪ್ರಯಾಣದ ನಂತರ ಪ್ರೊಪಲ್ಷನ್ ನೌಕೆಯು ಚಂದ್ರನ ಕಕ್ಷೆಯನ್ನು ಸೇರಲಿದೆ. ಆರಂಭದಲ್ಲಿ ಅರೆಗೋಲಾಕಾರದ ಕಕ್ಷೆಯಲ್ಲಿ ಚಂದ್ರನನ್ನು ಸುತ್ತಲಿದೆ. ನಂತರ ಹಲವು ಹಂತಗಳಲ್ಲಿ ಕಕ್ಷೆಯ ಎತ್ತರವನ್ನು ಕಡಿಮೆ ಮಾಡಿಕೊಳ್ಳಲಿದೆ. ಚಂದ್ರನ ಮೇಲ್ಮೈನಿಂದ 100 ಕಿ.ಮೀ. ಎತ್ತರದ ವೃತ್ತಾಕಾರದ ಕಕ್ಷೆ ತಲುಪಿದಾಗ, ಲ್ಯಾಂಡರ್ ನೌಕೆಯಿಂದ ಪ್ರೊಪಲ್ಷನ್ ನೌಕೆಯು ಬೇರ್ಪಡಲಿದೆ. ಇಷ್ಟು ಕಾರ್ಯಾಚರಣೆಗೆ 40 ದಿನ ಬೇಕಾಗಲಿದೆ.

ಪ್ರಜಾವಾಣಿ ವಾರ್ತೆ

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಮಹತ್ವಾಕಾಂಕ್ಷಿ ಯೋಜನೆಯಾದ 'ಚಂದ್ರಯಾನ-3'ಕ್ಕೆ ಕ್ಷಣಗಣನೆ ಆರಂಭವಾಗಿದೆ. ಪೂರ್ವನಿಗದಿಯಂತೆ ಎಲ್ಲವೂ ನಡೆದರೆ ಶುಕ್ರವಾರ ಮಧ್ಯಾಹ್ನ 2.35ಕ್ಕೆ ಚಂದ್ರಯಾನ–3ರ ಉಪಗ್ರಹವನ್ನು ಹೊತ್ತ ಎಲ್‌ಎಂವಿ–3 ಎಂ4 ರಾಕೆಟ್ ನಭದತ್ತ ಜಿಗಿಯಲಿದೆ. ಚಂದ್ರನ ಅಂಗಳದಲ್ಲಿ 'ವಿಕ್ರಮ್ ಲ್ಯಾಂಡರ್' ಮತ್ತು 'ರೋವರ್' ಬಂಡಿಯನ್ನು ಇಳಿಸುವ ಈ ಕಾರ್ಯಾಚರಣೆಯು ಭಾರತದ ಪಾಲಿಗೆ ಅತ್ಯಂತ ಮಹತ್ವದ್ದಾಗಿದೆ.

2019ರಲ್ಲಿ ಚಂದ್ರನ ಅಂಗಳದಲ್ಲಿ ಲ್ಯಾಂಡರ್ ಮತ್ತು ನೌಕೆಯನ್ನು ಇಳಿಸುವ ಚಂದ್ರಯಾನ–2 ಕಾರ್ಯಾಚರಣೆಯು ಭಾಗಶಃ ಯಶಸ್ವಿಯಾಗಿತ್ತು. ಚಂದ್ರನ ಪರಿಭ್ರಮಣ ನೌಕೆಯನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಲಾಗಿತ್ತು. ಆದರೆ, ಚಂದ್ರನ ನೆಲಮುಟ್ಟುವಾಗ ವಿಕ್ರಮ್ ಲ್ಯಾಂಡರ್ ಸಂಪರ್ಕ ಕಡಿದುಕೊಂಡು, ಎರಡನೇ ಹಂತದ ಕಾರ್ಯಾಚರಣೆ ವಿಫಲವಾಗಿತ್ತು. ಆ ಕಾರ್ಯಾಚರಣೆಯಲ್ಲಿ ಎದುರಾಗಿದ್ದ ತೊಡಕುಗಳನ್ನು ನಿವಾರಿಸುವ ಕಾರ್ಯತಂತ್ರವನ್ನು ಚಂದ್ರಯಾನ–3ರಲ್ಲಿ ಅಳವಡಿಸಿಕೊಳ್ಳಲಾಗಿದೆ ಎಂದು ಇಸ್ರೊ ಹೇಳಿದೆ. ವಿಕ್ರಮ್ ನೌಕೆಯನ್ನು ಚಂದ್ರನ ಅಂಗಳದಲ್ಲಿ ಇಳಿಸುವಲ್ಲಿ ತೊಡಕುಗಳು ಎದುರಾದರೆ, ರೋವರ್ ಬಂಡಿಯನ್ನು ವಿಕ್ರಮ್‌ನಿಂದ ಹೊರಗೆ ಕಳುಹಿಸುವಲ್ಲಿ ತೊಂದರೆಗಳು ಎದುರಾದರೆ, ಏನು ಮಾಡಬೇಕು ಎಂಬುದನ್ನೂ ಪೂರ್ವನಿಗದಿ ಮಾಡಲಾಗಿದೆ ಎಂದು ಇಸ್ರೊ ಹೇಳಿದೆ.

ಚಂದ್ರಯಾನ–2ರಲ್ಲಿ ಚಂದ್ರನ ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಅನ್ನು ಇಳಿಸಲು ಇಸ್ರೊ ಯೋಜನೆ ಹಾಕಿಕೊಂಡಿತ್ತು. ಚಂದ್ರಯಾನ–3ರಲ್ಲೂ ದಕ್ಷಿಣ ಧ್ರುವದಲ್ಲೇ ಲ್ಯಾಂಡರ್ ಇಳಿಸಲಾಗುವುದು. ಚಂದ್ರನಲ್ಲಿ ಲ್ಯಾಂಡರ್ ಮತ್ತು ರೋವರ್‌ಗಳನ್ನು ಈಗಾಗಲೇ ಇಳಿಸಿರುವ ಅಮೆರಿಕ, ರಷ್ಯಾ ಮತ್ತು ಚೀನಾ ಉತ್ತರ ಧ್ರುವದಲ್ಲಿ ಆ ಕಾರ್ಯಾಚರಣೆ ನಡೆಸಿವೆ. ದಕ್ಷಿಣ ಧ್ರುವದಲ್ಲಿ ಲ್ಯಾಂಡರ್ ಅನ್ನು ಇಳಿಸುವಲ್ಲಿ ಮತ್ತು ರೋವರ್ ಅನ್ನು ಲ್ಯಾಂಡರ್ ಒಳಗಿಂದ ಹೊರಗೆ ಕಳುಹಿಸುವಲ್ಲಿ ಯಶಸ್ವಿಯಾದರೆ, ಭಾರತವು ಚಂದ್ರನ ದಕ್ಷಿಣ ಧ್ರುವದಲ್ಲಿ ಆ ಕಾರ್ಯಾಚರಣೆ ನಡೆಸಿದ ಮೊದಲ ದೇಶ ಎಂಬ ಹೆಗ್ಗಳಿಕೆಗೆ ಪಾತ್ರವಾಗಲಿದೆ. ಜತೆಗೆ, ಚಂದ್ರನ ಅಂಗಳದಲ್ಲಿ ಲ್ಯಾಂಡರ್ ಮತ್ತು ರೋವರ್ ಇಳಿಸಿದ ನಾಲ್ಕನೇ ದೇಶ ಎನಿಸಲಿದೆ.

ಬೇರೆ ದೇಶಗಳು ಈವರೆಗೆ ಚಂದ್ರನ ದಕ್ಷಿಣ ಧ್ರುವದಲ್ಲಿ ಇಂತಹ ಕಾರ್ಯಾಚರಣೆ ನಡೆಸದೇ ಇರುವುದೇ, ಆ ಕಾರ್ಯಾಚರಣೆಯ ಸಂಕೀರ್ಣತೆಯನ್ನು ತೋರಿಸುತ್ತದೆ. ಅಂತಹ ಮಹತ್ವದ ಕಾರ್ಯಾಚರಣೆಗೆ ಇಸ್ರೊ ಮುಂದಾಗಿದೆ. ಈ ಕಾರ್ಯಾಚರಣೆ ಯಶಸ್ವಿಯಾದರೆ, ಅಂತರಗ್ರಹ ಕಾರ್ಯಾಚರಣೆಗಳನ್ನು ನಡೆಸಲು ಇಸ್ರೊಗೆ ನೆರವಾಗಲಿದೆ.

ಲ್ಯಾಂಡಿಂಗ್: ಕ್ಲಿಷ್ಟ ಕಾರ್ಯಾಚರಣೆ

ವಿಕ್ರಮ್ ಲ್ಯಾಂಡರ್ ಅನ್ನು ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಸುವುದನ್ನು ಕ್ಲಿಷ್ಟ ಕಾರ್ಯಾಚರಣೆ ಎಂದು ಪರಿಗಣಿಸಲಾಗಿದೆ. ಪ್ರೊಪಲ್ಷನ್ ನೌಕೆಯಿಂದ ಲ್ಯಾಂಡರ್ ಹೇಗೆ ಬೇರ್ಪಡಬೇಕು, ಅದು ಚಂದ್ರನ ಅಂಗಳದಲ್ಲಿ ಹೇಗೆ ಇಳಿಯಬೇಕು ಮತ್ತು ರೋವರ್ ಹೇಗೆ ಹೊರಬರಬೇಕು ಎಂಬ ಹಲವು ಹಂತಗಳನ್ನು ಈ ಕಾರ್ಯಾಚರಣೆ ಒಳಗೊಂಡಿದೆ



ಒಂದು ಚಂದ್ರ ದಿನದ ಕಾರ್ಯಾಚರಣೆ

ವಿಕ್ರಮ್ ಲ್ಯಾಂಡರ್ ಚಂದ್ರನ ಅಂಗಳದಲ್ಲಿ ಇಳಿದ ನಂತರ, ಲ್ಯಾಂಡರ್ ಮತ್ತು ರೋವರ್ ನೌಕೆಗಳೆರಡೂ ಕಾರ್ಯಾಚರಣೆ ನಡೆಸುವ ಒಟ್ಟು ಅವಧಿ ಒಂದು ಚಂದ್ರ ದಿನ ಮಾತ್ರ. ಆದರೆ ಚಂದ್ರನಲ್ಲಿನ ಒಂದು ದಿನ, ಭೂಮಿಯಲ್ಲಿನ 14 ದಿನಗಳಿಗೆ ಸಮ.

ಈ ಅವಧಿಯಲ್ಲಿ ಎರಡೂ ನೌಕೆಗಳು ಹಲವು ಮಹತ್ವದ ಕಾರ್ಯಾಚರಣೆಗಳನ್ನು ನಡೆಸಲಿವೆ. ಈ ಕಾರ್ಯಾಚರಣೆಗಳನ್ನು ಭೂಮಿಯಲ್ಲಿನ ಉಪಗ್ರಹ ನಿಯಂತ್ರಣ ಕೇಂದ್ರದಿಂದ ನಿರ್ವಹಿಸಲಾಗುತ್ತದೆ. ಈ ಕಾರ್ಯಾಚರಣೆಗಳಲ್ಲಿ ನಡೆಸುವ ವೈಜ್ಞಾನಿಕ ಪರಿಶೀಲನೆಗಳು ಚಂದ್ರನ ಮೇಲ್ಮೈನಲ್ಲಿನ ಖನಿಜ ಸಂಪತ್ತು, ನೀರಿನ ಇರುವಿಕೆ, ಸೂಕ್ಷ್ಮಾಣು ಜೀವಿಗಳ ಬಗ್ಗೆ ಹೆಚ್ಚಿನ ಅರಿವಿಗೆ ಕಾರಣವಾಗಲಿದೆ.

ಆಧಾರ: ಇಸ್ರೊ, ಪಿಟಿಐ
ಚಿತ್ರಗಳು: ಇಸ್ರೊ
ವರದಿ ಮತ್ತು ಪರಿಕಲ್ಪನೆ: ಜಯಸಿಂಹ ಆರ್.
ಪ್ರಜಾವಾಣಿ ಗ್ರಾಫಿಕ್ಸ್: ಶಿಲ್ಪಾ ಕಬ್ಬಿಣಕಂತಿ

ಸಿನಿ ಬಿಟ್ಸ್

'ಬರ್ಬರಿಕ'ನ ಕಥೆ ತೆರೆಗೆ ಬರಲು ಸಿದ್ಧ

ಭೀಮನ ಮೊಮ್ಮಗ 'ಬರ್ಬರಿಕ'ನ ಹೆಸರನ್ನೇ ಶೀರ್ಷಿಕೆಯಾಗಿ ಹೊಂದಿರುವ ಸಿನಿಮಾವೊಂದು ತೆರೆಗೆ ಬರಲು ಅಣಿಯಾಗುತ್ತಿದೆ. ಘಟೋತ್ಕಚನ ಮಗನಿಗೆ ಸೋಲೆಂಬುದು ಇರುವುದಿಲ್ಲ. ಯುದ್ಧ ಗೆಲ್ಲುವ ಶಕ್ತಿ ಹೊಂದಿರುವ ಈತನ ಗುಣವೇ ಚಿತ್ರದ ನಾಯಕನಲ್ಲಿರುತ್ತದೆ. ಶಾಂಡಿಲ್ಯ ಕಥೆ ಬರೆದು, ನಿರ್ದೇಶನ ಮಾಡಿದ್ದಾರೆ. ಜನಾರ್ಧನ ಮೂವೀಸ್ ಬ್ಯಾನರ್ ಅಡಿಯಲ್ಲಿ ಪಿ.ಜನಾರ್ಧನ್ ನಿರ್ಮಿಸಿರುವ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಪೂರ್ಣಗೊಂಡಿದೆ.

'ಆಸ್ಪತ್ರೆ ಮತ್ತು ಶಿಕ್ಷಣ ವ್ಯವಸ್ಥೆಯ ಅಂಶಗಳನ್ನು ಕಥೆಯಲ್ಲಿ ತೆಗೆದುಕೊಳ್ಳಲಾಗಿದೆ. ದುಡ್ಡಿನ ಸಮಸ್ಯೆಯಿಂದ ಅನಿವಾರ್ಯವಾಗಿ ಕೊಲೆಗಾರನಾಗಿ, ಮುಂದೆ ಸರಣಿ ಹಂತಕನಾಗಿ, ನಂತರ ಬದುಕಿನಲ್ಲಿ ಬದಲಾಗುವ ಹುಡುಗನೊಬ್ಬನ ಕಥೆ' ಎಂದು ನಿರ್ದೇಶಕ ಶಾಂಡಿಲ್ಯ ಹೇಳಿದರು.

ಸ್ಕಂದ ಅಶೋಕ್ ಚಿತ್ರದ ನಾಯಕ. ಮಧ್ಯಮ ವರ್ಗದ ಹುಡುಗಿಯಾಗಿ ಕಾಣಿಸಿಕೊಂಡಿರುವ ಸಿರಿರಾಜು ನಾಯಕಿ. 'ಜೊತೆ ಜೊತೆಯಲಿ' ಧಾರಾವಾಹಿಯ ಬಿ.ಎಂ. ವೆಂಕಟೇಶ್ ಸಮಾಜ ಸೇವಕನ ಪಾತ್ರಕ್ಕೆ ಬಣ್ಣ ಹಚ್ಚಿದ್ದಾರೆ. ಬಲರಾಜವಾಡಿ, ಯುಮುನಾ ಶ್ರೀನಿಧಿ, ಚಿರಾಗ್, ಮಡಿವಾಳಯ್ಯ, ಕಾವ್ಯ ಪ್ರಕಾಶ್, ಶೈಲೇಶ್ ಮುಂತಾದವರಿದ್ದಾರೆ. ಎ.ಟಿ. ರವೀಶ್ ಸಂಗೀತ, ಕೆ.ವಿ.ಇಂದ್ರಜಿತ್ ಛಾಯಾಗ್ರಹಣ, ಉದಯ್ ಪಿ.ಆರ್. ಸಂಕಲನ ಈ ಚಿತ್ರಕ್ಕಿದೆ. ❖

ಸಿರಿರಾಜು

'ಮಧುರ ಕಾವ್ಯ'ಕ್ಕೆ ದೇವರಾಜ್ ಬೆಂಬಲ

ಆಯುರ್ವೇದ ಮತ್ತು ಅಲೋಪತಿ ವೈದ್ಯಕೀಯ ಪದ್ಧತಿ ಕುರಿತಾದ ಕಥೆ ಹೊಂದಿರುವ 'ಮಧುರ ಕಾವ್ಯ' ಚಿತ್ರ ಜುಲೈ 21ರಂದು ತೆರೆ ಕಾಣಲಿದೆ. ಚಿತ್ರದ ಟ್ರೇಲರ್ ಅನ್ನು ಹಿರಿಯ ನಟ ದೇವರಾಜ್ ಇತ್ತೀಚೆಗಷ್ಟೇ ಬಿಡುಗಡೆಗೊಳಿಸಿದರು.

'ಟ್ರೇಲರ್‌ನಲ್ಲಿ ತಂಡ ಕಥೆಯ ಎಳೆಯನ್ನು ಬಿಟ್ಟುಕೊಡದೆ ಕುತೂಹಲ ಕಾಯ್ದುಕೊಂಡಿದೆ. ಅಲೋಪತಿ ಕುರಿತು ನಂಬಿಕೆ ಕಡಿಮೆಯಾಗುತ್ತಿದೆ. ಕೋವಿಡ್ ಲಸಿಕೆ ಕುರಿತು ಜಗತ್ತಿನೆಲ್ಲೆಡೆ ನಡೆದ ಸಂಗತಿಗಳನ್ನು ನಾವು ನೋಡಿದ್ದೇವೆ. ಆಯುರ್ವೇದಕ್ಕೆ ಮೊರೆ ಹೋಗುತ್ತಿರುವವರ ಸಂಖ್ಯೆಯೂ ಹೆಚ್ಚುತ್ತಿದೆ. ನಾಟಿ ವೈದ್ಯ ಪದ್ಧತಿಯನ್ನು ನಂಬಿಕೊಂಡು ಬಂದ ಒಂದು ಇಡೀ ಕುಟುಂಬ ಒಟ್ಟಾಗಿ ಈ ಸಿನಿಮಾ ನಿರ್ಮಾಣ ಮಾಡಿರುವುದು ಖುಷಿಯ ವಿಷಯ. ಸಮಾಜಕ್ಕೆ ಸಂದೇಶ ಕೊಡಬೇಕು, ರೋಗಿಗಳಲ್ಲಿ ಜಾಗೃತಿ ಮೂಡಿಸಬೇಕೆಂಬ ಉದ್ದೇಶದಿಂದ ಮಾಡಿರುವ ಚಿತ್ರವನ್ನು ನಾವೆಲ್ಲ ಬೆಂಬಲಿಸಬೇಕು' ಎಂದು ದೇವರಾಜ್ ಹೇಳಿದರು.

ಚಿತ್ರದ ನಾಯಕ ಹಾಗೂ ನಿರ್ದೇಶಕ ಮಧುಸೂದನ್ ಮಾತನಾಡಿ, 'ಅಲೋಪತಿಯಲ್ಲಿ ರೋಗಿಗಳಿಗೆ ಧೈರ್ಯ ತುಂಬುವುದಕ್ಕಿಂತ ಹೆಚ್ಚಾಗಿ ಭಯಪಡಿಸುತ್ತಾರೆ. ಹಣಕ್ಕಾಗಿ ಔಷಧ ಕಂಪನಿಗಳು ಜನರಿಗೆ ಯಾವ ರೀತಿ ಮೋಸ ಮಾಡುತ್ತಿವೆ ಎಂಬುದನ್ನು ಚಿತ್ರದಲ್ಲಿ ಹೇಳಿದ್ದೇವೆ. ಕೆಲವಷ್ಟು ಅಲೋಪತಿ ಔಷಧಗಳಿಗೆ ಅಗತ್ಯ ರಾಸಾಯನಿಕಗಳನ್ನು ಗಿಡದಿಂದಲೇ ತೆಗೆಯಲಾಗುತ್ತದೆ. ನಾವು ನಾಟಿ ವೈದ್ಯಕೀಯ ಪದ್ಧತಿಯಲ್ಲಿ ಅದೇ ಗಿಡಮೂಲಿಕೆಯನ್ನು ಔಷಧವಾಗಿ ಕೊಡುತ್ತೇವೆ. ನಮ್ಮ ಆಹಾರ ಪದ್ಧತಿಗಿಂತ ಉತ್ತಮ ಔಷಧವಿಲ್ಲ. ಇದನ್ನು ಜನರಿಗೆ ಮನವರಿಕೆ ಮಾಡಿಕೊಡಲು ಈ ಸಿನಿಮಾ ನಿರ್ಮಿಸಿದ್ದೇವೆ' ಎಂದರು.

ಉಡುಪಿ, ಮಂಗಳೂರು, ಶಿರಸಿ ಸುತ್ತಮುತ್ತ ಚಿತ್ರೀಕರಣಗೊಂಡಿದೆ. ಸತೀಶ್ ಮೌರ್ಯ ಅವರ ಸಂಗೀತ ಈ ಚಿತ್ರಕ್ಕಿದೆ. ❖


ದೇವರಾಜ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಕಟ್ಟಡವೊಂದರಿಂದ ಹೊರಬೀಳುತ್ತಿರುವ ಕಾರುಗಳು ನೆಲಕ್ಕೆ ಅಪ್ಪಳಿಸಿ ಸ್ಫೋಟಗೊಳ್ಳುತ್ತಿರುವ ವಿಡಿಯೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ಫ್ರಾನ್ಸ್‌ನಲ್ಲಿ ನಡೆಯುತ್ತಿರುವ ದಂಗೆಯ ದೃಶ್ಯ ಎಂದೂ ಹೇಳಲಾಗುತ್ತಿದೆ. 'ಇದು ಯಾವುದೇ ಸಿನಿಮಾದ ದೃಶ್ಯವಲ್ಲ. ಇದು ನಡೆಯುತ್ತಿರುವುದು ಫ್ರಾನ್ಸ್‌ನಲ್ಲಿ. ಶಾಂತಿ ಪ್ರಿಯ ಜಿಹಾದಿಗಳು, ಭಯೋತ್ಪಾದಕರು ಈ ಕೃತ್ಯ ಎಸಗುತ್ತಿದ್ದಾರೆ. ದೇಶದಲ್ಲಿರಲು ಫ್ರಾನ್ಸ್ ಸರ್ಕಾರವೇ ಇವರಿಗೆ ಅನುಮತಿ ನೀಡಿದೆ. ಜಾತ್ಯತೀತ ಹಿಂದೂಗಳೇ ಒಂದು ವಿಷಯವನ್ನು ನೆನಪಿಟ್ಟುಕೊಳ್ಳಿ. ಫ್ರಾನ್ಸ್‌ನಲ್ಲಿ ಬಿಜೆಪಿ ಅಥವಾ ಆರ್‌ಎಸ್‌ಎಸ್‌ನವರು ಪಥಸಂಚಲನ ನಡೆಸುವುದಿಲ್ಲ, ಇಲ್ಲಿ ಶೋಭಾ ಯಾತ್ರೆಯೂ ನಡೆಯುವುದಿಲ್ಲ' ಎಂಬಂಥ ಸಾಲುಗಳೊಂದಿಗೆ ಈ ವಿಡಿಯೊವನ್ನು ಹಂಚಿಕೊಳ್ಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊದಲ್ಲಿರುವ ದೃಶ್ಯಗಳು ಹಾಲಿವುಡ್‌ನ ಪ್ರಸಿದ್ಧ ಸಿನಿಮಾ 'ಫಾಸ್ಟ್ ಆ್ಯಂಡ್ ಫ್ಯೂರಿಯಸ್–8'ರದ್ದಾಗಿದೆ. 'ಫಾಸ್ಟ್ ಆ್ಯಂಡ್ ಫ್ಯೂರಿಯಸ್–8 ಚಿತ್ರದ ಚಿತ್ರೀಕರಣ ನಡೆಯುತ್ತಿದೆ. ಊಹಿಸಿ, ನಿಮಗೆ ಚಿತ್ರೀಕರಣ ನಡೆಯುತ್ತಿರುವುದರ ಬಗ್ಗೆ ಅರಿವಿಲ್ಲ. ಆದರೆ, ತಕ್ಷಣದಲ್ಲಿ ನೀವು ಇದನ್ನು ನೋಡುತ್ತೀರಿ' ಎಂಬ ಕ್ಯಾಪ್ಷನ್‌ನೊಂದಿಗೆ ಹಾಲಿವುಡ್ ನಿರ್ಮಾಪಕ ಜಸ್ಟಿನ್ ಕಿಂಗ್ ಅವರು 2016ರಲ್ಲಿ ಜೂನ್ 3ರಂದು ಈ ವಿಡಿಯೊವನ್ನು ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದರು. ಆದ್ದರಿಂದ, ಈ ದೃಶ್ಯಗಳು ಸಿನಿಮಾವೊಂದರ ದೃಶ್ಯಗಳಾಗಿದ್ದು, ಇದು ಮುಸ್ಲಿಮರು ಮಾಡುತ್ತಿರುವುದು ಅಲ್ಲ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಏಕಾಂತದ ಅವಶ್ಯಕತೆ

ತೊಲಗು ನಿರ್ಜನದೆಡೆಗೆ; ತೊಲಗು ಮಸಣದ ಕಡೆಗೆ |
ಒಲವ ಬೇಡಿಸದೆಡೆಗೆ; ಅಳುವು ಬರದೆಡೆಗೆ ||
ವಿಲಯವಾಗಿಸಿ ಮನವನ್, ಅಲುಗಾಡಿಸದೆ ತುಟಿಯ
ತೊಲಗಿ ಮಲಗಲ್ಲಿ ನೀಂ – ಮಂಕುತಿಮ್ಮ || 927 |

ಪದ-ಅರ್ಥ: ನಿರ್ಜನದೆಡೆಗೆ = ನಿರ್ಜನದ(ಯಾರಿಲ್ಲದ) + ಕಡೆಗೆ, ಬೇಡಿಸದೆಡೆಗೆ = ಬೇಡಿಸದ + ಎಡೆಗೆ, ವಿಲಯವಾಗಿಸಿ = ಇಲ್ಲವಾಗಿಸಿ.

ವಾಚ್ಯಾರ್ಥ: ನೀನು ಯಾರಿಲ್ಲದ ನಿರ್ಜನ ಪ್ರದೇಶಕ್ಕೆ ಹೋಗು, ಮಸಣದ ಕಡೆಗೆ ನಡೆ, ನಿನ್ನಿಂದ ಒಲವನ್ನು ಬೇಡಿಸದ ಕಡೆಗೆ, ನೋವು ಕಾಣದ ಕಡೆಗೆ, ಮನಸ್ಸನ್ನು ಇಲ್ಲವಾಗಿಸಿಕೊಂಡು, ಮೌನದಿಂದ ತೊಲಗಿ ಮಲಗು.

ವಿವರಣೆ: ಬಾಲ್ಯದಲ್ಲಿ ಶಿಕ್ಷಣ, ಯೌವನದಲ್ಲಿ ಸಂಸಾರ, ವೃದ್ಧಾಪ್ಯದಲ್ಲಿ ಮುನಿವೃತ್ತಿ, ಮತ್ತು ಕೊನೆಗೆ ಯೋಗಿಗಳ ಹಾಗೆ ಜೀವನ ಸಮಾಪ್ತಿಯಾಗಬೇಕೆಂದು ಸುಭಾಷಿತ ಹೇಳುತ್ತದೆ. ಜೀವನದಲ್ಲಿ ಸಂತೃಪ್ತಿಯನ್ನು ಹೊಂದಿಯೋ, ನೋವಿನಲ್ಲಿ ಬೆಂದೋ, ಕೊನೆಗೊಂದು ಹಂತ ಬರುತ್ತದೆ. ಆಗ ಮನಸ್ಸು ಅಂತರ್ಮುಖವಾಗುತ್ತದೆ, ಬಾಹ್ಯ ಪ್ರಪಂಚದ ಗೊಡವೆ ಸಾಕು, ಏಕಾಂತ ಬೇಕು ಎನ್ನಿಸುತ್ತದೆ. ಒಂಟಿತನಕ್ಕೂ, ಏಕಾಂತಕ್ಕೂ ವ್ಯತ್ಯಾಸವಿದೆ. ಒಂಟಿತನ ಒಂದು ಕೊರತೆ. ಆ ಸ್ಥಿತಿ, ಮತ್ತೊಬ್ಬರಿಗಾಗಿ, ಪ್ರಪಂಚದ ನಂಟಿಗಾಗಿ ಹಾತೊರೆಯುತ್ತದೆ. ಅದು ದೊರೆಯದಾದಾಗ ಮನಸ್ಸು ಖಿನ್ನವಾಗುತ್ತದೆ. ಸಂಪರ್ಕದ ಅಲಭ್ಯತೆಯೇ ಒಂಟಿತನ. ಆದರೆ ಏಕಾಂತ, ಲೋಕಸಂಪರ್ಕವನ್ನು ಬೇಡವೆನ್ನುತ್ತದೆ. ಇದು ಸ್ವಯಂ ಅಪೇಕ್ಷೆ. ಇದು ಸಂಪರ್ಕದ ಅಲಭ್ಯತೆಯಿಂದ ಆದದ್ದಲ್ಲ. ಸಂಪರ್ಕ ಬೇಡವೆಂದು ಆತ್ಮಸಾಂಗತ್ಯಕ್ಕೆ ಎಳಸುತ್ತದೆ. ಅದು ಬಾಹ್ಯ ಪ್ರಪಂಚದ ಹಂಗನ್ನು ನಗಣ್ಯಗೊಳಿಸುತ್ತದೆ. ಅದು ನನ್ನನ್ನು ನಾನೇ ನೋಡಿಕೊಳ್ಳುವ, ವಿಮರ್ಶಿಸಿಕೊಳ್ಳುವ, ಅರ್ಥಮಾಡಿಕೊಳ್ಳುವ ಪ್ರಕ್ರಿಯೆ. ಅಂಥ ಕ್ರಿಯೆಯ ಕಡೆಗೆ ಮನಸ್ಸು ತಿರುಗಲಿ ಎಂದು ಈ ಕಗ್ಗ ಆಶಿಸುತ್ತದೆ. ಸಾಕು, ಇದುವರೆಗೂ ಪ್ರಪಂಚದ ಕೋಲಾಹಲದಲ್ಲಿ ಬದುಕಿ ಹೋರಾಡಿದ್ದು ಸಾಕು. ಇನ್ನು ಜನರಿಂದ ದೂರ ಸಾಗು. ಮಸಣದ ಕಡೆಗೆ ಸಾಗು ಎಂದರೆ ನಿನ್ನ ಅಪೇಕ್ಷೆಗಳನ್ನೆಲ್ಲ ಸುಟ್ಟು ಹಾಕು, ಮುಚ್ಚಿ ಬಿಡು. ಇಷ್ಟಾದರೆ ಸಾಲದು. ಒಲವ ಬೇಡಿಸದೆಡೆಗೆ ನಡೆ ಎನ್ನುತ್ತದೆ. ನಮ್ಮ ಸಂಬಂಧಗಳು ನಿಜವಾಗಿ ಬಂಧಗಳು. ಮೋಹದಿಂದ ನಮ್ಮನ್ನು ಕಟ್ಟಿ ಎಳೆಯುತ್ತವೆ. ಮತ್ತೆ ಪ್ರಪಂಚದ ಮೆರುಗಿಗೆ ಸೆಳೆಯುತ್ತವೆ. ಅವುಗಳನ್ನು ಮೀರಲು ಒಲವು ಮೂಡುವ ಸ್ಥಾನಗಳನ್ನು ಬಿಟ್ಟು ನಡೆ. ಮೋಹ ಬಿಗಿಯಾದಾಗ, ಅದನ್ನು ತ್ಯಜಿಸಬೇಕಾದಾಗ ನೋವಾಗುತ್ತದೆ. ಎಲ್ಲ ಒಲವಿನ ಸ್ಥಾನಗಳೂ ನೋವಿನ ಸ್ಥಾನಗಳೇ. ಅವೆರಡನ್ನೂ ಬಿಡು ಎನ್ನುತ್ತದೆ ಕಗ್ಗ. ಇವೆಲ್ಲವಾದ ನಂತರ ಬರುವುದು ಮುಖ್ಯವಾದ ಮತ್ತು ಕಷ್ಟಸಾಧ್ಯವಾದ ಕಾರ್ಯ. ಅದು ಮನಸ್ಸನ್ನು ಇಲ್ಲವಾಗಿಸುವುದು. ಉಸಿರಾಟದ ನಂತರ ಎಡೆಬಿಡದೆ ಕೊನೆಯ ಕ್ಷಣದವರೆಗೆ ನಮ್ಮೊಂದಿಗಿರುವುದು ಮನಸ್ಸು. ಎಲ್ಲ ವಿಜಯಗಳಿಗೆ, ವೈಫಲ್ಯಗಳಿಗೆ, ನೋವುಗಳಿಗೆ ಮನಸ್ಸೇ ಕಾರಣ. ಅದರ ಹೊಯ್ದಾಟವನ್ನು ನಿಲ್ಲಿಸಲು ಪ್ರಯತ್ನಿಸಬೇಕು. ನಂತರ ಅದೊಂದು ಸಾಧನೆ ಎಂದು ಘೋಷಿಸುತ್ತ ಬಾಯಿಬಡುಕತನ ಪ್ರದರ್ಶಿಸಬೇಡ. ದೂರ ಹೋಗಿ ಶಾಂತತೆಯನ್ನು ಪಡೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಜುಲೈ 14, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಆಷಾಢ ಕೃಷ್ಣ ದ್ವಾದಶಿ ಗಂ. 19-18, ನಕ್ಷತ್ರ: ರೋಹಿಣಿ ಗಂ. 22-27 ಯೋಗ: ಗಂಡ ಗಂ. 08-27 ಕರಣ: ಕೌಲವ ಗಂ. 06-48, ಮಿಥುನ ಮಾಸದ 29 ನೇ ದಿನ, ಮಳೆನಕ್ಷತ್ರ: ಪುನರ್ವಸು 3.
ರಾಹುಕಾಲ : ಬೆಳಿಗ್ಗೆ 10-30 - 12-00
ಸೂರ್ಯೋದಯ : 06-15 ಸೂರ್ಯಾಸ್ತ : 06-58
ಮುಸ್ಲಿಂ ದಿನಾಂಕ : 25 ಜುಲ್‌ಹಿಜಾ
ಅದೃಷ್ಟ ಸಂಖ್ಯೆ : 9, 6

ಮೇಷ: ಪ್ರತಿಭೆಗೆ ಅನುಗುಣವಾದ ಉದ್ಯೋಗ ಅವಕಾಶ ದೊರೆತು ಸಂತಸವಾಗಲಿದೆ. ಸಂಜೆಯ ಸಮಯದಲ್ಲಿ ವಿಹಾರಕ್ಕೆ ತೆರಳುವಂತೆ ಆಗುವುದು. ಮನೆಯಲ್ಲಿ ಶುಭ ಕಾರ್ಯಗಳ ತಯಾರಿ ಉತ್ತಮ ರೀತಿಯಲ್ಲಿ ನಡೆಯುವುದು.

ವೃಷಭ: ಅದೃಷ್ಟವು ಚೆನ್ನಾಗಿರುವ ಕಾರಣ ಬಂದ ಅವಕಾಶಗಳನ್ನು ಸದುಪಯೋಗಿಸಿಕೊಂಡಲ್ಲಿ ವ್ಯಾಪಾರ ವ್ಯವಹಾರದಲ್ಲಿ ಅಧಿಕ ಲಾಭ ಕಾಣಬಹುದು. ಉದ್ಯೋಗಸ್ಥರಿಗೆ ಬಡ್ತಿ ದೊರೆತು ಉತ್ತಮ ಫಲ ದೊರೆಯಲಿದೆ.

ಮಿಥುನ: ಹಿರಿಯರನ್ನು ತೀರ್ಥಯಾತ್ರೆಗೆ ಕಳುಹಿಸುವ ಬಗ್ಗೆ ತೀರ್ಮಾನವನ್ನು ತೆಗೆದುಕೊಳ್ಳಿ. ಕಾಗದದ ಉದ್ಯಮದವರಿಗೆ ಲಾಭ ಇರುವುದು. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಗಮನವಹಿಸುವುದರಿಂದ ಯಶಸ್ಸು.

ಕರ್ಕಾಟಕ: ಸ್ನೇಹಿತರ ಹಾಗೂ ಬಂಧುಗಳ ಸಹಕಾರದಿಂದ ವ್ಯಾಪಾರ ವಹಿವಾಟು ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಆರೋಗ್ಯದಲ್ಲಿ ಸುಧಾರಣೆ ಕಂಡು ಬರುವುದು. ಭಿನ್ನಾಭಿಪ್ರಾಯಗಳು ದೂರಾಗುವವು.

ಸಿಂಹ: ಖಾಸಗಿ ಸಂಸ್ಥೆಯಿಂದ ಅಥವಾ ಒಬ್ಬ ವ್ಯಕ್ತಿಯಿಂದ ಸಾಲದ ರೂಪದಲ್ಲಿ ಹಣ ಪಡೆದುಕೊಂಡು ಸ್ವಂತ ಉದ್ಯಮ ಆರಂಭಿಸುವ ಸಂಭವವಿದೆ. ಈ ಬಾರಿ ಅವಕಾಶವನ್ನು ಸದುಪಯೋಗಿಸಿಕೊಳ್ಳಿ. ಕೆಂಪು ಶುಭ ತರುವುದು.

ಕನ್ಯಾ: ನಿರುದ್ಯೋಗಿಗಳಿಗೆ ಜೀವನ ನಿರ್ವಹಿಸಲು ಸಾಕಾಗುವಂಥ ವರಮಾನವಿರುವ ಸಣ್ಣಮಟ್ಟದ ಕೆಲಸ ದೊರೆತು ಸಂತಸವಾಗಲಿದೆ. ಏಜೆನ್ಸಿಯೊಂದನ್ನು ಪ್ರಾರಂಭಿಸುವವರಿಗೆ ಸಕಾಲ. ಆದಾಯ ನಿರೀಕ್ಷಿಸಬಹುದು.

ತುಲಾ: ಆದಾಯ ಅಧಿಕವಾಗಿ ಇದ್ದರೂ ಖರ್ಚಿಗೆ ಬೇಕಾದ ಸಂದರ್ಭದಲ್ಲಿ ಅದು ಕೈಗೆ ಎಟುಕದೇ ಇರುವಂಥ ಪರಿಸ್ಥಿತಿ ಉಂಟಾಗುತ್ತದೆ. ಉತ್ತಮ ಕಾರ್ಯಗಳಿಗೆ ಎಂದಿನಂತೆ ಶ್ಲಾಘನೆ ಸಿಗುತ್ತದೆ.

ವೃಶ್ಚಿಕ: ಅನಾರೋಗ್ಯ ಅಥವಾ ಇನ್ನಿತರ ಕಾರಣಗಳಿಂದ ಏರುಪೇರಾಗಿದ್ದ ಮಕ್ಕಳ ವೇಳಾಪಟ್ಟಿಯು ನಿಧಾನವಾಗಿ ಸರಿಯಾಗುತ್ತದೆ. ಜಾನುವಾರುಗಳು ಮಾಡಿದ ತಪ್ಪಿಗೆ ಅವುಗಳನ್ನು ದಂಡಿಸುವುದನ್ನು ಮಾಡದಿರಿ.

ಧನು: ಶಕ್ತಿಗೂ ಮೀರಿ ಮಾಡಿದ ಕೆಲಸಗಳಿಂದಾಗಿ ದೈಹಿಕ ಆಯಾಸ ಉಂಟಾಗಬಹುದು. ಸುಖಕರವಾಗಿರುವ ದಾಂಪತ್ಯದಲ್ಲಿ ಬೇರೆಯವರ ಹುಳಿ ಮಾತಿಗೆ ಆಸ್ಪದ ಕೊಟ್ಟು ಮೋಸ ಹೋಗುವುದು ಬೇಡ.

ಮಕರ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸನ್ನು ಹೊಂದುವ ಲಕ್ಷಣ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಬರಬಹುದು. ವೀರಾಂಜನೇಯನಿಗೆ ಜೇನುತುಪ್ಪ ಅಭಿಷೇಕ ಮಾಡಿ, ವ್ಯಾಧಿ ದೂರವಾಗುತ್ತದೆ.

ಕುಂಭ: ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು. ಉನ್ನತ ಓದಿನೆಡೆಗೆ ಗಮನ ನೀಡಬೇಕಾಗುವುದು. ಆಹಾರ ಸೇವನೆಯ ವಿಷಯದಲ್ಲಿ ಆದಷ್ಟು ಜಾಗ್ರತರಾಗಿರಿ.

ಮೀನ: ಸಂತೋಷದ ಸುದ್ದಿ ತಿಳಿಸಿ ದುಃಖದ ವಿಷಯವನ್ನು ತಿಳಿಸದಿರುವುದು ನಿಮ್ಮ ಪ್ರವೃತ್ತಿಗೆ ಸರಿ ಎನ್ನಿಸುವುದಿಲ್ಲ. ಮುತ್ತು ರತ್ನದ ವ್ಯಾಪರಿಗಳಿಗೆ ಉತ್ತಮ ವ್ಯಾಪಾರ. ಕಫದಿಂದ ತೊಂದರೆಯಗಬಹುದು.

ಪದಬಂಧ 5379

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಒಪ್ಪವಾಗಿ ಮಾಡಿದ ತರ್ಜುಮೆ (4)
3.ರಾಯರಿಗೆ ಅಬಾರಿಯಾಗಿರುವ ರಾಜಪ್ರತಿನಿಧಿ (4)
5.ಮಣಿ ಧರಿಸಿರುವ ಚಲುವೆ (3)
6.ಯಮನ ಬಳಿ ಕಳೆದ ಕಾಲ (3)
8.ನಗರದಲ್ಲಿ ಕೇಳಿಸಿದ ಚರ್ಮ ವಾದ್ಯ (3)
9.ವರ ನೀಡಿರುವ ವಿಸ್ತಾರ ಹೇಳಿಕೆ (3)
10.ಹೆಚ್ಚು ಪದದ ವಿರುದ್ಧಪದ (3)
12.ಜಲದೊಳಗೆ ಇಷ್ಟು ಸಂಕೀರ್ಣ! (3)
14.ಶಾಂತಿ ಈ ರೀತಿ ಬಂದಿದೆ (4)
15.ನವ ಜೀವನವಿದು (4)

ಮೇಲಿಂದ ಕೆಳಕ್ಕೆ
1.ಅರಸುತ್ತಿದ್ದಾಗ ಸಿಕ್ಕ ರಾಜ (3)
2.ದರಬಾರಿನಲ್ಲಿ ಹೇಳಿದ ಬೆಲೆ (2)
3.ರಾಜನ ಹೆಂಡತಿ (2)
4.ತಿರುವುಮುರುವಾದರೂ ಇದು ದುರಸ್ತಿ! (3)
7.ಯಮನ ಆಳು (5)
8.ನಯವಾದ ಮಾತಿನಲ್ಲೇ ಮೋಸ ಮಾಡಿದವ (5)
9.ಸರಸದ ವಿರುದ್ಧ ಪದ (3)
11.ದುರುಳನ ಮಸ್ತಿಷ್ಕ! (3)
12.ಜವಾನನ ಹತ್ತಿರ ನೆರೆದ ಮಂದಿ (2)
13.ಬೆಳೆ ಬೆಳೆಯುವ ಭೂಮಿ ಉಲ್ಟಾ ಕಾಣುತ್ತಿದೆಯಲ್ಲಾ? (2)

1			2	■	3			4
	■	■	5			■	■	
6		7	■	■	■	8		
■	■		■	■	■		■	■
■	■		■	■	■		■	■
■	■		■	■	■		■	■
9			■	■	■	10		11
	■	■	12		13	■	■	
14				■	15			

5378ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಡಿಪಾಯ 3.ಆಯವ್ಯಯ
5.ಮಡದಿ 6.ಮರುಳ
7.ಗಹನ 9.ತಲ್ಲೀನ
11.ವಿರಾಮ 12.ಮಸೂರ
14.ಯಮಸುತ
15.ವಿನಾಯಕ

ಮೇಲಿಂದ ಕೆಳಕ್ಕೆ
1.ಅನುರಾಗ 2.ಯಮ
3.ಆದಿ 4.ಯಮಳ
6.ಮಡಿವಂತ 8.ನವಸುಮ
10.ನಳಪಾಕ 11.ವಿದಾಯ
12.ಮತ 13.ರವಿ

ಸುಡೊಕು 5765

		5	8			4	1	
2								
		4			2	8		6
3		6			8	5		9
	7						8	
8		1				3		7
4			6		1		9	
	3				5	7		8
6		8	2	3			5	

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5764 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಬೈಜುಸ್ ಸಲಹಾ ಮಂಡಳಿಗೆ ಪೈ

ಬೆಂಗಳೂರು: ಹೂಡಿಕೆದಾರ ಟಿ.ವಿ. ಮೋಹನದಾಸ್ ಪೈ ಹಾಗೂ ಎಸ್‌ಬಿಐ ಮಾಜಿ ಅಧ್ಯಕ್ಷ ರಜನೀಶ್ ಕುಮಾರ್ ಅವರು ಬೈಜುಸ್ ಕಂಪನಿಯ ಸಲಹಾ ಮಂಡಳಿಯನ್ನು ಸೇರಲಿದ್ದಾರೆ.

ಬೈಜುಸ್‌ನ ಆಡಳಿತ ಮಂಡಳಿಗೆ ಮತ್ತು ಸಿಇಒ ಬೈಜು ರವೀಂದ್ರನ್ ಅವರಿಗೆ ಮಹತ್ವದ ವಿಚಾರಗಳಲ್ಲಿ, ಮಾರ್ಗದರ್ಶನ ಮಾಡಲಿದೆ ಎಂದು ಕಂಪನಿಯ ಪ್ರಕಟಣೆ ತಿಳಿಸಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,384
ಇಂದಿನ ಅಂತ್ಯ	19,413
▲	29
ದಿನದ ಗರಿಷ್ಠ	19,567

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹490
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹490

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1740 (1715)
ಸೋಯಾ (ರಿಫೈನ್ಡ್)	₹945 (950)
ಸೂರ್ಯಕಾಂತಿ (ರಿಫೈನ್ಡ್)	₹945 (950)
ಪಾಮೋಲಿನ್	₹857 (863)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹223-439
ದ್ವಿತಳಿ (ಬಿ.ವಿ)	₹285-573

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1200-1400
ಮಧ್ಯಮ	₹1000-1200
ಸಣ್ಣ	₹800-1000

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೂರನೇ ವರ್ಷದ ಪುಣ್ಯಸ್ಮರಣೆ

ಶ್ರೀಕಂಠಯ್ಯನವರು
ನಿಧನ: 14.07.2020
ಶ್ರೀಭಾಗ್ಯಲಕ್ಷ್ಮೀ ಫೈನಾನ್ಸ್ (ರಿ),
ಹೊಸಗುಡ್ಡದಹಳ್ಳಿ, ಬೆಂಗಳೂರು-26
ನೀವು ನಮ್ಮನಗಲಿ ಇಂದಿಗೆ 03 ವರ್ಷಗಳು ಕಳೆದರೂ ನಿಮ್ಮ, ಸ್ಪೂರ್ತಿ, ಪ್ರೀತಿ, ಆದರ್ಶಗಳೇ ನಮಗೆ ಮಾರ್ಗದಶಕವಾಗಿವೆ. ನೀವಿರುವಿರಿ ಎಂದೆಂದಿಗೂ ಸದಾ ನಮ್ಮ ಮನಸುಗಳಲ್ಲಿ...
ಸದಾ ನಿಮ್ಮ ನೆನಪಿನಲ್ಲಿರುವ:
ಧರ್ಮಪತ್ನಿ- ಶ್ರೀಮತಿ ಸರೋಜಮ್ಮ ಮತ್ತು ಮಗನಾದ ಎಸ್. ಅನಿಲ್‌ಕುಮಾರ್ ಮತ್ತು ಕುಟುಂಬದವರು ಹಾಗೂ ಬಂಧು-ಮಿತ್ರರು.

22ನೇ ವರ್ಷದ ಚಿರಸ್ಮರಣೆ



ಶ್ರೀ ಎಂ. ಅಣ್ಣಯ್ಯ ರೆಡ್ಡಿ
ನಿಧನ: 14.07.2001
"ನೀವು ನಮ್ಮನ್ನಗಲಿ ಇಂದಿಗೆ 22 ವರ್ಷವಾದರೂ ನೀವು ನಮ್ಮ ಮನೆ ಮತ್ತು ಮನದಲ್ಲಿ ಹಚ್ಚಿದ ಹಣತೆಯಂತೆ ದಾರಿ ದೀಪವಾಗಿದ್ದೀರಿ. ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತಾ
ಸದಾ ನಿಮ್ಮ ನೆನಪಿನಲ್ಲಿರುವ
ಜಯಮ್ಮ ಅಣ್ಣಯ್ಯ ರೆಡ್ಡಿ, ಮಕ್ಕಳು ಮತ್ತು ಕುಟುಂಬ ವರ್ಗದವರು

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಮತಿ ಸುಶೀಲಮ್ಮ
ಬಿ. ನಾರಾಯಣಪುರ
ನಿಧನ: 13-07-2023
ಇಂತಿ ದುಃಖತಪ್ತರು:
ಎಂ. ನಾರಾಯಣ(ಪತಿ)
ದೀಪಾ ಮತ್ತು ದೊರೈರಾಜ್ ಇ.(ಮಗಳು ಮತ್ತು ಅಳಿಯ)
ವಿನಾಯಕ ದತ್ತ ಮತ್ತು ಲಾವಣ್ಯ (ಮಗ ಮತ್ತು ಸೊಸೆ)
ಅಭಿಷೇಕ್ ಡಿ, ಹರ್ಷಿತ ಡಿ, ಅಕ್ಷರ ದತ್ತ, ಅಗಸ್ತ್ಯ ದತ್ತ ಶ್ರೀರಾಮ್ ಮತ್ತು ಲಲಿತ (ಮೊಮ್ಮಕ್ಕಳು)
ಹಾಗೂ ಕುಟುಂಬ ವರ್ಗದವರು

LOOKING TO BUILD, BUY OR SELL A PROPERTY
Please refer Classifieds on Sunday

ತಿಂಡಿ, ಪಾನೀಯ ಬೆಲೆ ತಗ್ಗಿಸಿದ ಪಿವಿಆರ್ ಐನಾಕ್ಸ್

ನವದೆಹಲಿ (ಪಿಟಿಐ): ಮಲ್ಟಿಪ್ಲೆಕ್ಸ್ ಕಂಪನಿ ಪಿವಿಆರ್ ಐನಾಕ್ಸ್ ತಿಂಡಿ–ತಿನಿಸು ಹಾಗೂ ಪಾನೀಯಗಳ ಬೆಲೆಯನ್ನು ಶೇಕಡ 40ರವರೆಗೆ ಇಳಿಕೆ ಮಾಡಿದೆ. ತಿಂಡಿ ಹಾಗೂ ಪಾನೀಯಗಳಿಗೆ ನಿಗದಿ ಮಾಡಿರುವ ಬೆಲೆ ದುಬಾರಿ ಎಂದು ಸಾಮಾಜಿಕ ಜಾಲತಾಣಗಳ ಬಳಕೆದಾರರು ಟೀಕಿಸಿದ ನಂತರ ಈ ತೀರ್ಮಾನ ಕೈಗೊಂಡಿದೆ.

ಪಿವಿಆರ್ ಐನಾಕ್ಸ್‌ನಲ್ಲಿ ಸೋಮವಾರದಿಂದ ಗುರುವಾರದವರೆಗೆ ಬೆಳಿಗ್ಗೆ 9 ಗಂಟೆಯಿಂದ ಸಂಜೆ 6 ಗಂಟೆಯ ನಡುವೆ ಕಾಂಬೊ ತಿನಿಸು, ಪಾನೀಯಗಳು ₹99 ಆರಂಭಿಕ ಬೆಲೆಗೆ ಲಭ್ಯವಾಗಲಿವೆ. ತಿಂಡಿ–ತಿನಿಸು ಹಾಗೂ ಪಾನೀಯಗಳ ಬೆಲೆಯನ್ನು ಶೇಕಡ 40ರವರೆಗೆ ಕಡಿಮೆ ಮಾಡಲಾಗಿದೆ ಎಂದು ಪಿವಿಆರ್ ಐನಾಕ್ಸ್ ಹೇಳಿಕೆ ತಿಳಿಸಿದೆ.

ಕಂಪನಿಯು ನಡೆಸುವ ಐಷಾರಾಮಿ ಸಿನಿಮಾ ಮಲ್ಟಿಪ್ಲೆಕ್ಸ್‌ಗಳಿಗೆ ಇದು ಅನ್ವಯವಾಗುವುದಿಲ್ಲ.

ಸಾಮಾಜಿಕ ಜಾಲತಾಣ ಬಳಕೆದಾರರೊಬ್ಬರು ಪಿವಿಆರ್ ಐನಾಕ್ಸ್‌ನಲ್ಲಿ ನಿಗದಿ ಮಾಡಿರುವ ಬೆಲೆಯು ಭಾರಿ ದುಬಾರಿ ಎಂದು ದೂರಿದ್ದರು. '55 ಗ್ರಾಂ ಚೀಸ್ ಪಾಪ್‌ಕಾರ್ನ್‌ಗೆ ₹460, 600 ಎಂ.ಎಲ್. ಪೆಪ್ಸಿಗೆ ₹360. ನೊಯಿಡಾದ ಪಿವಿಆರ್ ಸಿನಿಮಾಸ್‌ನಲ್ಲಿ ಇದರ ಮೊತ್ತ ₹820. ಅಂದರೆ ಇದು ಪ್ರೈಮ್ ವಿಡಿಯೊದ ವಾರ್ಷಿಕ ಚಂದಾ ಮೊತ್ತಕ್ಕೆ ಬಹುತೇಕ ಸರಿಹೊಂದುತ್ತದೆ. ಜನ ಸಿನಿಮಾ ವೀಕ್ಷಿಸಲು ಸಿನಿಮಾ ಮಂದಿರಗಳಿಗೆ ಹೋಗದೆ ಇರುವುದರಲ್ಲಿ ಆಶ್ಚರ್ಯ ಮೂಡಿಸುವಂಥದ್ದು ಏನೂ ಇಲ್ಲ. ಕುಟುಂಬದ ಜೊತೆ ಸಿನಿಮಾ ವೀಕ್ಷಿಸುವುದು ಕೈಗೆಟುಕದಂತೆ ಆಗಿದೆ' ಎಂದು ಟ್ವಿಟರ್ ಬಳಕೆದಾರರೊಬ್ಬರು ದೂರಿದ್ದರು. ಈ ಟ್ವೀಟ್ ಹತ್ತು ದಿನಗಳ ಬಳಿಕ ವೈರಲ್ ಆಯಿತು.

'ತಿಂಡಿ, ಪಾನೀಯಗಳಿಗೆ ನಿಗದಿ ಮಾಡುವ ಬೆಲೆಯ ವಿಚಾರದಲ್ಲಿ ಗ್ರಾಹಕರ ಆಲೋಚನೆಗಳಿಗೆ ನಾವು ಯಾವಾಗಲೂ ಕಿವಿಗೊಡುತ್ತಿದ್ದೇವೆ' ಎಂದು ಪಿವಿಆರ್ ಐನಾಕ್ಸ್‌ನ ಕಾರ್ಯನಿರ್ವಾಹಕ ನಿರ್ದೇಶಕ ಸಂಜೀವ್ ಕುಮಾರ್ ಬಿಜ್ಲಿ ಹೇಳಿದ್ದಾರೆ.

'ಮಹಿಳಾ ಸಮ್ಮಾನ್' ಆರಂಭಿಸಿದ ಬ್ಯಾಂಕ್ ಆಫ್ ಬರೋಡಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾ ತಾನು 'ಮಹಿಳಾ ಸಮ್ಮಾನ್ ಉಳಿತಾಯ ಪತ್ರ' (ಎಂಎಸ್‌ಎಸ್‌ಸಿ) ಯೋಜನೆಯನ್ನು ಆರಂಭಿಸಿರುವುದಾಗಿ ಹೇಳಿದೆ. ಇದು ಕೇಂದ್ರ ಸರ್ಕಾರವು ಮಹಿಳೆಯರಲ್ಲಿ ಉಳಿತಾಯ ಪ್ರವೃತ್ತಿಯನ್ನು ಇನ್ನಷ್ಟು ಹೆಚ್ಚಿಸುವ ಉದ್ದೇಶದಿಂದ ಆರಂಭಿಸಿರುವ ಯೋಜನೆ.

ಈ ಯೋಜನೆಯ ಅಡಿಯಲ್ಲಿ, ಮಹಿಳೆಯರು ಎರಡು ವರ್ಷಗಳವರೆಗೆ ಹಣ ಠೇವಣಿ ಇರಿಸಬಹುದು. ಇದಕ್ಕೆ ವಾರ್ಷಿಕ ಶೇಕಡ 7.5ರಷ್ಟು ಬಡ್ಡಿ ನೀಡಲಾಗುತ್ತದೆ. ಈ ಯೋಜನೆಯನ್ನು ಕೇಂದ್ರವು ಬಜೆಟ್‌ನಲ್ಲಿ ಘೋಷಿಸಿದೆ.

2025ರ ಮಾರ್ಚ್ 31ರವರೆಗೆ ಯೋಜನೆಯು ಚಾಲ್ತಿಯಲ್ಲಿ ಇರುತ್ತದೆ. 'ನಮ್ಮ ಹಾಲಿ ಗ್ರಾಹಕರು ಹಾಗೂ ಗ್ರಾಹಕರಲ್ಲದೇ ಇರುವವರು ಈ ಯೋಜನೆಯ ಅಡಿಯಲ್ಲಿ ಖಾತೆ ತೆರೆಯಬಹುದು' ಎಂದು ಬ್ಯಾಂಕ್ ಆಫ್ ಬರೋಡಾ ಹೇಳಿದೆ.

ಮುಂಬೈ ಧಾರಣೆ

ಶೇಂಗಾ

13-7-2023

ಜಾವಾ 70/80(ಹೊಸ)	12500-12600
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	12000-12100
ದಪ್ಪ ಗುಜರಾತ್(ಹೊಸ)	12800-12900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1750 (1725)
ಒಂದು ವಾರದ ಡೆಲಿವರಿ	1745 (1720)
ಸೋಯಾ ಕಚ್ಚಾ	880 (887)
ಪಾಮ್ ವಾರದ ಡೆಲಿವರಿ	855 (861)
ಸೂರ್ಯಕಾಂತಿ ಎಣ್ಣೆ ಕಚ್ಚಾ	860 (860)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,250 (58,550)
ಬೆಳ್ಳಿ ಕೆ.ಜಿ
73,700 (70,900)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ,ಪಿಯುಸಿ, ಡಿಗ್ರಿ, ITIನವರುಗಳು 16,600- 65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 7259552930

ತಕ್ಷಣ ಬೇಕಾಗಿದ್ದಾರೆ ಕಂಪನಿ ಆಫೀಸ್‌ಗಳಿಗೆ, 5ನೇ, 10ನೇ,ಪಿಯುಸಿ, ಐಟಿಐಡಿಗ್ರಿ ಪಾಸ್/ಫೇಲ್ ನಗರ-ಗ್ರಾಮೀಣ ಹಳ್ಳಿಯುವಕರು ಯುವತಿಯರಿಗೆ, ವಸತಿಯೂಟದೊಂದಿಗೆ 16,900- 45000. 9916799477, 9964140505

ರಾವ್ ಸಂಸ್ಥೆಗೆವಯಸ್ಸಾದವರನ್ನು , ರೋಗಿಗಳನ್ನು, ಮಕ್ಕಳನ್ನು ನೋಡಿಕೊಳಳ್ಳೂ ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು ಹುಡಿಗಿಯರು ಬೇಕಾಗಿದ್ದಾರೆ ಊಟವಾಸತಿವಿದೆ 13,000 - 17,000. 8951315839 , 9880120052

Marketing & Sales

ಮಹಿಳೆಯರಿಗೆ ರೇಷ್ಮೆ ಸೀರೆಗಳು, ಬನಾರಸ್ ಸೀರೆಗಳು ಕಾಟನ್ ಸೀರೆಗಳು ಎಲ್ಲಾ ತರಹದ ಸೀರೆಗಳು, ಚೂಡಿದಾರಗಳು ಕಂತಿನ ಮೇಲೆ ಮಾರಾಟ ಮಾಡಲು ಮಹಿಳೆಯರಿಗೆ ಸಿಗುತ್ತದೆ: 8892501007/ 9606701007

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266 /9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000 ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

ಪ್ರಜಾವಾಣಿ ರಿಯಲ್ ಎಸ್ಟೇಟ್
ಪ್ರತಿ ಶುಕ್ರವಾರ + ಶನಿವಾರ + ಭಾನುವಾರ ಪ್ರಜಾವಾಣಿ ಆಲ್ ಕರ್ನಾಟಕ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2700/-*
FOR 15 WORDS
*ಷರತ್ತುಗಳು ಅನ್ವಯ
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿ:
9886213331 | 9731810277
9901641752 | 9845114560 |
080- 45557163 | 45557164

Wanted

ಎಂಎನ್ಸಿಗೆ &ಇತರೆ ಕಂಪನಿಗಳಿಗೆ ಡಿಪ್ಲೋಮಾ ಮೆಕ್ಯಾನಿಕಲ್ಸ್, ಎಲೆಕ್ಟ್ರಿಕಲ್ಸ್ /ಹೊರದೇಶದ ಕಂಪೆನಿಗಳಿಗೆ ಯುಕೆ ಯುಎಸ್‌ಎ ಕೆನಡಾ ಕೆಲಸಕ್ಕೆ ಬೇಕಾಗಿದ್ದಾರೆ: 8892501007/ 9606701007

ಪ್ರವಾಸ

Travel

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 30.08.2023 ರಿಂದ 13 ದಿನಗಳ ಯುರೋಪ್ ಪ್ರವಾಸ. 23.07.2023 28.08.2023 ರಿಂದ 7/11 ದಿನಗಳ ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್. 24.09.2023 ರಿಂದ 5 ದಿನಗಳ ದುಬೈ,ಅಬುದಾಬಿ,ಶಾರ್ಜಾ (ಆಫರ್ ದರಗಳಲ್ಲಿ) 28.07.2023 ರಿಂದ 11 ದಿನಗಳ ಗುಜರಾತ್,ಉಜ್ಜಯಿನಿ. 03.09.2023 20.09.2023 ರಿಂದ 8/11/12 ದಿನಗಳ ಕಾಶಿ,ಗಯಾ/ನೇಪಾಳ. 20.09.2023 06.10.2023 ರಿಂದ 15 ದಿನಗಳ ಚಾರ್‌ಧಾಮ್ ಯಾತ್ರೆ. 04.10.2023 16.10.2023 ರಿಂದ 12 ದಿನಗಳ ಕಾಶ್ಮೀರ್,ವೈಷ್ಣೋದೇವಿ ಹಾಗೂ ಇತರ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಭಾರತಪರಂಪರ ದರ್ಶನ 25.7.2023 7ದಿನ ರಾಮೇಶ್ವರಂ ನವಗ್ರಹಸಹಿತ ತಮಿಳುನಾಡು. 2.9.2023, 22.9.2023 14ದಿನ ಚಾರ್ ಧಾಮ್ ಯಾತ್ರೆ. 11ದಿನ ಗುಜರಾತ್ 9448792891.

19.09.2023 17.11.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 04.11.2023 22.11.2023 08.12.2023 ದುಬೈ,ಅಬುದಾಬಿ 5 ದಿನಗಳು. 11.10.2023 29.11.2023 ನೇಪಾಳ 9 ದಿನಗಳು. 11.09.2023 09.10.2023 17.11.2023 ಶ್ರೀಲಂಕಾ 6 ದಿನಗಳು. 19.09.2023 06.10.2023 ಕಾಶಿ,ಗಯಾ,ಅಯೋಧ್ಯ 8 ದಿನಗಳು. 11.09.2023 09.10.2023 ಗುಜರಾತ್ 8 ದಿನಗಳು. 13.10.2023 25.11.2023 ರಾಜಸ್ಥಾನ್ 9 ದಿನಗಳು. 07.10.2023 11.11.2023 ದೆಹಲಿ,ಆಗ್ರಾ,ಜೈಪುರ್ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರ. ಬೆಂಗಳೂರು.03 9448402248 7022547922

20.09.2023 12 ದಿನಗಳು ಚಾರ್ ಧಾಮ್. 05.12.2023 9 ದಿನಗಳು ಕಾಶಿ,ಅಯೋಧ್ಯಾ, ಗಯಾ,ಕೋಲ್ಕತಾ ಪುರಿಜಗನ್ನಾಥ್ ಸಂಪರ್ಕಿಸಿ: ವಿಜಯ ಟ್ರಾವಲ್ಸ್ ಬೆಂಗಳೂರು. 9448294477

ರಿಯಲ್ ಎಸ್ಟೇಟ್ ಸೆಲ್ಲಿಂಗ್

Villas/Bunglows

Rajajinagar

INDEPENDENT 7 Rooms Villa for Sale Near GT Mall Land: 2000 sqft 2.5 Floors, 3.7 Crores. 9448081348

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದ ಆರ್ಥಿಕ ಸಾಧನೆ

ವಿಪ್ರೊ ಲಾಭ ಶೇ 12 ಹೆಚ್ಚಳ

ಬೆಂಗಳೂರು (ಪಿಟಿಐ): ಐ.ಟಿ. ಸೇವೆಗಳ ರಫ್ತು ಕಂಪನಿ ವಿಪ್ರೊ ಲಿಮಿಟೆಡ್, ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹2,870 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹2,563 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭದಲ್ಲಿ ಶೇ 12ರಷ್ಟು ಹೆಚ್ಚಳ ಕಂಡುಬಂದಿದೆ.

ಮೊದಲ ತ್ರೈಮಾಸಿಕದಲ್ಲಿ ಕಂಪನಿಯ ಲಾಭ ₹2,980 ಕೋಟಿ ಆಗಲಿದೆ ಎಂದು ರಿಫಿನಿಟಿವ್ ಐಬಿಇಎಸ್ ಅಂದಾಜು ಮಾಡಿತ್ತು. ಇದಕ್ಕೆ ಹೋಲಿಸಿದರೆ ಲಾಭವು ಇಳಿಕೆ ಕಂಡಿದೆ.

ಮುಖ್ಯಾಂಶಗಳು

- ತ್ರೈಮಾಸಿಕದಲ್ಲಿ 8,812 ಉದ್ಯೋಗ ಕಡಿತ
- ದೊಡ್ಡ ಮೊತ್ತದ ಒಪ್ಪಂದಗಳು, ಹೊಸ ಕಂಪನಿಗಳಿಂದ ಬೇಡಿಕೆ

ಕಂಪನಿಯ ಕಾರ್ಯಾಚರಣಾ ವರಮಾನ ಶೇ 6ರಷ್ಟು ಏರಿಕೆ ಕಂಡು ₹22,831 ಕೋಟಿಗೆ ತಲುಪಿದೆ.

ದೊಡ್ಡ ಮೊತ್ತದ ಒಪ್ಪಂದಗಳು, ಹೊಸ ಕಂಪನಿಗಳಿಂದ ಸೇವೆಗಳಿಗೆ ಬೇಡಿಕೆ ಹಾಗೂ ಉತ್ತಮ ಗಳಿಕೆಯ ಕಾರಣಗಳಿಂದಾಗಿ ಮೊದಲ ತ್ರೈಮಾಸಿಕದಲ್ಲಿ ಬಲಿಷ್ಠ ಫಲಿತಾಂಶ ಸಾಧ್ಯವಾಗಿದೆ ಎಂದು ಕಂಪನಿಯ ಸಿಇಒ ಥಿಯರಿ ಡೆಲಾಪೋರ್ಟ್ ತಿಳಿಸಿದ್ದಾರೆ.

ಕಂಪನಿಗಳು ವೆಚ್ಚ ಮಾಡುವುದನ್ನು ಕಡಿಮೆ ಮಾಡುತ್ತಿವೆ. ಹೀಗಾಗಿ ಬೇಡಿಕೆಯಲ್ಲಿ ಅನಿಶ್ಚಿತ ಸ್ಥಿತಿ ಎದುರಾಗಿದೆ. ಇದರಿಂದಾಗಿ ವಿಪ್ರೊ ಕಂಪನಿಯು ಮುನ್ನೋಟವನ್ನು ತಗ್ಗಿಸಿದೆ. ಕಂಪನಿಯ ಒಟ್ಟು ವರಮಾನದಲ್ಲಿ ಹೆಚ್ಚಿನ ಪಾಲು ಇರುವ ಐ.ಟಿ. ಸೇವೆಗಳ ವರಮಾನವು ಎರಡನೇ ತ್ರೈಮಾಸಿಕದಲ್ಲಿ ₹22,304 ಕೋಟಿಯಿಂದ ₹23,042 ಕೋಟಿ ಆಗುವ ಅಂದಾಜು ಮಾಡಲಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹22,960 ಕೋಟಿ ಇತ್ತು.

ಜೂನ್ ತ್ರೈಮಾಸಿಕದ ಅಂತ್ಯಕ್ಕೆ ಸಿಬ್ಬಂದಿ ಸಂಖ್ಯೆ 8,812ರಷ್ಟು ಇಳಿಕೆ ಕಂಡಿದ್ದು, 2.49 ಲಕ್ಷಕ್ಕೆ ತಲುಪಿದೆ. ಮಾರ್ಚ್ ತ್ರೈಮಾಸಿಕದಲ್ಲಿ 2.58 ಲಕ್ಷ ಇತ್ತು. ಬೇರೆ ವಲಯಗಳಂತೆಯೇ ಐ.ಟಿ. ಉದ್ಯಮವೂ ಕೃತಕ ಬುದ್ಧಿಮತ್ತೆ (ಎ.ಐ.) ತಂತ್ರಜ್ಞಾನದ ಪರಿವರ್ತನೆಗೆ ಒಳಗಾಗುತ್ತಿದೆ. ವ್ಯವಹಾರದ ಪ್ರತಿಯೊಂದು ಅಂಶವನ್ನೂ ಅದು ಬದಲಾಯಿಸಲಿದೆ ಎಂದು ಸಿಇಒ ಹೇಳಿದ್ದಾರೆ.

ಹಂಪಿಯಲ್ಲಿ ಜಿ20 ಮೂರನೇ ಶೆರ್ಪಾ ಸಭೆ: 125 ಪ್ರತಿನಿಧಿಗಳು ಭಾಗಿ

ಸುಸ್ಥಿರ ಅಭಿವೃದ್ಧಿ: ಒಮ್ಮತಕ್ಕೆ ಯತ್ನ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): 'ಜಗತ್ತಿನ ಮೂರನೇ ಒಂದರಷ್ಟು ದೇಶಗಳು ಆರ್ಥಿಕ ಬಿಕ್ಕಟ್ಟಿನಲ್ಲಿವೆ. 130 ದೇಶಗಳಲ್ಲಿ ಈಗಲೂ ವೇಗವಾಗಿ ಹಣ ಪಾವತಿಸುವ ವ್ಯವಸ್ಥೆ ಇಲ್ಲ. 300 ಕೋಟಿ ಜನರು ಬ್ಯಾಂಕ್ ಖಾತೆ ತೆರೆದಿಲ್ಲ. ಇದೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸುವ ಕಾರ್ಯಸೂಚಿಯನ್ನು ಜಿ20 ಮೂರನೇ ಶೆರ್ಪಾ ಸಭೆ ಹೊಂದಿದೆ' ಎಂದು ಭಾರತದ ನಿಯೋಗದ ಮುಖ್ಯಸ್ಥ (ಶೆರ್ಪಾ) ಅಮಿತಾಭ್ ಕಾಂತ್ ಹೇಳಿದರು.

> **ಜಿ20 ಯಲ್ಲಿ ಒಟ್ಟು 54 ರಾಷ್ಟ್ರಗಳು ಭಾಗಿಯಾಗಿವೆ. ವಿಶ್ವದ ಬಹುಜನರ ಆಶೋತ್ತರ ಈಡೇರಿಸುವಲ್ಲಿ ಜಿ 20 ಬೃಹತ್ ವೇದಿಕೆಯಾಗಲಿದೆ**
> **ಅಮಿತಾಭ್ ಕಾಂತ್,** ಭಾರತದ ನಿಯೋಗದ ಮುಖ್ಯಸ್ಥ (ಶೆರ್ಪಾ)

ಹಂಪಿ ಸಮೀಪದ ಆರೆಂಜ್ ಕೌಂಟಿಯಲ್ಲಿ ಗುರುವಾರ ಆರಂಭವಾದ ಜಿ20 ಮೂರನೇ ಶೆರ್ಪಾ ಸಭೆಯ ಮೊದಲ ಗೋಷ್ಠಿಯ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಎಲ್ಲವನ್ನೂ ಒಳಗೊಂಡ, ಸುಸ್ಥಿರ ಹಾಗೂ ಪ್ರಗತಿಯ ನೋಟ ಹೊಂದಿರುವ ಅಭಿವೃದ್ಧಿ ಸಾಧಿಸುವ ನಿಟ್ಟಿನಲ್ಲಿ ಜಿ20 ರಾಷ್ಟ್ರಗಳು, ಆಹ್ವಾನಿತ 9 ದೇಶಗಳು, 7 ಅಂತರರಾಷ್ಟ್ರೀಯ ಸಂಘಟನೆಗಳ 125 ಮಂದಿ ಪ್ರತಿನಿಧಿಗಳು ಎರಡು ದಿನ ಚರ್ಚಿಸಲಿದ್ದಾರೆ. ಒಂದು ಒಮ್ಮತ ಮೂಡಿಸಿ ಕರಡು ಸಿದ್ಧಪಡಿಸುವುದೇ ಈ ಸಭೆಯ ಉದ್ದೇಶ' ಎಂದರು.

'ದೆಹಲಿಯಲ್ಲಿ ಸೆಪ್ಟೆಂಬರ್‌ನಲ್ಲಿ ನಾಲ್ಕನೇ ಶೆರ್ಪಾ ಸಭೆ ನಡೆಯಲಿದೆ. ಬಳಿಕ ನಾಲ್ಕೂ ಸಭೆಗಳ ಕರಡು ವರದಿ ಸಿದ್ಧಪಡಿಸಿ ದೆಹಲಿಯಲ್ಲೇ ನಡೆಯುವ ಜಿ20 ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ರಾಷ್ಟ್ರನಾಯಕರಿಗೆ ನೀಡಲಾಗುವುದು. ಅದು ದೆಹಲಿ ಘೋಷಣೆ ಆಗಿರಲಿದ್ದು, ಅಂತಿಮ ಒಪ್ಪಂದಕ್ಕೆ ಬರಲಾಗುತ್ತದೆ' ಎಂದು ಕಾಂತ್ ಹೇಳಿದರು.

ಬಡತನ, ಅಪೌಷ್ಟಿಕತೆ ನಿವಾರಣೆ, ಲಿಂಗ ತಾರತಮ್ಯ ತೊಡೆಯುವುದು, ಜಾಗತಿಕ ಸಾಂಕ್ರಾಮಿಕ ಬಂದಾಗ ಪರಸ್ಪರ ನೆರವಾಗುವುದು, ತಂತ್ರಜ್ಞಾನದ ವರ್ಗಾವಣೆ, ಡಿಜಿಟಲ್ ಕ್ಷೇತ್ರಕ್ಕೆ ಇನ್ನಷ್ಟು ಆದ್ಯತೆ ನೀಡಿ ಬಡ ದೇಶಗಳಿಗೂ ಅದನ್ನು ವಿಸ್ತರಿಸುವುದು ಸಹಿತ 45ಕ್ಕೂ ಅಧಿಕ ಕಾರ್ಯಸೂಚಿಗಳು ಇವೆ' ಎಂದರು.

ರಾಜ್ಯ ಸರ್ಕಾರದಿಂದಲೇ ನಿರ್ವಹಣೆ ಆಗಲಿರುವ ಮೊದಲ ನಿಲ್ದಾಣ

ಶಿವಮೊಗ್ಗ: ಆ. 11ರಿಂದ ವಿಮಾನ ಹಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ಆಗಸ್ಟ್ 11ರಿಂದ ಕಾರ್ಯಾಚರಣೆ ಶುರುವಾಗುವ ಸಾಧ್ಯತೆ ಇದೆ. ಅದಕ್ಕೆ ಅಗತ್ಯವಿರುವ ಎಲ್ಲ ವ್ಯವಸ್ಥೆಗಳನ್ನು ಜುಲೈ 20ರೊಳಗೆ ಮಾಡಿಕೊಳ್ಳಲಾಗುವುದು' ಎಂದು ಬೃಹತ್ ಕೈಗಾರಿಕೆ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ತಿಳಿಸಿದ್ದಾರೆ.

ರಾಜ್ಯದ ಹೊಸ ವಿಮಾನ ನಿಲ್ದಾಣಗಳ ಕಾಮಗಾರಿಗಳ ಬಗ್ಗೆ ಗುರುವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಆಂಬುಲೆನ್ಸ್ ಮತ್ತು ಇತರೆ ಅಗತ್ಯ ವಾಹನಗಳನ್ನು ನಿಯೋಜಿಸುವ ಕಾರ್ಯವಾಗಬೇಕು. ಜತೆಗೆ, ಕೆಲವು ತಾಂತ್ರಿಕ ಮತ್ತು ತಾಂತ್ರಿಕೇತರ ಸಿಬ್ಬಂದಿ ನೇಮಕ ನಡೆಯಬೇಕಿದೆ. ಇವೆಲ್ಲವನ್ನೂ ಜುಲೈ 20ರ ಹೊತ್ತಿಗೆ ಪೂರೈಸಿ ವಿಮಾನ ನಿಲ್ದಾಣವನ್ನು ಕಾರ್ಯಾಚರಣೆಗೆ ಸಜ್ಜುಗೊಳಿಸಲಾಗುವುದು' ಎಂದು ವಿವರಿಸಿದರು.

> ## ಜುಲೈ 20ರಿಂದ ಟಿಕೆಟ್ ಬುಕ್ಕಿಂಗ್
>
> ಶಿವಮೊಗ್ಗ: 'ಇಲ್ಲಿನ ಸೋಗಾನೆಯ ವಿಮಾನ ನಿಲ್ದಾಣದಿಂದ ಆಗಸ್ಟ್ 11ರಿಂದ ವಿಮಾನ ಹಾರಾಟ ಆರಂಭವಾಗಲಿದ್ದು, ಜುಲೈ 20ರಿಂದ ವಿಮಾನದ ಟಿಕೆಟ್ ಬುಕ್ಕಿಂಗ್‌ಗೆ ಚಾಲನೆ ನೀಡಲಾಗುತ್ತದೆ' ಎಂದು ಇಂಡಿಗೊ ವಿಮಾನಯಾನ ಸಂಸ್ಥೆಯ ಹುಬ್ಬಳ್ಳಿ ವಲಯದ ಮುಖ್ಯಸ್ಥ ಮನೋಜ್ ಪ್ರಭು 'ಪ್ರಜಾವಾಣಿ'ಗೆ ತಿಳಿಸಿದರು.
>
> ಮೇಕ್ ಮೈ ಟ್ರಿಪ್ ಹಾಗೂ ಇಂಡಿಗೊ ಸಂಸ್ಥೆಯ ಅಧಿಕೃತ ವೆಬ್‌ಸೈಟ್ www.goindigo.in ಮೂಲಕ ಪ್ರಯಾಣಿಕರು ಟಿಕೆಟ್ ಕಾಯ್ದಿರಿಸಬಹುದು ಎಂದು ಹೇಳಿದರು.

'ಕೇಂದ್ರ ನಾಗರಿಕ ವಿಮಾನಯಾನ ನಿರ್ದೇಶನಾಲಯವು ಇಲ್ಲಿನ ನಿಲ್ದಾಣದ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮಕ್ಕೆ (ಕೆಎಸ್‌ಐಐಡಿಸಿ) ವಹಿಸಿದೆ. ಶಿವಮೊಗ್ಗ ನಿಲ್ದಾಣವು ರಾಜ್ಯ ಸರ್ಕಾರದ ಸಂಸ್ಥೆಯ ವತಿಯಿಂದ ನಡೆಯಲಿರುವ ಕರ್ನಾಟಕದ ಮೊದಲ ವಿಮಾನ ನಿಲ್ದಾಣವಾಗಲಿದೆ' ಎಂದರು.

'ನಿರ್ಮಾಣ ಹಂತದ ವಿಜಯಪುರ ವಿಮಾನ ನಿಲ್ದಾಣದಲ್ಲಿ ರಾತ್ರಿ ಲ್ಯಾಂಡಿಂಗ್ ವ್ಯವಸ್ಥೆ ಕಲ್ಪಿಸಲು ಕ್ರಮ ತೆಗೆದುಕೊಳ್ಳಬೇಕು' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

'ಈ ನಿಲ್ದಾಣದ ಮೂಲಯೋಜನೆಯಲ್ಲಿ ರಾತ್ರಿ ಲ್ಯಾಂಡಿಂಗ್ ಸೌಲಭ್ಯ ಸೇರಿರಲಿಲ್ಲ. ಈ ಸೌಲಭ್ಯಕ್ಕೆ ವ್ಯವಸ್ಥೆ ಮಾಡಲು ₹12 ಕೋಟಿ ಹೆಚ್ಚುವರಿಯಾಗಿ ಬೇಕಾಗುತ್ತದೆ. ಇದುವರೆಗೆ ಸುಮಾರು ₹350 ಕೋಟಿ ಖರ್ಚಾಗಿದೆ. ರನ್ ವೇ ಪೂರ್ಣಗೊಂಡಿದ್ದು, ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದ ಕೆಲಸಗಳೆಲ್ಲ ಮೂರು ತಿಂಗಳಲ್ಲಿ ಮುಗಿಯಲಿವೆ' ಎಂದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	500
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-41500
ಹಳತು	46000-49000
ಕುಮಟಾ	
ಚಿಪ್ಪು	25170-35000
ಕೋಕ	23222-35399
ಫ್ಯಾಕ್ಟರಿ	---
ಹಳೆಚಾಲಿ	40369-41172
ಹೊಸಚಾಲಿ	37099-40369
ಶಿರಸಿ	
ಬೆಟ್ಟೆ	31299-48639
ಬಿಳಿಗೋಟು	25699-35400
ಚಾಲಿ	36299-40808
ಕೆಂಪುಗೋಟು	28699-39899
ರಾಶಿ	46669-52609

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13900	14100	14000	157 ಸೆಂಟ್ಸ್
ಎಸಿ	7140	7000	7100	
ಆರ್‌ಪಿ	10100	10200	10300	ಲಂಡನ್
ಆರ್‌ಸಿ	5960	232	5900	2534 ಡಾಲರ್ಸ್

66 ಸಾವಿರ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳು ಗುರುವಾರದ ವಹಿವಾಟಿನ ನಡುವಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದ್ದವು. ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮೊದಲ ಬಾರಿಗೆ 66 ಸಾವಿರದ ಮೈಲಿಗಲ್ಲು ದಾಟಿತ್ತು.

ವಹಿವಾಟಿನ ನಡುವಿನಲ್ಲಿ ಸೆನ್ಸೆಕ್ಸ್ 670 ಅಂಶ ಏರಿಕೆ ಕಾಣುವ ಮೂಲಕ ಸಾರ್ವಕಾಲಿಕ ದಾಖಲೆ ಮಟ್ಟವಾದ 66,064 ಅಂಶಗಳಿಗೆ ತಲುಪಿತ್ತು. ನಂತರ ಇಳಿಕೆಯ ಹಾದಿ ಹಿಡಿಯಿತು. ಅಂತಿಮವಾಗಿ 165 ಅಂಶಗಳ ಏರಿಕೆಯೊಂದಿಗೆ 65,558 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಮಧ್ಯಂತರ ವಹಿವಾಟಿನಲ್ಲಿ ದಾಖಲೆಯ 19,567 ಅಂಶಗಳಿಗೆ ತಲುಪಿತ್ತು. ನಂತರ ಇಳಿಕೆ ಕಂಡು 19,413 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು.

ಇನ್ಫೊಸಿಸ್, ಐಸಿಐಸಿಐ ಬ್ಯಾಂಕ್ ಮತ್ತು ಟಿಸಿಎಸ್ ಷೇರುಗಳನ್ನು ಹೂಡಿಕೆದಾರರು ಹೆಚ್ಚಿನ ಪ್ರಮಾಣದಲ್ಲಿ ಖರೀದಿ ಮಾಡಿದ್ದರಿಂದ ಷೇರುಪೇಟೆಗಳು ಸಕಾರಾತ್ಮಕ ಮಟ್ಟದಲ್ಲಿ ವಹಿವಾಟು ಅಂತ್ಯಗೊಳ್ಳಲು ನೆರವಾಯಿತು.

ಐ.ಟಿ. ಷೇರುಗಳು ಹೆಚ್ಚಿನ ಖರೀದಿಗೆ ಒಳಗಾಗಿದ್ದು ಗುರುವಾರ ಸೂಚ್ಯಂಕಗಳ ಏರಿಕೆಗೆ ಪ್ರಮುಖ ಕಾರಣ ಆಯಿತು. ಐ.ಟಿ. ಕಂಪನಿಗಳ ಗಳಿಕೆಯು ಸ್ಥಿರವಾಗಿದ್ದು, ಹೊಸ ವಹಿವಾಟುಗಳು ಸಿಗುತ್ತಿರುವುದು ಐ.ಟಿ. ಷೇರುಗಳತ್ತ ಹೂಡಿಕೆದಾರರನ್ನು ಆಕರ್ಷಿಸಿವೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಟಿಸಿಎಸ್ ಮೌಲ್ಯ ಹೆಚ್ಚಳ: ಟಿಸಿಎಸ್ ಜೂನ್ ತ್ರೈಮಾಸಿಕದಲ್ಲಿ ಉತ್ತಮ ಫಲಿತಾಂಶ ಪ್ರಕಟಿಸಿರುವುದರಿಂದ ಗುರುವಾರದ ವಹಿವಾಟಿನಲ್ಲಿ ಷೇರು ಮೌಲ್ಯ ಶೇ 3ರಷ್ಟು ಹೆಚ್ಚಾಯಿತು. ಕಂಪನಿಯ ಮಾರುಕಟ್ಟೆ ಮೌಲ್ಯ ₹29,437 ಕೋಟಿ ಏರಿಕೆ ಕಂಡು, ₹12.22 ಲಕ್ಷ ಕೋಟಿಗೆ ತಲುಪಿತು.

> ## ಬೆಳ್ಳಿ ಕೆ.ಜಿಗೆ ₹2,300 ಏರಿಕೆ
>
> ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಬೆಳ್ಳಿ ದರ ಕೆ.ಜಿಗೆ ₹2,300ರಷ್ಟು ಏರಿಕೆ ಕಂಡು ₹75 ಸಾವಿರಕ್ಕೆ ತಲುಪಿತು. ಚಿನ್ನದ ದರ 10 ಗ್ರಾಂಗೆ ₹400ರಷ್ಟು ಹೆಚ್ಚಾಗಿ ₹60,100ರಂತೆ ಮಾರಾಟ ಆಯಿತು.
>
> ಜಾಗತಿಕ ಮಾರುಕಟ್ಟೆಗಳಲ್ಲಿ ಚಿನ್ನ, ಬೆಳ್ಳಿ ದರ ಏರಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

'ಅಸಭ್ಯ ಪೋಸ್‌ಗಾಗಿ ಬಿಬಿಸಿ ನಿರೂಪಕನಿಂದ ಹಣ: ಸಾಕ್ಷ್ಯ ಇಲ್ಲ'

ಲಂಡನ್ (ಎಪಿ): 'ಅಸಭ್ಯವಾಗಿ ಪೋಸ್ ನೀಡಲು ಬಾಲಕನೊಬ್ಬನಿಗೆ ಬಿಬಿಸಿ ಸುದ್ದಿಸಂಸ್ಥೆಯ ನಿರೂಪಕರೊಬ್ಬರು ಹಣ ನೀಡಿದ್ದರು ಎಂಬ ಆರೋಪದ ಪ್ರಕರಣದ ಸಂಬಂಧ ಅಗತ್ಯ ಸಾಕ್ಷ್ಯಗಳು ಇಲ್ಲ' ಎಂದು ಸ್ಥಳೀಯ ಪೊಲೀಸರು ತಿಳಿಸಿದ್ದಾರೆ.

ಈ ಮಧ್ಯೆ, ಹಣ ನೀಡಿದ್ದ ಆರೋಪಕ್ಕೆ ಗುರಿಯಾಗಿದ್ದ ನಿರೂಪಕ ಹೂ ಎಡ್ವರ್ಡ್ ಎಂದು ಆತನ ಪತ್ನಿಯೇ ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದಾರೆ.

ಸಂತ್ರಸ್ತ ಬಾಲಕ ಮತ್ತು ಆತನ ಪೋಷಕರ ಜೊತೆಗೆ ಚರ್ಚಿಸಿದ ಬಳಿಕ ಪ್ರಕರಣ ಕುರಿತು ಮುಂದಿನ ಕ್ರಮವನ್ನು ಕೈಬಿಡಲು ಪೊಲೀಸರು ನಿರ್ಧರಿಸಿದರು.

'ನಿರೂಪಕರು ಬಾಲಕನಿಗೆ ಹಣ ನೀಡಿದ್ದರು' ಎಂದು ಬಾಲಕನ ಪೋಷಕರು ಸನ್ ದಿನಪತ್ರಿಕೆಗೆ ಕಳೆದ ವಾರ ತಿಳಿಸಿದ್ದರು.

ಈ ಸುದ್ದಿ ತೀವ್ರ ಚರ್ಚೆಗೆ ಗ್ರಾಸವಾಗಿದ್ದು, ಬಿಬಿಸಿ ಸುದ್ದಿಸಂಸ್ಥೆಯೂ ಇರಿಸುಮುರಿಸಿಗೆ ಒಳಗಾಗಿತ್ತು. ನಂತರ ಆರೋಪಕ್ಕೆ ಸಂಬಂಧಸಿದಂತೆ ನಿರೂಪಕನನ್ನು ಅಮಾನತುಪಡಿಸಲಾಗಿದೆ ಎಂದು ಸಂಸ್ಥೆ ಪ್ರಕಟಿಸಿತ್ತು.

ನಿರೂಪಕ ಎಡ್ವರ್ಡ್ ಅವರ ಪತ್ನಿ ವಿಕಿ ಫ್ಲಿಂಡ್ ಅವರು ಸಾರ್ವಜನಿಕವಾಗಿ ಹೇಳಿಕೆ ನೀಡಿದ್ದು, ಗಂಭೀರವಾದ ಮಾನಸಿಕ ಸಮಸ್ಯೆಯಿಂದ ನನ್ನ ಪತಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇದು, ನನ್ನ ಕುಟುಂಬಕ್ಕೆ ಸಂಕಷ್ಟದ ಕಾಲವಾಗಿದೆ ಎಂದು ಹೇಳಿಕೊಂಡಿದ್ದರು.

ಪ್ರಕರಣ ಸಂಬಂಧ ಮುಂದೆ ಯಾವುದೇ ಕ್ರಮ ಇರುವುದಿಲ್ಲ ಎಂದು ಮೆಟ್ರೊಪಾಲಿಟನ್ ಪೊಲೀಸ್ ಇಲಾಖೆಯು ಹೇಳಿಕೆ ನೀಡಿದೆ. ಆದರೆ, ತನಿಖೆ ಮುಂದುವರಿಸಲಾಗುವುದು ಎಂದು ಬಿಬಿಸಿ ಸುದ್ದಿಸಂಸ್ಥೆಯು ತಿಳಿಸಿದೆ.

ಇಇಒಸಿ ಸದಸ್ಯೆಯಾಗಿ ಭಾರತ ಮೂಲದ ಕಲ್ಪನಾ ಆಯ್ಕೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ 'ಸಮಾನ ಉದ್ಯೋಗ ಅವಕಾಶ ಆಯೋಗದ (ಇಇಒಸಿ)' ಸದಸ್ಯೆಯಾಗಿ ಭಾರತ ಮೂಲದ ಕಲ್ಪನಾ ಕೊಟಗಾಳ್ ಆಯ್ಕೆಯಾಗಿದ್ದಾರೆ.

ಟೈ ಬ್ರೇಕರ್ ಮತ ಚಲಾಯಿಸುವ ಮೂಲಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಆಯ್ಕೆಗೆ ಕಾರಣರಾದರು.

191 ವರ್ಷಗಳ ಹಿಂದೆ ಇಂತಹ ದಾಖಲೆ ನಿರ್ಮಾಣ ಆಗಿತ್ತು. ಆಗ ಉಪಾಧ್ಯಕ್ಷರಾಗಿದ್ದ ಸೆನೆಟ್ ಸದಸ್ಯ ಜಾನ್ ಸಿ.ಕಾಲ್ಹೌನ್ ಅವರು ಹೀಗೆ ಟೈ ಬ್ರೇಕರ್ ಮತವನ್ನು ಚಲಾಯಿಸಿದ್ದರು.

ಅಮೆರಿಕದಲ್ಲಿ ಉದ್ಯೋಗಾಂಕ್ಷಿಗಳನ್ನು ವರ್ಣ, ಧರ್ಮ, ಲಿಂಗ, ರಾಷ್ಟ್ರೀಯತೆ, ವಯಸ್ಸು (40 ವರ್ಷ ಮೀರಿದವರು), ಅಂಗವಿಕಲತೆ ಆಧಾರದಲ್ಲಿ ತಾರತಮ್ಯ ಆಗದಂತೆ ತಡೆಯಲು ಕಾಯ್ದೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಹೊಣೆ ಈ ಆಯೋಗದ್ದಾಗಿದೆ.

ಸೆನೆಟ್‌ನಲ್ಲಿ ಡೆಮಾಕ್ರಾಟಿಕ್ ಪಕ್ಷವು 51 ಸದಸ್ಯ ಬಲ ಹೊಂದಿದ್ದು, ರಿಪಬ್ಲಿಕನ್ ಪಕ್ಷ 49 ಸದಸ್ಯರನ್ನು ಹೊಂದಿದೆ. ಕಲ್ಪನಾ ಪರ ಮತ್ತು ವಿರುದ್ಧವಾಗಿ ತಲಾ 50 ಮತ ಬಂದು ಫಲಿತಾಂಶ ಟೈ ಆಗಿತ್ತು. ಆಗ ನಿರ್ಣಾಯಕ ಮತ ಚಲಾಯಿಸುವ ಅಧಿಕಾರ ಉಪಾಧ್ಯಕ್ಷರದಾಗಿದೆ.

ಬಳಿಕ ಮಾತನಾಡಿದ ಸೆನೆಟ್‌ನ ಮುಖಂಡ ಚುಕ್ ಷುಮೆರ್ ಅವರು, 'ಸೆನೆಟ್‌ನ ಇತಿಹಾಸದಲ್ಲಿ ಇದೊಂದು ಚಾರಿತ್ರಿಕ ಸಂದರ್ಭ ಎಂದು ಹೇಳಿದರು' ಎಂದು ಹಿಲ್ ದಿನಪತ್ರಿಕೆ ವರದಿ ಮಾಡಿದೆ.

ಪುರುಷ, ಮಹಿಳೆಯರಿಗೆ ಬಹುಮಾನದಲ್ಲಿ ಸಮಾನತೆ

ಸಮಾನ ಪ್ರಶಸ್ತಿ ಮೊತ್ತ: ಐಸಿಸಿ

ಡರ್ಬನ್ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಆಯೋಜಿಸುವ ಜಾಗತಿಕಮಟ್ಟದ ಟೂರ್ನಿಗಳಲ್ಲಿ ಪುರುಷ ಮತ್ತು ಮಹಿಳೆಯರಿಗೆ ಸಮಾನ ಮೊತ್ತದ ಬಹುಮಾನ ನೀಡಲಿದೆ.

ಇಲ್ಲಿ ಗುರುವಾರ ನಡೆದ ಐಸಿಸಿ ವಾರ್ಷಿಕ ಸಮ್ಮೇಳನದಲ್ಲಿ ಈ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಯಿತು. ಈ ಮೊದಲು ಪುರುಷರ ವಿಶ್ವಕಪ್ ಮತ್ತು ಐಸಿಸಿ ಟೂರ್ನಿಗಳಲ್ಲಿ ಪ್ರಶಸ್ತಿ ಮೊತ್ತ ಹೆಚ್ಚಿತ್ತು. ಅದೇ ಮಹಿಳಾ ಟೂರ್ನಿಗಳಲ್ಲಿ ಕಡಿಮೆ ಇತ್ತು. ಈ ತಾರತಮ್ಯ ಇನ್ನು ಮುಂದೆ ನಿವಾರಣೆಯಾಗಲಿದೆ.

ಹೋದ ಬಾರಿ ನಡೆದಿದ್ದ ಪುರುಷರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ವಿಜೇತ ಇಂಗ್ಲೆಂಡ್ ತಂಡವು ₹ 32.8 ಕೋಟಿ ಹಾಗೂ ರನ್ನರ್ಸ್ ಅಪ್ ನ್ಯೂಜಿಲೆಂಡ್ ₹ 16.4 ಕೋಟಿ ಪಡೆದಿತ್ತು.

'ಪುರುಷ ಮತ್ತು ಮಹಿಳೆಯರ ಐಸಿಸಿ ಟೂರ್ನಿಗಳಲ್ಲಿ ನೀಡಲಾಗುವ ಪ್ರಶಸ್ತಿ ಮೊತ್ತದಲ್ಲಿ ಸಮಾನತೆ ಜಾರಿಗೊಳಿಸಲು ಸಭೆಯಲ್ಲಿ ನಿರ್ಧರಿಸಲಾಗಿದೆ. 2030ರೊಳಗೆ ನಗದು ಪ್ರಶಸ್ತಿ ಸಮಾನತೆ ಜಾರಿಗೊಳಿಸುವ ಯೋಜನೆಯನ್ನು ಸಮಯಕ್ಕೂ ಮುನ್ನವೇ ಪೂರ್ಣಗೊಳಿಸಲಾಗಿದೆ. ಮಹಿಳಾ ತಂಡಗಳೂ ಈಗ ಪುರುಷರಿಗೆ ಸಮಾನವಾದ ಪ್ರಶಸ್ತಿ ಮೊತ್ತಗಳನ್ನು ಪಡೆಯಲಿವೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

'ಕ್ರಿಕೆಟ್‌ನಲ್ಲಿಯೇ ಇದೊಂದು ಐತಿಹಾಸಿಕ ಕ್ರಮವಾಗಿದೆ. ಈ ಸಮಾನ ಪ್ರಶಸ್ತಿ ಮೊತ್ತದ ಜಾರಿಯನ್ನು ಪ್ರಕಟಿಸಲು ಅಪಾರ ಸಂತಸವಾಗಿದೆ. 2017ರಿಂದಲೇ ಮಹಿಳಾ ವಿಶ್ವಕಪ್ ಟೂರ್ನಿಗಳಲ್ಲಿ ಪ್ರಶಸ್ತಿ ಮೊತ್ತವನ್ನು ಹೆಚ್ಚಿಸುತ್ತ ಬಂದಿದ್ದೇವೆ. ಮಹಿಳಾ, ಪುರುಷ ಏಕದಿನ, ಟಿ20 ವಿಶ್ವಕಪ್ ಹಾಗೂ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಗಳಿಗೆ ಇದು ಅನ್ವಯವಾಗಲಿದೆ' ಎಂದು ಐಸಿಸಿ ಮುಖ್ಯಸ್ಥ ಗ್ರೆಗ್ ಬರ್ಕ್ಲಿ ತಿಳಿಸಿದರು.

ಐಸಿಸಿಯು ಈ ಯೋಜನೆ ಜಾರಿಗೊಳಿಸುವಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ಜಯ್ ಶಾ ಅವರ ಪಾತ್ರವೂ ಇದೆ. ಅವರು ಮಂಡಳಿಯ ಹಣಕಾಸು ಮತ್ತು ವಾಣಿಜ್ಯ ವ್ಯವಹಾರಗಳ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಹೋದ ವರ್ಷ ಬಿಸಿಸಿಐನಲ್ಲಿ ಮಹಿಳೆಯರಿಗೆ ಸಮಾನ ಪ್ರಶಸ್ತಿ ಮೊತ್ತ ಜಾರಿಗೊಳಿಸಲಾಗಿತ್ತು.

'ಮಂಡಳಿಯ ಸಹ ಸದಸ್ಯರ ಬೆಂಬಲದಿಂದ ಈ ಮಹತ್ವದ ಕಾರ್ಯ ಸಾಧ್ಯವಾಗಿದೆ. ಜಗತ್ತಿನಾದ್ಯಂತ ಜನಪ್ರಿಯತೆಯತ್ತ ಸಾಗಿರುವ ಕ್ರಿಕೆಟ್ ಅಭಿವೃದ್ಧಿಗಾಗಿ ಎಲ್ಲರೂ ಸೇರಿ ಶ್ರಮಿಸೋಣ' ಎಂದು ಶಾ ಹೇಳಿದ್ದಾರೆ.

ಆದಾಯದಲ್ಲಿ ಭಾರತಕ್ಕೆ ಸಿಂಹಪಾಲು

ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಆದಾಯದಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಸಿಂಹಪಾಲು ಪಡೆಯಲಿದೆ.

ಡರ್ಬನ್‌ನಲ್ಲಿ ನಡೆದ ವಾರ್ಷಿಕ ಸಮ್ಮೇಳನದಲ್ಲಿ ಐಸಿಸಿಯ ಆದಾಯ ಹಂಚಿಕೆ ಮಾದರಿ ಪ್ರಸ್ತಾವಕ್ಕೆ ಅವಿರೋಧವಾಗಿ ಅನುಮೋದನೆ ನೀಡಿದೆ.

ಬಿಸಿಸಿಐ ಶೇ 38.4ರಷ್ಟು ಪಾಲು ಸಿಗುವ ನಿರೀಕ್ಷೆ ಇದೆ. ಐಸಿಸಿಯು ವಾರ್ಷಿಕವಾಗಿ ಗಳಿಸಿರುವ ₹ 4900 ಕೋಟಿಯಲ್ಲಿ ಅಂದಾಜು ₹ 1900 ಕೋಟಿ ಭಾರತದ ಪಾಲಾಗುವ ನಿರೀಕ್ಷೆ ಇದೆ. ಐಸಿಸಿಗೆ ಬೇರೆಲ್ಲ ಕ್ರಿಕೆಟ್ ಮಂಡಳಿಗಳಿಗಿಂತಲೂ ಬಿಸಿಸಿಐ ಹೆಚ್ಚು ಆದಾಯ ಗಳಿಸಿಕೊಡುತ್ತಿದೆ. ಆದ್ದರಿಂದ ಹೆಚ್ಚಿನ ಪಾಲು ತನ್ನದಾಗಬೇಕೆಂಬ ಬೇಡಿಕೆಯನ್ನು ಬಹುಕಾಲದಿಂದ ಇಡುತ್ತಲೇ ಬಂದಿದೆ.

ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ಶೇ 6.89 ಮತ್ತು ಕ್ರಿಕೆಟ್ ಆಸ್ಟ್ರೇಲಿಯಾ ಶೇ 6.25 ಪಾಲು ಪಡೆಯುವ ಸಾಧ್ಯತೆ ಇದೆ.

ನಾಲ್ಕು ವಿದೇಶಿ ಆಟಗಾರರು: ವಿಶ್ವದ ಬೇರೆ ಬೇರೆ ಕಡೆ ನಡೆಯುವ ಫ್ರಾಂಚೈಸಿ ಲೀಗ್‌ಗಳಲ್ಲಿ ವಿದೇಶಿ ಆಟಗಾರರ ಭಾಗವಹಿಸುವಿಕೆಯ ನಿಯಮವನ್ನು ರೂಪಿಸಲಾಗಿದೆ.

ಲೀಗ್‌ಗಳಲ್ಲಿ ಕಣಕ್ಕಿಳಿಯುವ ಹನ್ನೊಂದು ಆಟಗಾರರ ಪೈಕಿ ನಾಲ್ವರು ವಿದೇಶಿ ಆಟಗಾರರಿಗೆ ಅವಕಾಶ ಕೊಡಬಹುದು. ಉಳಿದ ಏಳು ಆಟಗಾರರು ಲೀಗ್ ನಡೆಸುವ ದೇಶದವರಾಗಿರಬೇಕು. ಲೀಗ್‌ಗಳಲ್ಲಿ ಆಡಲು ತಮ್ಮ ತವರು ತಂಡಗಳನ್ನು ಆಟಗಾರರು ತೊರೆಯುವಂತೆ ತಡೆಯಲು ಈ ನಿಯಮ ರೂಪಿಸಲಾಗಿದೆ ಎಂದು ಐಸಿಸಿ ತಿಳಿಸಿದೆ.

ರೋಹಿತ್, ಜೈಸ್ವಾಲ್ ಶತಕ ವೈಭವ

ರೋಸಿಯು, ಡಾಮಿನಿಕಾ (ಪಿಟಿಐ): ಯಶಸ್ವಿ ಜೈಸ್ವಾಲ್ ಪದಾರ್ಪಣೆಯ ಪಂದ್ಯದಲ್ಲಿ ಶತಕ ಗಳಿಸಿ ಮಿಂಚಿದರೆ, ಅನುಭವಿ ಆಟಗಾರ ರೋಹಿತ್ ಶರ್ಮಾ ಟೆಸ್ಟ್‌ನಲ್ಲಿ 10ನೇ ಶತಕ ಗಳಿಸಿ ಸಂಭ್ರಮಿಸಿದರು.

ಇವರಿಬ್ಬರ ಆಟದ ಬಲದಿಂದ ಭಾರತ ತಂಡವು ವೆಸ್ಟ್ ಇಂಡೀಸ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಇನಿಂಗ್ಸ್ ಮುನ್ನಡೆ ಗಳಿಸಿ, ಬೃಹತ್ ಮೊತ್ತದತ್ತ ಹೆಜ್ಜೆಯಿಟ್ಟಿದೆ.

ವೆಸ್ಟ್ ಇಂಡೀಸ್ ತಂಡವು ಪಂದ್ಯದ ಮೊದಲ ದಿನವಾದ ಬುಧವಾರ 150 ರನ್ ಗಳಿಸಿ ಆಲೌಟ್ ಆಗಿತ್ತು. ಆರ್. ಅಶ್ವಿನ್ ಐದು ವಿಕೆಟ್ ಗಳಿಸಿ ಮಿಂಚಿದ್ದರು. ನಂತರ ಇನಿಂಗ್ಸ್ ಆರಂಭಿಸಿರುವ ಭಾರತ ತಂಡವು ಗುರುವಾರ ಚಹಾ ವಿರಾಮದ ವೇಳೆಗೆ 81 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 245 ರನ್ ಗಳಿಸಿದೆ. ತಂಡವು ಇದೀಗ 95 ರನ್‌ಗಳ ಮುನ್ನಡೆಯಲ್ಲಿದೆ.

ಜೈಸ್ವಾಲ್ (ಬ್ಯಾಟಿಂಗ್ 116; 244ಎ, 4X12) ಮತ್ತು ರೋಹಿತ್ (103 ರನ್; 221ಎ, 4X10, 6X2) ಮೊದಲ ವಿಕೆಟ್ ಜೊತೆಯಾಟದಲ್ಲಿ 229 ರನ್ ಸೇರಿಸಿ ಭದ್ರ ಬುನಾದಿ ಹಾಕಿದರು.

ಈಚೆಗೆ ಐಪಿಎಲ್‌ನಲ್ಲಿ ರನ್‌ಗಳ ಹೊಳೆ ಹರಿಸಿದ್ದ 21 ವರ್ಷದ ಜೈಸ್ವಾಲ್ ತಾವು ದೀರ್ಘ ಮಾದರಿಗೂ ಸೈ ಎಂದು ತೋರಿಸಿದರು. ತಮ್ಮ ಮೊದಲ ಪಂದ್ಯದಲ್ಲಿಯೇ ಶತಕ ಗಳಿಸಿದರು. ಈ ಎಡಗೈ ಬ್ಯಾಟರ್, ವಿಂಡೀಸ್ ಬೌಲರ್‌ಗಳ ಎಲ್ಲ ತಂತ್ರಗಳನ್ನೂ ಮೀರಿ ನಿಂತರು. ಯಾವುದೇ ಹಂತದಲ್ಲಿಯೂ ದೊಡ್ಡ ಹೊಡೆತಗಳಿಗೆ ಮುಂದಾಗದೇ ಕಲಾತ್ಮಕ ಆಟಕ್ಕೆ ಒತ್ತು ನೀಡಿದರು.

ಇನ್ನೊಂದೆಡೆ ಅನುಭವಿ ಬ್ಯಾಟರ್ ರೋಹಿತ್ ಕೂಡಾ ಲಯಕ್ಕೆ ಮರಳಿ ಸೊಗಸಾದ ಆಟವಾಡಿದರು. ಅಲಿಕ್ ಅಥನೇಝ್ ಓವರ್‌ನಲ್ಲಿ ಬೌಂಡರಿ ಗಳಿಸಿ ಶತಕ ಪೂರೈಸಿದ ಅವರು ಮುಂದಿನ ಎಸೆತದಲ್ಲಿ ವಿಕೆಟ್‌ಕೀಪರ್‌ಗೆ ಕ್ಯಾಚಿತ್ತು ಔಟಾದರು. ಶುಭಮನ್ ಗಿಲ್ (6) ವಿಫಲರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ವೆಸ್ಟ್ ಇಂಡೀಸ್: 64.3 ಓವರ್‌ಗಳಲ್ಲಿ 150. ಭಾರತ: 81 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 245 (ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ 110, ರೋಹಿತ್ ಶರ್ಮಾ 103, ಶುಭಮನ್ ಗಿಲ್ 6, ವಿರಾಟ್ ಕೊಹ್ಲಿ ಬ್ಯಾಟಿಂಗ್ 4, ಅಲಿಕ್ ಅಥನೇಝ್ 24ಕ್ಕೆ 1)

ಶತಕ ಗಳಿಸಿದ ಸಂಭ್ರಮದಲ್ಲಿ ಯಶಸ್ವಿ ಜೈಸ್ವಾಲ್ (ಎಡಚಿತ್ರ) ರೋಹಿತ್ ಶರ್ಮಾ ಬ್ಯಾಟಿಂಗ್ —ಎಎಫ್‌ಪಿ ಚಿತ್ರಗಳು

ಅಪ್ಪ–ಮಗನ ವಿಕೆಟ್ ಗಳಿಸಿದ ಅಶ್ವಿನ್

ಭಾರತ ತಂಡದ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಅವರು ವೆಸ್ಟ್ ಇಂಡೀಸ್ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಅಪರೂಪದ ದಾಖಲೆಯೊಂದನ್ನು ಮಾಡಿದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಅಪ್ಪ ಹಾಗೂ ಮಗ ಇಬ್ಬರ ವಿಕೆಟ್ ಪಡೆದ ವಿಶೇಷ ಸಾಧನೆ ಮಾಡಿದರು. ಪಂದ್ಯದ ಮೊದಲ ದಿನ ತೇಜನಾರಾಯಣ ಚಂದ್ರಪಾಲ್ ವಿಕೆಟ್ ಅನ್ನು ಅಶ್ವಿನ್ ಪಡೆದರು. ಶೇನ್ ಪಾಲ್ ಅವರ ತಂದೆ ಶಿವನಾರಾಯಣ ಚಂದ್ರಪಾಲ್ ಅವರ ವಿಕೆಟ್ ಕೂಡ 2011ರಲ್ಲಿ ಅಶ್ವಿನ್ ಪಾಲಾಗಿತ್ತು. ಅದು ಅಶ್ವಿನ್ ಅವರಿಗೆ ಪದಾರ್ಪಣೆಯ ಪಂದ್ಯವಾಗಿತ್ತು. ಅಪ್ಪ ಮತ್ತು ಮಗನ ವಿಕೆಟ್ ಪಡೆದ ವಿಶ್ವದ ಐದನೇ ಬೌಲರ್ ಎಂಬ ಹೆಗ್ಗಳಿಕೆ ಅಶ್ವಿನ್ ಅವರದ್ದು.

ಫೈನಲ್‌ಗೆ ಜಬೇರ್, ವೊಂಡ್ರೊಸೋವಾ

ಲಂಡನ್ (ಎಎಫ್‌ಪಿ/ ರಾಯಿಟರ್ಸ್): ಉಕ್ರೇನ್‌ನ ಎಲಿನಾ ಸ್ವಿಟೋಲಿನಾ ಅವರನ್ನು ನೇರ ಸೆಟ್‌ಗಳಿಂದ ಮಣಿಸಿದ ಜೆಕ್ ರಿಪಬ್ಲಿಕ್‌ನ ಮಾರ್ಕೆತ ವೊಂಡ್ರೊಸೋವಾ, ವಿಂಬಲ್ಡನ್ ಟೆನಿಸ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ವಿಶ್ವದ 42ನೇ ರ‍್ಯಾಂಕ್‌ನ ಆಟಗಾರ್ತಿ ವೊಂಡ್ರೊಸೋವಾ 6–3, 6–3 ರಿಂದ ಗೆದ್ದರು. ಶ್ರೇಯಾಂಕರಹಿತ ಆಟಗಾರ್ತಿಯೊಬ್ಬರು ವಿಂಬಲ್ಡನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ವಿಭಾಗದ ಪ್ರಶಸ್ತಿ ಸುತ್ತು ತಲುಪಿರುವುದು 60 ವರ್ಷಗಳಲ್ಲಿ ಇದೇ ಮೊದಲು.

ಶನಿವಾರ ನಡೆಯಲಿರುವ ಫೈನಲ್‌ನಲ್ಲಿ ಅವರು ಟ್ಯುನೀಷಿಯಾದ ಆನ್ಸ್ ಜಬೇರ್ ಅವರನ್ನು ಎದುರಿಸುವರು. ದಿನದ ಮತ್ತೊಂದು ನಾಲ್ಕರಘಟ್ಟದ ಪಂದ್ಯದಲ್ಲಿ ಜಬೇರ್ 6-7, 6-4, 6-3 ರಿಂದ ಬೆಲಾರಸ್‌ನ ಅರಿನಾ ಸಬಲೆಂಕಾ ಅವರನ್ನು ಮಣಿಸಿದರು.

ಎಡಗೈ ಆಟಗಾರ್ತಿ ವೊಂಡ್ರೊಸೋವಾ, ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಎರಡನೇ ಬಾರಿ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದ್ದಾರೆ. 2019 ರ ಫ್ರೆಂಚ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದರು.

ಪುರುಷರ ಸೆಮಿ ಇಂದು: ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ಪಂದ್ಯಗಳು ಶುಕ್ರವಾರ ನಡೆಯಲಿವೆ. ಮೊದಲ ಪಂದ್ಯದಲ್ಲಿ ಸರ್ಬಿಯದ ನೊವಾಕ್ ಜೊಕೊವಿಚ್, ಇಟಲಿಯ ಯಾನಿಕ್ ಸಿನೆರ್ ಅವರ ಸವಾಲು ಎದುರಿಸುವರು. ಎರಡನೇ ಪಂದ್ಯದಲ್ಲಿ ಅಗ್ರಶ್ರೇಯಾಂಕದ ಆಟಗಾರ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ರಷ್ಯಾದ ಡೇನಿಯಲ್ ಮೆಡ್ವೆಡೆವ್ ಹಣಾಹಣಿ ನಡೆಸಲಿದ್ದಾರೆ.

ಮಾರ್ಕೆತ ವೊಂಡ್ರೊಸೋವಾ ಗೆಲುವಿನ ಸಂಭ್ರಮ —ಎಎಫ್‌ಪಿ ಚಿತ್ರ

ಎಡವಿದ ಬೋಪಣ್ಣ–ಎಬ್ಡೆನ್

ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ವಿಂಬಲ್ಡನ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ನೆದರ್ಲೆಂಡ್ಸ್‌ನ ವೆಸ್ಲಿ ಕೂಲ್‌ಹೊಫ್– ಬ್ರಿಟನ್‌ನ ನೀಲ್ ಸ್ಕಪ್‌ಸ್ಕಿ ಜೋಡಿ 7–5, 6–4 ರಿಂದ ಸೋತಿತು.

43 ವರ್ಷದ ಬೋಪಣ್ಣ ಅವರು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದ ಅತ್ಯಂತ ಹಿರಿಯ ಆಟಗಾರ ಎನಿಸಿಕೊಳ್ಳುವ ಅವಕಾಶ ಕಳೆದುಕೊಂಡರು.

ವಿದ್ವತ್ ಬಿರುಗಾಳಿಗೆ ನಡುಗಿದ ಪಶ್ಚಿಮ

ದುಲೀಪ್ ಟ್ರೋಫಿ: ಪೃಥ್ವಿ ಶಾ ಅರ್ಧಶತಕ; ಪಾಂಚಾಲ್ ಬಳಗಕ್ಕೆ ಹಿನ್ನಡೆ ಭೀತಿ

• ಗಿರೀಶ ದೊಡ್ಡಮನಿ

ಬೆಂಗಳೂರು: ವಿದ್ವತ್ ಕಾವೇರಪ್ಪ ಬಿರುಗಾಳಿ ವೇಗದ ದಾಳಿಗೆ ತತ್ತರಿಸಿದ ಪಶ್ಚಿಮ ವಲಯವು ಇಲ್ಲಿ ನಡೆಯುತ್ತಿರುವ ದುಲೀಪ್ ಟ್ರೋಫಿ ಫೈನಲ್ ಪಂದ್ಯದ ಎರಡನೇ ದಿನದಾಟದಲ್ಲಿಯೇ ಮೊದಲ ಇನಿಂಗ್ಸ್ ಹಿನ್ನಡೆ ಅನುಭವಿಸುವ ಸಾಧ್ಯತೆಯನ್ನು ಮಳೆ ತಪ್ಪಿಸಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಗುರುವಾರ ದಕ್ಷಿಣ ವಲಯವು ಗಳಿಸಿದ್ದ 213 ರನ್‌ಗಳಿಗೆ ಉತ್ತರ ನೀಡುವ ಹಾದಿಯಲ್ಲಿ ಹಾಲಿ ಚಾಂಪಿಯನ್ ಪಶ್ಚಿಮ ವಲಯ ತಡಬಡಾಯಿಸಿದೆ. ವೇಗಿ ವಿದ್ವತ್ ತಮ್ಮ ಮೂರನೇ ಸ್ಪೆಲ್‌ನಲ್ಲಿ (10–3–22–4) ಪಶ್ಚಿಮ ವಲಯಕ್ಕೆ ಆಘಾತ ನೀಡಿದರು. ಮಂದ ಬೆಳಕು ಮತ್ತು ಮಳೆಯಿಂದಾಗಿ ದಿನದಾಟ ಮುಕ್ತಾಯವಾದಾಗ ತಂಡವು 45 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 129 ರನ್ ಗಳಿಸಿತು. ಆತಿಥ್ ಸೇಠ್ (ಬ್ಯಾಟಿಂಗ್ 5) ಮತ್ತು ಧರ್ಮೇಂದ್ರಸಿಂಹ ಜಡೇಜ (ಬ್ಯಾಟಿಂಗ್ 4) ಕ್ರೀಸ್‌ನಲ್ಲಿದ್ದಾರೆ. ಪೃಥ್ವಿ ಶಾ (65; 101ಎ) ಅವರೊಬ್ಬರೇ ಏಕಾಂಗಿ ಹೋರಾಟ ನಡೆಸಿದರು.

ಪಂದ್ಯದ ಮೊದಲ ದಿನವಾದ ಬುಧವಾರ ಸಂಜೆ ಮಂದಬೆಳಕಿನಿಂದಾಗಿ ಆಟ ನಿಂತಾಗಲೂ ದಕ್ಷಿಣ ವಲಯದ ಪರಿಸ್ಥಿತಿ ಇದೇ ರೀತಿ ಇತ್ತು. ತಂಡವು 65 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 182 ರನ್ ಗಳಿಸಿತ್ತು. ಆಗ ಕ್ರೀಸ್‌ನಲ್ಲಿ ಒಂಬತ್ತು ರನ್ ಗಳಿಸಿದ್ದ ವಾಷಿಂಗ್ಟನ್ ಸುಂದರ್ (ಬ್ಯಾಟಿಂಗ್ 9) ಮತ್ತು ಐದು ರನ್ ಗಳಿಸಿದ್ದ ವೈಶಾಖ ವಿಜಯಕುಮಾರ್ ಇದ್ದರು. ಎರಡನೇ ದಿನದಾಟದಲ್ಲಿ ವಾಷಿಂಗ್ಟನ್ ತಮ್ಮ ಮೊತ್ತಕ್ಕೆ ಮತ್ತೆ 13 ರನ್ ಸೇರಿಸಿದರು. ವೈಶಾಖ ಮತ್ತೆ ಎಂಟು ರನ್ ಹೊಡೆದರು. ಇದರಿಂದಾಗಿ ತಂಡದ ಮೊತ್ತವು 200ರ ಗಡಿ ದಾಟಿತು.

ಕನ್ನಡಿಗರ ಕಮಾಲ್: ದಕ್ಷಿಣ ವಲಯ ತಂಡದಲ್ಲಿ ಕರ್ನಾಟಕದ ವಿದ್ವತ್, ವೈಶಾಖ ವಿಜಯಕುಮಾರ್ (29ಕ್ಕೆ2) ಮತ್ತು ವಿ. ಕೌಶಿಕ್ (26ಕ್ಕೆ1) ಅವರು ಪಶ್ಚಿಮ ವಲಯದ ಘಟಾನುಘಟಿ ಬ್ಯಾಟರ್‌ಗಳಿಗೆ ಚಳ್ಳೆಹಣ್ಣು ತಿನ್ನಿಸಿದರು.

ಪರಿಣಾಮಕಾರಿ ಶಾರ್ಟ್‌ಪಿಚ್ ಎಸೆತಗಳು, ಸ್ವಿಂಗ್ ಮತ್ತು ನೇರ ಎಸೆತಗಳ ಮೂಲಕ ವಿದ್ವತ್ ಮಿಂಚಿದರು. ಅವರು ತಮ್ಮ ಮೊದಲ ಎರಡು ಸ್ಪೆಲ್‌ಗಳಲ್ಲಿ ಒಟ್ಟು ಆರು ಓವರ್‌ಗಳನ್ನು ಮಾಡಿದ್ದರು. ಆದರೆ ಮೂರನೇ ಸ್ಪೆಲ್‌ನಲ್ಲಿ ಅವರ ಬೌಲಿಂಗ್ ರಂಗೇರಿತು. ಪೃಥ್ವಿ ಶಾ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 70 ರನ್ ಗಳಿಸಿದ ಹರ್ವಿಕ್ ದೇಸಾಯಿ (21 ರನ್), ಸೂರ್ಯಕುಮಾರ್ ಯಾದವ್, ಚೇತೇಶ್ವರ್ ಪೂಜಾರ ಮತ್ತು ಸರ್ಫರಾಜ್ ಖಾನ್ ವಿಕೆಟ್‌ಗಳನ್ನು ಕಬಳಿಸುವಲ್ಲಿ ವಿದ್ವತ್ ಯಶಸ್ವಿಯಾದರು.

ಕರ್ನಾಟಕದವರೇ ಆದ ಆರ್. ಸಮರ್ಥ್ ಚುರುಕಾಗಿ ಜಿಗಿದು ಪಡೆದ ಕ್ಯಾಚ್‌ಗೆ ಚೇತೇಶ್ವರ್ ಪೂಜಾರ (9 ರನ್) ಔಟಾದರು. ಸರ್ಫರಾಜ್ ಖಾತೆ ತೆರೆಯುವ ಮುನ್ನವೇ ವಿದ್ವತ್ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಇನ್ನೊಂದೆಡೆ ವೈಶಾಖ ಅವರು ಅರ್ಧಶತಕ ಗಳಿಸಿದ್ದ ಪೃಥ್ವಿ ಶಾ ವಿಕೆಟ್ ಗಳಿಸಿದ್ದು ಪಶ್ಚಿಮ ವಲಯಕ್ಕೆ ದೊಡ್ಡ ಪೆಟ್ಟಾಯಿತು. ಬೌಂಡರಿಲೈನ್‌ನಲ್ಲಿ ಕ್ಯಾಚ್ ಪೃಥ್ವಿಯ ಕ್ಯಾಚ್ ಪಡೆಯುವಲ್ಲಿ ವಿದ್ವತ್ ಯಶಸ್ವಿಯಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ವಲಯ: 78.4 ಓವರ್‌ಗಳಲ್ಲಿ 213 (ವಾಷಿಂಗ್ಟನ್ ಸುಂದರ್ 22, ವೈಶಾಖ ವಿಜಯಕುಮಾರ್ 13, ಅರ್ಜನ್ ನಾಗಸವಾಲಾ 62ಕ್ಕೆ2, ಚಿಂತನ್ ಗಜ 27ಕ್ಕೆ2, ಶಮ್ಸ್ ಮುಲಾನಿ 29ಕ್ಕೆ2) ಪಶ್ಚಿಮ ವಲಯ: 45 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 129 (ಪೃಥ್ವಿ ಶಾ 65, ಹಾರ್ವಿಕ್ ದೇಸಾಯಿ 21, ವಿದ್ವತ್ ಕಾವೇರಪ್ಪ 44ಕ್ಕೆ4, ವೈಶಾಖ ವಿಜಯಕುಮಾರ್ 29ಕ್ಕೆ2)

ದುಲೀಪ್ ಟ್ರೋಫಿ ಫೈನಲ್ ಪಂದ್ಯದಲ್ಲಿ ನಾಲ್ಕು ವಿಕೆಟ್ ಗಳಿಸಿದ ದಕ್ಷಿಣ ವಲಯದ ವಿದ್ವತ್ ಕಾವೇರಪ್ಪ ಸಂಭ್ರಮ (ಎಡಚಿತ್ರ) ವಿಕೆಟ್ ಗಳಿಸಿದ ವೈಶಾಖ ವಿಜಯಕುಮಾರ್ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಮುಖ್ಯಾಂಶಗಳು

- ಆಕರ್ಷಕ ಕ್ಯಾಚ್ ಪಡೆದ ದಕ್ಷಿಣ ವಲಯದ ಆರ್. ಸಮರ್ಥ್
- ಸೆಮಿಫೈನಲ್‌ನಲ್ಲಿ ತಲಾ ಐದು ವಿಕೆಟ್ ಗಳಿಸಿದ್ದ ವಿದ್ವತ್, ವೈಶಾಖ
- ಮಳೆಯಿಂದಾಗಿ ಸುಮಾರು ಎರಡು ಗಂಟೆ ಆಟ ನಷ್ಟ

ನ್ಯಾಯಸಮ್ಮತ ಟ್ರಯಲ್ಸ್: ಆಗ್ರಹ

ನವದೆಹಲಿ (ಪಿಟಿಐ): ಪ್ರತಿಭಟನೆ ನಡೆಸಿದ್ದ 6 ಕುಸ್ತಿಪಟುಗಳಿಗೆ ಟ್ರಯಲ್ಸ್‌ನಲ್ಲಿ ವಿನಾಯಿತಿ ನೀಡಿರುವ ವರದಿಗಳ ಮಧ್ಯೆಯೇ, ಏಷ್ಯನ್ ಗೇಮ್ಸ್ ಟ್ರಯಲ್ಸ್ ಅನ್ನು ನ್ಯಾಯಸಮ್ಮತವಾಗಿ ನಡೆಸಬೇಕು ಎಂದು ವಿನಂತಿಸಿ ಏಷ್ಯನ್ ಚಾಂಪಿಯನ್‌ಷಿಪ್‌ನ ಪದಕ ವಿಜೇತರೂ ಸೇರಿದಂತೆ ಹಲವು ಮಹಿಳಾ ಕುಸ್ತಿಪಟುಗಳು ಪ್ರಧಾನಿ ನರೇಂದ್ರ ಮೋದಿ, ಭಾರತ ಒಲಿಂಪಿಕ್ ಸಂಸ್ಥೆ ಮತ್ತು ಅಡ್‌ಹಾಕ್ ಸಮಿತಿಗೆ ಪತ್ರ ಬರೆದಿದ್ದಾರೆ.

ಪ್ರತಿಭಟನೆಯಲ್ಲಿ ನಿರತರಾಗಿದ್ದ ಕುಸ್ತಿಪಟುಗಳಿಗೆ ಒಂದು ಹಂತದ ಆಯ್ಕೆ ಟ್ರಯಲ್ಸ್ ಸೇರಿದಂತೆ ಯಾವುದೇ ವಿನಾಯಿತಿ ನೀಡುವುದನ್ನು ತಾವು ಒಪ್ಪುವುದಿಲ್ಲ ಎಂದು ರೋಹ್ತಕ್ ಅಖಾಡ ವೊಂದರ 24 ಮಹಿಳಾ ಕುಸ್ತಿಪಟು ಗಳು ಭಾರತ ಕ್ರೀಡಾ ಪ್ರಾಧಿಕಾರದ ಮಹಾ ನಿರ್ದೇಶಕ ಸಂದೀಪ್ ಪ್ರಧಾನ್ ಅವರಿಗೂ ಪತ್ರ ಬರೆದಿದ್ದಾರೆ. ಜುಲೈ 23 ಮತ್ತು 24ರಂದು ಟ್ರಯಲ್ಸ್ ನಡೆಸುವುದಾಗಿ ಐಒಎ ನೇಮಿಸಿರುವ ಅಡ್‌ಹಾಕ್ ಸಮಿತಿ ಪ್ರಕಟಿಸಿದೆ.

ವರ್ಗಾವಣೆಯಲ್ಲಿ ತಲೆಹಾಕಿಲ್ಲ–ಎಚ್‌ಡಿಕೆ

ಒಂದನೇ ಪುಟದಿಂದ

'ಒಬ್ಬ ಅಧಿಕಾರಿಯನ್ನು ಏಳು ಬಾರಿ ವರ್ಗಾವಣೆ ಮಾಡಲಾಯಿತು ಎಂದು ಚಲುವರಾಯಸ್ವಾಮಿ ಆರೋಪಿಸಿದರು. ಆದರೆ ಆ ವಿಷಯ ನನಗೆ ಗೊತ್ತೇ ಇಲ್ಲ. ಆ ಸಂದರ್ಭದಲ್ಲಿ ವಿವಿಧ ಇಲಾಖೆಗಳ ವರ್ಗಾವಣೆಯಲ್ಲಿ ನಾನು ಹಸ್ತಕ್ಷೇಪ ಮಾಡಿದ್ದೇನೆ ಎಂಬ ಆರೋಪವನ್ನು ಸಾಬೀತು ಮಾಡಿ. ಇಲ್ಲವೇ ಅದರ ಬಗ್ಗೆ ಒಂದು ತನಿಖೆ ಮಾಡಿಸಿ' ಎಂದು ಅವರು ಸಿದ್ದರಾಮಯ್ಯ ಅವರಿಗೆ ತಿಳಿಸಿದರು.

'ನಾನು ನಿನ್ನೆ ಸದನದಲ್ಲಿ ದರ ಪಟ್ಟಿಯ ಬಗ್ಗೆ ಸಭಾಧ್ಯಕ್ಷರ ಗಮನಕ್ಕೆ ತಂದೆ. ಅದನ್ನು ಹೊರಗೆ ಯಾರು ಸೋರಿಕೆ ಮಾಡಿದರೋ ಗೊತ್ತಿಲ್ಲ. ಪತ್ರಿಕೆಯವರು ಬರೆದುಕೊಂಡಿದ್ದಾರೆ. ಹೊರಗೆ ಈ ರೀತಿ ಮಾತನಾಡಿಕೊಳ್ಳುತ್ತಿದ್ದಾರೆ. ನಿಮ್ಮ ಆಡಳಿತವನ್ನು ಸರಿಪಡಿಸಿಕೊಳ್ಳಿ ಎಂಬ ಉದ್ದೇಶದಿಂದ ಹೇಳಿದ್ದೇವೆ. ಸರಿ ಮಾಡಿಕೊಳ್ಳುವುದಿಲ್ಲ ಎಂದರೆ, ಜನರೇ ತೀರ್ಮಾನ ಮಾಡುತ್ತಾರೆ' ಎಂದರು.

'ನನ್ನ ಅವಧಿಯಲ್ಲಿ 48 ಮುಖ್ಯ ಎಂಜಿನಿಯರ್‌ಗಳ ಬಡ್ತಿ ಮಾಡಿದೆವು. ಯಾರೊಬ್ಬರಿಂದಲೂ ಬಿಡಿಗಾಸು ತೆಗೆದುಕೊಳ್ಳಲಿಲ್ಲ. ಈಗ ಹಲವು ಎಂಜಿನಿಯರ್‌ಗಳ ಬಡ್ತಿಗೆ ಸಂಬಂಧಿಸಿದ ಕಡತಗಳು ಹಾಗೇ ಬಿದ್ದಿವೆ' ಎಂದು ಹೇಳಿದರು.

'ಐಎಎಸ್ ಅಧಿಕಾರಿಗಳ ವರ್ಗಕ್ಕೂ ದರಪಟ್ಟಿ'

'ರಾಜ್ಯದಲ್ಲಿ ಐಎಎಸ್ ಅಧಿಕಾರಿಗಳ ವರ್ಗಾವಣೆಗೂ ದರ ನಿಗದಿಯಾಗಿದೆ. ಹಲವು ಕಡೆ ವರ್ಗಾವಣೆಗಾಗಿ ಜನರ ದಂಡು ಸೇರುವ ಬಗ್ಗೆ ನಾನು ಮೊದಲೇ ಹೇಳಿದ್ದೆ. ಈಗ ಎಚ್‌.ಡಿ. ಕುಮಾರಸ್ವಾಮಿ ಅವರು ಒಂದು ಇಲಾಖೆಯ ದರಪಟ್ಟಿ ಬಿಡುಗಡೆ ಮಾಡಿದ್ದಾರೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ದರಪಟ್ಟಿ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು. ವರ್ಗಾವಣೆಗೆ ದರ ಆ ಪಟ್ಟಿಯಲ್ಲಿರುವಂತೆ ಇದೆಯಾ? ಅಥವಾ ಜಾಸ್ತಿ ಇದೆಯಾ? ಎಂಬುದನ್ನು ಹೇಳಬೇಕು' ಎಂದು ಆಗ್ರಹಿಸಿದರು

'ಎಲ್ಲ ಇಲಾಖೆಗಳಲ್ಲೂ ದರಪಟ್ಟಿ'

'ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದ ಎರಡೇ ತಿಂಗಳಲ್ಲಿ ವರ್ಗಾವಣೆಯ ಕರಾಳ ದಂಧೆ ಬಯಲಾಗಿದೆ. ಕೃಷಿ ಇಲಾಖೆ ಮಾತ್ರವಲ್ಲ, ಎಲ್ಲ ಇಲಾಖೆಗಳಲ್ಲೂ ದರಪಟ್ಟಿ ಇದೆ' ಎಂದು ಬಿಜೆಪಿ ಶಾಸಕ ಆರ್. ಅಶೋಕ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎಚ್‌.ಡಿ. ಕುಮಾರಸ್ವಾಮಿ ಅವರು ಕೃಷಿ ಇಲಾಖೆಯ ವರ್ಗಾವಣೆ ದರ ಪಟ್ಟಿಯನ್ನು ಬುಧವಾರವೇ ನನಗೆ ಸದನದಲ್ಲಿ ತೋರಿಸಿದ್ದರು. ಅಲ್ಲಿಯೇ ಎಲ್ಲರಿಗೂ ತೋರಿಸಿದರೆ ಗಲಾಟೆ ಆಗಬಹುದು ಎಂದು ಮುಖ್ಯಮಂತ್ರಿಯವರಿ ಕಳುಹಿಸಿದ್ದಾರೆ' ಎಂದರು.

ರೇಟ್ ಕಾರ್ಡ್ ಮಾಡಿಲ್ಲ: ಚಲುವರಾಯಸ್ವಾಮಿ

'ನಮ್ಮ ಇಲಾಖೆಯಲ್ಲಿ ವರ್ಗಾವಣೆಗಾಗಿ ಯಾವುದೇ ರೇಟ್ ಕಾರ್ಡ್ ಮಾಡಿಲ್ಲ. 5 ಗ್ಯಾರಂಟಿಗಳ ಜಾರಿ, ಕೃಷಿ ಚಟುವಟಿಕೆ, ಬಿತ್ತನೆ, ರಸಗೊಬ್ಬರ ವಿತರಣೆಯ ಬಗ್ಗೆ ಗಮನಹರಿಸಿದ್ದೇವೆ. ಕುಮಾರಸ್ವಾಮಿ ಆರೋಪಗಳಲ್ಲಿ ಯಾವುದೇ ಹುರುಳಿಲ್ಲ' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

'ಪ್ರಜಾವಾಣಿ'ಯಲ್ಲಿ ದರ ಪಟ್ಟಿ ಪ್ರಕಟ ಆಗಿದೆ. ಅದನ್ನು ಇವರೇ ಕೊಟ್ಟಿದ್ದು, ಅವರು ಕೊಡದೇ ಹೇಗೆ ಪ್ರಕಟವಾಗುತ್ತದೆ' ಎಂದು ಪ್ರಶ್ನಿಸಿದರು.

'2018 ರಲ್ಲಿ ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದಾಗ ಕಾರ್ಯದರ್ಶಿ ಹುದ್ದೆಯಿಂದ ಹಿಡಿದು ವಿವಿಧ ಹುದ್ದೆಗಳಿಗೆ ಕೋಟಿಗಟ್ಟಲೆ ದರ ಫಿಕ್ಸ್ ಆಗಿತ್ತು ಎಂದು 2018ರಲ್ಲಿ 'ಪ್ರಜಾವಾಣಿ'ಯಲ್ಲೇ ದರ ಪಟ್ಟಿ ಪ್ರಕಟವಾಗಿತ್ತು. ಈಗ ನನಗೆ ಮಾಡಲು ಬೇಕಾದಷ್ಟು ಕೆಲಸಗಳಿವೆ, ದರಪಟ್ಟಿ ಬಿಡುಗಡೆ ಮಾಡುವ ಅವಶ್ಯಕತೆ ನನಗಿಲ್ಲ' ಎಂದರು.

'ಇವರ ಅವಧಿಯಲ್ಲಿ ವಿಜಯಶಂಕರ್ ಎಂಬ ಅಧಿಕಾರಿ ಆತ್ಮಹತ್ಯೆ ಮಾಡಿಕೊಂಡರು. ಇವರಿಗೆ ಕೆಪಿಎಸ್‌ಸಿ ಕಾರ್ಯದರ್ಶಿ ಮಾಡುವುದಾಗಿ ಹೇಳಿ ಮಾಡಲಿಲ್ಲ ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡರು' ಎಂದು ದೂರಿದರು.

'ನಮ್ಮ ಸರ್ಕಾರ ಬಂದಿರುವುದು ಇವರಿಗೆ ಸಹಿಸಲು ಆಗುತ್ತಿಲ್ಲ. ಬೇರೊಬ್ಬರ ಮೇಲೆ ದ್ವೇಷ ಕಾರುವುದೇ ಇವರ ಕೆಲಸ' ಎಂದು ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

ಇದಕ್ಕೂ ಮೊದಲು ಮಾತನಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 'ನಿನ್ನೆ ಕುಮಾರಸ್ವಾಮಿ ಮಾತನಾಡುವಾಗ ವರ್ಗಾವಣೆ ದಂಧೆಯ ದರ ಪಟ್ಟಿ ಕೊಡುತ್ತೇನೆ ಎಂದು ಹೇಳಿ ಕೊಡಲಿಲ್ಲ. ಇವತ್ತು 'ಪ್ರಜಾವಾಣಿ'ಯಲ್ಲಿ ದೊಡ್ಡದಾಗಿ ಬಂದಿದೆ. ನಿಮಗೇನಾದರೂ ತೋರಿಸಿದ್ದರೋ' ಎಂದು ಅವರು ಸಭಾಧ್ಯಕ್ಷರನ್ನು ಪ್ರಶ್ನಿಸಿದರು. ಇದಕ್ಕೆ ಉತ್ತರಿಸಿದ ಕುಮಾರಸ್ವಾಮಿ, 'ಕೊಡಿ ಎಂದು ನೀವು ಕೇಳಲಿಲ್ಲ. ಈಗಲೂ ಕೊಡಲು ಸಿದ್ಧನಿದ್ದೇನೆ. ಪತ್ರಿಕೆಯವರು ದರ ಪಟ್ಟಿ ಬರೆದರೆ ನಾನು ಜವಾಬ್ದಾರನಲ್ಲ. ನೀವು ಹಿಂದೆ ಬಿಜೆಪಿ ಅವಧಿಯ ದರ ಪಟ್ಟಿಯ ಜಾಹೀರಾತು ಕೊಟ್ಟು ಆರೋಪ ಮಾಡಿದ್ದಿರಿ. ಈಗ ತನಿಖೆ ಮಾಡಿ' ಎಂದರು.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

ನಂ. 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79 ಫ್ಯಾಕ್ಸ್: 080–22268667
ಇ–ಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in

ಸಂಖ್ಯೆ: ಕೆ.ಇ.ಆರ್.ಸಿ/7-CON-2022-23/1276/348 ದಿನಾಂಕ: 12–07–2023

ಪ್ರಕಟಣೆ

ವಿಷಯ: ದಿನದ ಸಮಯಾಧಾರಿತ (Time of Day) ಇತ್ಯರ್ಥ ಕಾರ್ಯವಿಧಾನದ ಮೇಲೆ ಚರ್ಚಾ ಪತ್ರದ ಬಗ್ಗೆ.

ಒಳಹರಿಸಿದ (Injection) / ಬಳಕೆಯಾದ (drawn) ವಿದ್ಯುತ್ ನ ಇತ್ಯರ್ಥ ಕಾರ್ಯವಿಧಾನದ ಮೇಲೆ ಒಂದು ಚರ್ಚಾಪತ್ರವನ್ನು ಈ ಆಯೋಗವು ಹೊರಡಿಸಿದೆ ಹಾಗೂ ಈ ಚರ್ಚಾಪತ್ರ ಕುರಿತಂತೆ ಸಾರ್ವಜನಿಕರು / ಆಸಕ್ತರಿಂದ ಆಕ್ಷೇಪಣೆ / ಟಿಪ್ಪಣಿ / ಅಭಿಪ್ರಾಯ ಹಾಗೂ ಸಲಹೆಗಳನ್ನು ಆಹ್ವಾನಿಸುತ್ತದೆ.

ಸದರಿ ಚರ್ಚಾ ಪತ್ರವನ್ನು ಆಯೋಗದ ಅಂತರ್ಜಾಲ ತಾಣ: **https://kerc.karnataka.gov.in** ಯಲ್ಲಿ ಪ್ರಕಟಿಸಲಾಗಿದೆ. ಆಸಕ್ತರು / ಸಾರ್ವಜನಿಕರು ಆಕ್ಷೇಪಣೆ / ಟಿಪ್ಪಣಿ / ಅಭಿಪ್ರಾಯ ಹಾಗೂ ಸಲಹೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟವಾದ ದಿನದಿಂದ **15 ದಿನಗಳ ಒಳಗೆ ಲಿಖಿತರೂಪದಲ್ಲಿ ಆಯೋಗದ ಕಾರ್ಯದರ್ಶಿಯವರಿಗೆ** ಸಲ್ಲಿಸಲು ಕೋರಲಾಗಿದೆ.

ಸಹಿ/– ಕಾರ್ಯದರ್ಶಿ
ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

ವಾಸಾಸಂಇ/ವಾ.ಪ್ರ/533/2023–24

ಕರ್ನಾಟಕ ಸರ್ಕಾರ
ಗ್ರಾಮ ಪಂಚಾಯತ ಕಾರ್ಯಾಲಯ ಅಂತೂರ–582205
ತಾಲೂಕ : ಗದಗ ಜಿಲ್ಲಾ : ಗದಗ
e-mail : antur.gdg.gdg@gmail.com

ನಂ: ಗ್ರಾ.ಪಂ./ಅಂತೂರ/ಟೆಂಡರ/2023–24/ವಹಿ01 ದಿನಾಂಕ: 13–07–2023

ಇ-ಪ್ರೊಕ್ಯೂರಮೆಂಟ ಟೆಂಡರ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಪಾರದರ್ಶಕತೆ ಆಕ್ಟ್–2000 ನಿಯಮದಂತೆ ನಿಯಮಗಳನ್ವಯ ಅರ್ಹ ಗುತ್ತೇದಾರ/ಸರಬುದಾರ ರಿಂದ ಇ–ಪ್ರೋಕ್ಯೂರಮೆಂಟ್ ಪೋರ್ಟಲ್, ಮುಖಾಂತರ **02 ಕಾಮಗಾರಿಗಳ ಗುಣಮಟ್ಟದ ಸಾಮಗ್ರಿ** ಪೂರೈಕೆಯ ಟೆಂಡರನ್ನು ಆಹ್ವಾನಿಸಲಾಗಿದೆ. ಲೆಕ್ಕ ಶೀರ್ಷಿಕೆ: 2022–23ನೇ ಸಾಲಿನ **MGNREGA** ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಗುತ್ತೇದಾರ/ಸರಬುದಾರರು ಇ–ಪ್ರೋಕ್ಯೂರಮೆಂಟ್ ಪೋರ್ಟಲ್, **https://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆಗಳು ಈ ಕೆಳಗಿನಂತೆ ಇರುತ್ತವೆ.

1) **INDENT NO** : **RDPR/2023-24/ND0009**
ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. : **Rs: 696568.12** (Rupees: Six Lakhs Ninety-six Thousand Five hundred Sixty-eight and Twelve Paisa Only.)
2) **INDENT NO** : **RDPR/2023-24/ND0008**
ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ. : **Rs: 1395763.81** (Rupees: Thirteen Lakhs Ninety-five Thousand Seven hundred Sixty- three and Eighty-one Paisa Only.)

ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಇ–ಪ್ರೋಕ್ಯೂರಮೆಂಟನಂತೆ, ಇ.ಎಂ.ಡಿ. ಸಂಬಂದಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.

ಇ–ಪ್ರೋಕ್ಯೂರಮೆಂಟ ಮುಖಾಂತರ ಅರ್ಜಿ ಹಾಗೂ ಶೆಡ್ಯೂಲ್–ಬಿ ಯನ್ನು ವೆಬಸೈಟಿನಲ್ಲಿ ಭರ್ತಿ ಮಾಡಿ ಸಲ್ಲಿಸುವ **ದಿನಾಂಕ: 13–07–2023 ರಿಂದ 20–07–2023 ರಂದು 16.00 ಗಂಟೆಯವರೆಗೆ.** ಟೆಂಡರ ತೆರೆಯುವ **ದಿನಾಂಕ: 21–07–2023 ರಂದು 17.30 ಗಂಟೆಗೆ** ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು ಈ ಕಚೇರಿಯ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/–
ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ ಅಂತೂರ, ತಾಲೂಕ/ಜಿಲ್ಲಾ : ಗದಗ.

ವಾ.ಸಾ.ಇ./ಗದಗ/67/2023–24/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್
(ಕರ್ನಾಟಕ ಸರ್ಕಾರದ ಉದ್ಯಮ)
ಗ್ರಾಮೀಣಾಭಿವೃದ್ಧಿ ಭವನ, 4 ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು - 560 009

ಸಂ: ಕೆಆರ್‌ಐಡಿಎಲ್/ಡಬ್ಲ್ಯೂಕೆಎಸ್/ಎಸ್‌ಟಿಎಲ್/ಟಿಎನ್‌ಡಿ/2023–24 ದಿನಾಂಕ: 12.07.2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕದಾದ್ಯಂತ ಇರುವ ಕೆಆರ್‌ಐಡಿಎಲ್(ಕೆಎಲ್‌ಎಸಿ) ಯೋಜನೆಗಳಿಗೆ ಐಎಸ್ 1786 ಎಫ್‌ಇ 550 ಅನ್ವಯ ಟಿಎಂಟಿ ಸ್ಟೀಲ್ ಬಾರ್‌ಗಳ ಸರಬರಾಜಿಗಾಗಿ ಕಳೆದ 3 ಹಣಕಾಸಿನ ವರ್ಷಗಳಲ್ಲಿ ಕೆಳಗೆ ತಿಳಿಸಿರುವ ತಃಖ್ತೆಯಲ್ಲಿ ನಿಗದಿಪಡಿಸಿರುವ ವಾರ್ಷಿಕ ವಹಿವಾಟು ಹೊಂದಿರುವ ತಯಾರಕರುಗಳು/ಪ್ರಾಥಮಿಕ ತಯಾರಕರುಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸಂಸ್ಥೆಯು ಕಳೆದ ಮೂರು ಹಣಕಾಸಿನ ವರ್ಷಗಳಲ್ಲಿ ಸರ್ಕಾರದ ಇಲಾಖೆಗಳು/ಅರೆ ಸರ್ಕಾರಿ ಇಲಾಖೆಗಳು/ ಸಾರ್ವಜನಿಕ ವಲಯದ ಉದ್ದಿಮೆಗಳು ಮತ್ತು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳು/ಕಂಪನಿಗಳಿಗೆ 1000 ಎಂಟಿಯ ಇದೇ ರೀತಿಯ ಸರಬರಾಜನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿರಬೇಕು. ಆಸಕ್ತಿಯುಳ್ಳ ತಯಾರಕರು ಟೆಂಡರ್‌ನಲ್ಲಿ ಭಾಗವಹಿಸಬಹುದು ಮತ್ತು ಇ–ಆಡಳಿತ ಕಾರ್ಯಾಲಯದ ವೆಬ್‌ಸೈಟ್: **www.kppp.karnataka.gov.in** ಮೂಲಕ ಮಾತ್ರ ವಿವರಗಳನ್ನು ನೋಡಬಹುದು, ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಅರ್ಜಿ ಸಲ್ಲಿಸಬಹುದು. ಸಂಪರ್ಕ ಸಂಖ್ಯೆ: +91–8046010000 +91–8068948777.

ಕ್ರ. ಸಂ.	ಟೆಂಡರ್‌ನ ವಿವರ	ಪ್ರಮಾಣ ಎಂ.ಟಿ ಗಳಲ್ಲಿ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ	ಇಎಂಡಿ ಮೊತ್ತ ರೂ. ಲಕ್ಷಗಳಲ್ಲಿ	ಸಂಸ್ಥೆಯು ಹೊಂದಿರಬೇಕಾದ ವಾರ್ಷಿಕ ವಹಿವಾಟು ರೂ. ಲಕ್ಷಗಳಲ್ಲಿ
1	ಟೆಂಡರ್ ಭಾಗ–1 ಬೆಂಗಳೂರು ಮತ್ತು ಬಿಬಿಎಂಪಿ ವಲಯ	601	408.68	6.15	1310.00
2	ಟೆಂಡರ್ ಭಾಗ–II, ಸೆಂಟ್ರಲ್ (ಚಿತ್ರದುರ್ಗ) ವಲಯ	880	598.40	8.97	1915.00
3	ಟೆಂಡರ್ ಭಾಗ–III ಮೈಸೂರು ವಲಯ	719	488.92	7.35	1564.00
4	ಟೆಂಡರ್ ಭಾಗ–IV ಬೆಳಗಾವಿ ವಲಯ	815	553.38	8.30	1770.00
5	ಟೆಂಡರ್ ಭಾಗ–V ಕಲಬುರಗಿ ವಲಯ	485	329.31	4.95	1050.00

ಸರಬರಾಜು ಮಾಡುವ ಅವಧಿ: ಸರಬರಾಜು ಆದೇಶ ನೀಡಿದ ದಿನಾಂಕದಿಂದ ಮೂರು ತಿಂಗಳು. ವಿಚಾರಣೆಗೆ ಕಡೆಯ ದಿನಾಂಕ ಮತ್ತು ಸಮಯ: **01.08.2023 ರಂದು ಮಧ್ಯಾಹ್ನ 2.00 ಗಂಟೆವರೆಗೆ.** ಟೆಂಡರ್ ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ: **02.08.2023 ರಂದು ಸಂಜೆ 4.00 ಗಂಟೆವರೆಗೆ.** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **04.08.2023 ರಂದು ಸಂಜೆ 4.00 ಗಂಟೆಗೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: 05.08.2023 ರಂದು ಸಂಜೆ 4.00 ಗಂಟೆಗೆ.**

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಮುಖ್ಯ ಅಭಿಯಂತರರು (ಬೆಂಗಳೂರು)
ಕರ್ನಾಟಕ ರೂರಲ್ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಲಿಮಿಟೆಡ್, ಬೆಂಗಳೂರು–09. ದೂರವಾಣಿ: 080–28015604,
ಇ–ಮೇಲ್: ddworkskridl@gmail.com ಮಾಹಿತಿಗಾಗಿ www.kridl.org.in ಇಲ್ಲಿಗೆ ಲಾಗಾನ್ ಆಗಿ.

ವಾಸಾಸಂಇ/ಉನಿ-ಸಿ.ಪಿ/539/ಕೆಎಸ್‌ಎಂಸಿಎ/2023-24 ಸಹಿ/–ಮುಖ್ಯ ಅಭಿಯಂತರರು (ಬೆಂಗಳೂರು)

Karnataka Renewable Energy Development Limited
(A Government of Karnataka Undertaking)
#6/13/1, KREDL Office Building, 10th Block, 2nd Phase, Nagarabhavi, Bengaluru-560072.

SHORT-TERM E-TENDER NOTICE

The KREDL, Corporate office, Bengaluru - 560 072, invited electronic bids under two cover system duly uploaded by the manufacturers of wind turbine generators OR Operation and Maintenance experience in wind power plants. The details of the bids are available in e-procurement portal (**http://kppp.karnataka.gov.in**). For more details please contact 080-2228 2220 during office hours, interested bidders need to register with e-procurement portal for participation in the bid.

Sl. No.	Enquiry No.	Particulars	Amount put to Tender Rs. in Lakh	EMD amount Rs. in Lakh
1	KRED/08/Sogi-O&M/F-197 (Vol.5)/ Call-2/ 2023, DATE: 12-07-2023	Operation and maintenance of 2 Nos. of 1.25 MW capacity WTG and other related equipments at Sogi Village Huvinahadagali Taluk, Ballari District for a period of 36 Months.	78.75	1.6
2	KRED/08/MVH-O&M-8.4 MW/F-1984/2023, DATE: 12-07-2023	Operation and maintenance of 4 Nos. of 2.1 MW capacity WTG and other related equipments at Mavinahunda Village, Raybagh Taluk, Belagavi District for a period of 36 Months.	264.6	4
3	KRED/08/MVH-O&M-0.5 MW/F-727(Vol.6)/2023 Date: 12-07-2023	Operation and maintenance of 1 No. of 500 kW capacity WTG and other related equipments at Mavinahunda Village, Raybagh Taluk, Belagavi District for period of 36 Months.	15.75	0.4

Schedule of Events

Bid documents available on e-portal : 17-07-2023 to 05-08-2023 up to 16.00 Hrs
Last date for submission of Queries : 20-07-2023 at 16.00 Hrs
Pre-bid meeting at KREDL office, Nagarabhavi, Bengaluru : 24-07-2023 at 11.00 Hrs
Last date and time for submission of Bid : 05-08-2023 up to 16.00 Hrs
Opening of Techno- Commercial Bid : 08-08-2023 at 16.15 Hrs
Opening of Financial Bid : will be intimated later to responsive bidders

a) The bidders can view the tender details / download the details consisting of qualifying requirements, eligibility criteria of bidders, scope of the service to be provided and terms & conditions of contract to be complied from the website **https://kppp.karnataka.gov.in**
b) For further information, please contact **help desk phone number +91-8046010000/ +91- 8068948777** of e-procurement department or KREDL Phone Number: **080 - 22282220.**

Sd/- Asst. General Manager, Wind, KREDL

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ • ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದ ಜ್ಯೋತಿ ಯರ್ರಾಜಿ

ಭಾರತ ಅಥ್ಲೀಟುಗಳಿಗೆ ಮೂರು ಚಿನ್ನ

ಬ್ಯಾಂಕಾಕ್ (ಪಿಟಿಐ): ಭಾರತದ ಅಥ್ಲೀಟುಗಳು ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಸ್ಫೂರ್ತಿಯುತ ಪ್ರದರ್ಶನ ನೀಡಿ ಮೂರು ಚಿನ್ನದ ಪದಕಗಳನ್ನು ಗೆದ್ದುಕೊಂಡರು. ಮಹಿಳೆಯರ 100 ಮೀ. ಹರ್ಡ-ಲ್ಸ್‌ನಲ್ಲಿ ಭರವಸೆಯ ಓಟಗಾರ್ತಿ ಜ್ಯೋತಿ ಯರ್ರಾಜಿ ಅಂತರರಾಷ್ಟ್ರೀಯ ಕೂಟದಲ್ಲಿ ಮೊದಲ ಬಾರಿ ಅಗ್ರಸ್ಥಾನ ಪಡೆದರು. ಪುರುಷರ 1,500 ಮೀ. ಓಟವನ್ನು ಅಜಯ್ ಕುಮಾರ್ ಸರೋಜ್ ಅಮೋಘವಾಗಿ ಓಡಿ ಮೊದಲಿಗರಾದರು.

ಕಾಮನ್‌ವೆಲ್ತ್ ಗೇಮ್ಸ್ ಬೆಳ್ಳಿ ವಿಜೇತ ಅಬ್ದುಲ್ಲಾ ಅಬೂಬಕ್ಕರ್ ಪುರುಷರ ಟ್ರಿಪಲ್‌ಜಂಪ್ ಸ್ಪರ್ಧೆಯಲ್ಲಿ ಭಾರತಕ್ಕೆ ದಿನದ ಮೂರನೇ ಚಿನ್ನ ಗೆದ್ದುಕೊಟ್ಟರು.

ಒಟ್ಟಾರೆ ಎರಡನೇ ದಿನ ಭಾರತದ ಸಾಧನೆ ಗಮನಾರ್ಹವೆನಿಸಿತು. ಮಳೆಯಿಂದ ತೊಪ್ಪೆಯಾಗಿದ್ದ ಸುಪ ಚಲಾಸೈ ಕ್ರೀಡಾಂಗಣದಲ್ಲಿ ಗುರುವಾರ ಗೆಲ್ಲಲು ಇದ್ದ 10 ಚಿನ್ನಗಳಲ್ಲಿ ಮೂರು ಚಿನ್ನಗಳ ಜೊತೆಗೆ ಎರಡು ಕಂಚಿನ ಪದಕಗಳು ಭಾರತಕ್ಕೆ ದಕ್ಕಿದವು. ಮಹಿ ಳೆಯರ 400 ಮೀ. ಓಟದಲ್ಲಿ ಐಶ್ವರ್ಯಾ ಮಿಶ್ರಾ (ಕಾಲ: 53.07 ಸೆ.) ಮತ್ತು ಡೆಕಾಥ್ಲಾನ್‌ನಲ್ಲಿ ತೇಜಸ್ವಿನ್ ಶಂಕರ್ ಕಂಚಿನ ಪದಕಗಳನ್ನು ಗೆದ್ದುಕೊಂಡರು.

23 ವರ್ಷದ ಜ್ಯೋತಿ 100 ಮೀ. ಹರ್ಡಲ್ಸ್ ಓಟವನ್ನು 13.09 ಸೆ.ಗಳಲ್ಲಿ ಮುಗಿಸಿ ಭಾರತಕ್ಕೆ ಈ ಕೂಟದ ಮೊದಲ ಚಿನ್ನ ಗಳಿಸಿಕೊಟ್ಟರು. ಜಪಾನಿನ ಅಥ್ಲೀಟುಗಳಾದ ತೆರದಾ ಅಸುಕಾ (13.13 ಸೆ.) ಮತ್ತು ಓಕಿ ಮಾಸುಮಿ (13.26 ಸೆ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಜ್ಯೋತಿ ಯರ್ರಾಜಿ

ಅಬ್ದುಲ್ಲಾ ಅಬೂಬಕ್ಕರ್

ಅಜಯ್ ಕುಮಾರ್ ಸರೋಜ್

ಈ ಓಟದಲ್ಲಿ ರಾಷ್ಟ್ರೀಯ ದಾಖಲೆ (12.82 ಸೆ.)ಯನ್ನೂ ಯರ್ರಾಜಿ ಹೊಂದಿದ್ದಾರೆ. ಭುವನೇಶ್ವರದ-ಲ್ಲಿ ನಡೆದಿದ್ದ ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಅವರು ಈ ಓಟವನ್ನು 12.82 ಸೆ.ಗಳಲ್ಲಿ ಪೂರೈಸಿದ್ದರು. ಆದರೆ ಉತ್ತಮ ಸಾಧನೆ ತೋರಲು ಮಳೆಯಿಂದ ನೆನೆದ ಟ್ರ್ಯಾಕ್ ಸಹಕಾರಿಯಾಗಿರಲಿಲ್ಲ.

'ಐದನೇ ತಡೆ (ಹರ್ಡಲ್) ಹಂತದಿಂದ ಲೀಡ್ ಪಡೆದೆ. ಏಳನೇ ತಡೆ ದಾಟುವ ವೇಳೆ ಸ್ವಲ್ಪ ಜಾರಿದ್ದೆ. ಇದೇ ಕಾರಣದಿಂದ 13 ಸೆಕೆಂಡುಗಳ ಒಳಗೆ ಗುರಿತಲುಪಲಾಗಲಿಲ್ಲ' ಎಂದು ಆನ್‌ಲೈನ್ ಸಂವಾದದಲ್ಲಿ ತಿಳಿಸಿದರು.

ಪುರುಷರ 1,500 ಮೀ. ಓಟದಲ್ಲಿ 26 ವರ್ಷದ ಸರೋಜ್ ಅಂತಿಮ ಸುತ್ತು ಬಾಕಿಯಿರುವಾಗ ಪದಕ ಗೆಲ್ಲುವಂತೆ ಕಂಡಿರಲಿಲ್ಲ. ಆದರೆ, ಕೊನೆಯ ತಿರುವಿನಲ್ಲಿ ಅವರು ಇಬ್ಬರು ಎದುರಾ-ಳಿಗಳನ್ನು ಹಿಂದಕ್ಕೆ ಹಾಕಿ, 3ನಿ.41.51 ಸೆ.ಗಳ ಸಾಧನೆಯೊಡನೆ ಚಿನ್ನ ಗೆದ್ದರು. ಇದು ಅವರ ಶ್ರೇಷ್ಠ ಸಾಧನೆಗಿಂತ ಕಡಿಮೆ. ಅಮೆರಿಕದಲ್ಲಿ ಕಳೆದ ತಿಂಗಳು ನಡೆದ ಕೂಟದಲ್ಲಿ ಅವರು 3ನಿ.39.19 ಸೆ.ಗಳಲ್ಲಿ ಓಟ ಪೂರೈಸಿದ್ದರು.

ಏಷ್ಯನ್ ಅಥ್ಲೆಟಿಕ್ ಚಾಂಪಿಯನ್‌ಷಿ-ಪ್‌ನಲ್ಲಿ ಸರೋಜ್ ಅವರಿಗೆ ಇದು ಸತತ ಮೂರನೇ ಪದಕ. ಅಮೆರಿಕದಲ್ಲಿ ಒಂದು ತಿಂಗಳು ತರಬೇತಿ ಪಡೆದಿದ್ದ ಸರೋಜ್ ಈ ಹಿಂದೆ, 2017ರಲ್ಲಿ (ಭುವನೇಶ್ವರ) ಚಿನ್ನ ಮತ್ತು 2019ರಲ್ಲಿ (ದೋಹಾ) ಬೆಳ್ಳಿಯ ಪದಕ ಜಯಿಸಿದ್ದರು.

'ಅಮೆರಿಕದ ಕೊಲರಾಡೊ ಸ್ಪ್ರಿಂ-ಗ್ಸ್‌ನಲ್ಲಿ ಈ ತಿಂಗಳ ಆರಂಭದಲ್ಲಿ ಪಡೆದ ತರಬೇತಿಯಿಂದ ಇಲ್ಲಿಗೆ ವಿಶ್ವಾಸದಿಂದಲೇ ಬಂದಿದ್ದೆ' ಎಂದು ಸರೋಜ್ ಹೇಳಿದರು.

27 ವರ್ಷದ ಅಬೂಬಕ್ಕರ್ ಟ್ರಿಪ-ಲ್‌ಜಂಪ್‌ನಲ್ಲಿ ಚಿನ್ನ ಗೆಲ್ಲುವ ಹಾದಿಯಲ್ಲಿ 16.92 ಮೀಟರ್ ಜಿಗಿದು ಋತುವಿನ ಅತ್ಯುತ್ತಮ ಸಾಧನೆ ದಾಖಲಿಸಿದರು. ಜಪಾನ್‌ನ ಇಕೆಹಾತಾ ಹಿಕಾರು (16.73 ಮೀ.) ಮತ್ತು ಕೊರಿಯಾದ ಜಾಂಗ್‌ವೂ ಕಿಮ್ (16.59 ಮೀ.) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ಅವರ ಮೊದಲ ಯತ್ನ ಫೌಲ್‌ನೊಂದಿಗೆ ಆರಂಭವಾಯಿತು. ಆದರೆ ನಾಲ್ಕನೇ ಯತ್ನಕ್ಕೆ ಚಿನ್ನ ಒಲಿಯಿತು.

2 ದಿನಗಳ ಅವಧಿಯಲ್ಲಿ 10 ಸ್ಪರ್ಧೆ-ಗಳನ್ನು ಪೂರೈಸಿದ ತೇಜಸ್ವಿನ್ ಶಂಕರ್ ಡೆಕಾಥ್ಲಾನ್‌ನಲ್ಲಿ 7,527 ಪಾಯಿಂಟ್ಸ್ ಸಂಗ್ರಹಿಸಿ ಕಂಚಿನ ಪದಕ ಗಳಿಸಿದರು. ಇದು ಅವರ ಶ್ರೇಷ್ಠ ಸಾಧನೆ ಯೇನಲ್ಲ. ಕಳೆದ ತಿಂಗಳು ರಾಷ್ಟ್ರೀಯ ಅಂತರ ರಾಜ್ಯ ಅಥ್ಲೆಟಿಕ್ ಕೂಟದಲ್ಲಿ ಅವರು 7,576 ಪಾಯಿಂಟ್ಸ್ ಕಲೆಹಾಕಿದ್ದರು.

'ಷಾಟ್‌ಪಟ್, ಪೋಲ್‌ವಾಲ್ಟ್, ಡಿಸ್ಕಸ್ ಮತ್ತು ಜಾವೆಲಿನ್‌ನಲ್ಲಿ ನಾನು ಇನ್ನಷ್ಟು ಸುಧಾರಣೆ ಕಾಣಬೇಕಾಗಿದೆ. ಇದಕ್ಕಾಗಿ ಹೆಚ್ಚು ಸ್ಪರ್ಧೆಗಳಲ್ಲಿ ಪಾಲ್ಗೊ-ಳ್ಳಬೇಕಾಗಿದೆ. ಒಂದು ವರ್ಷದಿಂದ ಡೆಕಾಥ್ಲಾನ್‌ನಲ್ಲಿ ಭಾಗವಹಿಸುತ್ತಿದ್ದೇನೆ. ನನ್ನ ಎದುರಾಳಿಗಳು ಸಾಕಷ್ಟು ಅನುಭ-ವಿಗಳಾಗಿದ್ದರು' ಎಂದು ಹೈಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ತೇಜಸ್ವಿನ್ ಶಂಕರ್ ಪ್ರತಿಕ್ರಿಯಿಸಿದರು.

ಕೂಟದ ಮೊದಲ ದಿನವಾದ ಬುಧವಾರ, ರೈಲ್ವೇಸ್‌ನ ಅಭಿಷೇಕ್ ಪಾಲ್ 10,000 ಮೀ. ಓಟದ ಸ್ಪರ್ಧೆ ಯಲ್ಲಿ ಕಂಚು ಗೆಲ್ಲುವ ಮೂಲಕ ಭಾರತ ಪದಕ ಪಟ್ಟಿಯಲ್ಲಿ ಕಾಣಿಸಿಕೊಂಡಿತ್ತು.

ಸಿಂಧು, ಲಕ್ಷ್ಯ ಸೇನ್‌ಗೆ ಮುನ್ನಡೆ

ಅಮೆರಿಕ ಓಪನ್ ಬ್ಯಾಡ್ಮಿಂಟನ್: ಪ್ರಣೀತ್ ನಿರ್ಗಮನ

ಕೌನ್ಸಿಲ್ ಬ್ಲಫ್ಸ್ (ಅಮೆರಿಕ), (ಪಿಟಿಐ): ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು, ಅಮೆರಿಕ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾರತೀಯ ಮೂಲದ ಅಮೆರಿಕನ್ ಆಟಗಾರ್ತಿ ದಿಶಾ ಗುಪ್ತಾ ಮೇಲೆ ನಿರಾಯಾಸವಾಗಿ ಜಯ ಗಳಿಸಿದರು. ಲಕ್ಷ್ಯ ಸೇನ್ ಪುರುಷರ ವಿಭಾಗದ ಮೊದಲ ಪಂದ್ಯವನ್ನು ಅಧಿ-ಕಾರಯುತವಾಗಿ ಗೆದ್ದು ಎರಡನೇ ಸುತ್ತಿಗೆ ಮುನ್ನಡೆದರು.

ಅರ್ಹತಾ ಸುತ್ತಿನ್ನು ದಾಟಿ ಬಂದ ಭಾರತದ ಎಸ್.ಶಂಕರ್ ಸುಬ್ರಮಣಿಯನ್ ಮೊದಲ ಸುತ್ತಿನಲ್ಲಿ ಐರ್ಲೆಂಡ್‌ನ ನ್ಹಾಟ್ ಯಂಗುಯೆನ್ ಅವರನ್ನು 44 ನಿಮಿಷಗಳ ಸೆಣಸಾಟದಲ್ಲಿ 21-11, 21-16 ರಿಂದ ಸೋಲಿಸಿದರು.

ಸಿಂಧು 21-15, 21-12 ರಿಂದ ದೀಕ್ಷಾ ಅವರನ್ನು ಸೋಲಿಸಲು ತೆಗೆದುಕೊಂಡಿದ್ದು 27 ನಿಮಿಷಗಳ-ನ್ನಷ್ಟೇ. ಪುರುಷರ ವಿಭಾಗದಲ್ಲಿ ಲಕ್ಷ್ಯ ಅರ್ಧ ಗಂಟೆಯೊಳಗೆ ಫಿನ್ಲೆಂಡ್‌ನ ಕಲ್ಲ ಕಲ್ಜೋನೆನ್ ಅವರನ್ನು 21-8, 21-16ರಿಂದ ಹಿಮ್ಮೆಟ್ಟಿಸಿದರು.

ಆದರೆ, ಸಾಯಿ ಪ್ರಣೀತ್ ಅವರು ತೀವ್ರ ಹೋರಾಟ ಕಂಡ ಮೊದಲ ಸುತ್ತಿನ ಇನ್ನೊಂದು ಪಂದ್ಯದಲ್ಲಿ ವಿಶ್ವದ ಏಳನೇ ಕ್ರಮಾಂಕದ ಆಟಗಾರ, ಚೀನಾದ ಲೀ ಶಿ ಫೆಂಗ್ ಎದುರು ಸೋಲನುಭವಿಸಿದ-ರು. ಎರಡನೇ ಶ್ರೇಯಾಂಕದ ಶಿ ಫೆಂಗ್ 16-21, 21-14, 21-19 ರಿಂದ ಗೆಲ್ಲಲು ಒಂದು ಗಂಟೆ 14 ನಿಮಿಷ ತೆಗೆದುಕೊಂಡರು.

ಪಿ.ವಿ. ಸಿಂಧು

ಮಂಗಳವಾರ, ಕಾಮನ್ವೆಲ್ತ್ ಗೇಮ್ಸ್ ಮಾಜಿ ಚಾಂಪಿಯನ್ ಪರುಪಳ್ಳಿ ಕಶ್ಯಪ್ ಎರಡನೇ ಸುತ್ತಿನಲ್ಲಿ ಜಪಾನ್‌ನ ಕೊ ತಕಾಹಶಿ ಎದುರಿನ ಪಂದ್ಯದಲ್ಲಿ 21-23, 7-11 ರಲ್ಲಿ ಹಿಂದೆಯಿದ್ದಾಗ ಪಂದ್ಯ ಬಿಟ್ಟುಕೊಟ್ಟರು. ಕಶ್ಯಪ್ ಮೊದಲ ಸುತ್ತಿನಲ್ಲಿ 21-19, 21-17 ರಿಂದ ಇಂಗ್ಲೆಂಡ್‌ನ ರೋಹನ್ ಮಿಥಾ ಮೇಲೆ ಜಯಗಳಿಸಿದ್ದರು.

ಪುರುಷರ ಡಬಲ್ಸ್‌ನಲ್ಲಿ ಕೃಷ್ಣ ಪ್ರಸಾದ್ ಗರಗ ಮತ್ತು ವಿಷ್ಣುವರ್ಧನ್ ಗೌಡ ಪಂಜಾಲ ಮೊದಲ ಸುತ್ತಿನಲ್ಲೇ ಹೊರಬಿದ್ದರು. ಭಾರತದ ಆಟಗಾರರು 14-21, 14-21ರಲ್ಲಿ ಚೀನಾ ತೈಪೆಯ ಲಿನ್ ಯು ಚಿಯಾ ಮತ್ತು ಸು ಲಿ ವೀ ಜೋಡಿ ಎದುರು ಸೋಲನುಭವಿಸಿದರು.

ಮಲಬದ್ಧತೆಯ ಪರಿಹಾರಕ್ಕಾಗಿ
9119788888

ಬೆಂಗಳೂರು ಟರ್ಫ್ ಕ್ಲಬ್ ಅಧ್ಯಕ್ಷ ಶಿವಕುಮಾರ್ ಖೇಣಿ (ಎಡ) ಬೆಟ್‌ವೇ ಪ್ರತಿನಿಧಿಗಳಾದ ರಾಘವ್ ನಾಗಪಾಲ್ ಮತ್ತು ರೋಹನ್ ಗುಪ್ತಾ ಅವರು 'ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ' ಟ್ರೋಫಿ ಅನಾವರಣ ಮಾಡಿದರು –ಪ್ರಜಾವಾಣಿ ಚಿತ್ರ

16ರಂದು 'ಬೆಂಗಳೂರು ಬೇಸಿಗೆ ಡರ್ಬಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ 'ಬೆಟ್‌ವೇ ಬೆಂಗಳೂರು ಬೇಸಿಗೆ ಡರ್ಬಿ' ಭಾನುವಾರ (ಜುಲೈ 16) ನಡೆಯಲಿದ್ದು, 12 ಕುದುರೆಗಳು ಪೈಪೋಟಿ ನಡೆಸಲಿವೆ.

'ಈ ಬಾರಿಯ ಬೇಸಿಗೆ ಡರ್ಬಿ ಒಟ್ಟು ₹2 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿರಲಿದೆ. ವಿಜೇತ ಕುದುರೆಯು ತನ್ನ ಮಾಲೀಕನಿಗೆ ₹ 98 ಲಕ್ಷ ದೊರಕಿಸಿ-ಕೊಡಲಿದೆ' ಎಂದು ಬೆಂಗಳೂರು ಟರ್ಫ್ ಕ್ಲಬ್ (ಬಿಟಿಸಿ) ಅಧ್ಯಕ್ಷ ಶಿವಕುಮಾರ್ ಖೇಣಿ ಅವರು ಡರ್ಬಿ ಕುದುರೆಗಳ 'ಡ್ರಾ' ಸಂಖ್ಯೆ ನಿಗದಿಪಡಿಸಲು ಗುರುವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಟ್‌ವೇ ಪ್ರಾಯೋಜಕತ್ವ: ಆನ್‌ಲೈನ್ ಗೇಮಿಂಗ್ ಕಂಪೆನಿ 'ಬೆಟ್‌ವೇ', 2023-24ರ ಸಾಲಿನ ಬೆಂಗಳೂರು ಬೇಸಿಗೆ ಮತ್ತು ಚಳಿಗಾಲದ ರೇಸ್‌ಗಳ ಪ್ರಾಯೋಜಕತ್ವ ವಹಿಸಿಕೊಂಡಿದೆ. ಭಾನುವಾರ ನಡೆಯ ಲಿರುವ ಬೇಸಿಗೆ ಡರ್ಬಿಯ 'ಟೈಟಲ್ ಪ್ರಾಯೋಜಕತ್ವ'ವನ್ನೂ ಬೆಟ್‌ವೇ ತನ್ನದಾಗಿಸಿಕೊಂಡಿದೆ.

'ಬೆಟ್‌ವೇ ಕಳೆದ ವರ್ಷದ ಡರ್ಬಿ ರೇಸ್‌ನಲ್ಲೂ ಪ್ರಾಯೋಜಕತ್ವ ವಹಿಸಿಕೊಂಡಿತ್ತು. ಬಿಟಿಸಿ ಜತೆ ಈ ಬಾರಿಯೂ ಒಪ್ಪಂದ ಮಾಡಿರುವುದು ಸಂತಸ ಉಂಟು ಮಾಡಿದೆ' ಎಂದು ಖೇಣಿ ಹೇಳಿದರು.

'ಬೆಟ್‌ವೇ ಕಂಪನಿಯು ಆನ್‌ಲೈನ್ ಗೇಮಿಂಗ್‌ಗೆ ವಿಶ್ವದಾದ್ಯಂತ ಹೆಸರು ಪಡೆದುಕೊಂಡಿದೆ. ಕುದುರೆ ರೇಸ್ ಅಲ್ಲದೆ, ಕ್ರಿಕೆಟ್ ಮತ್ತು ಫುಟ್‌ಬಾಲ್ ಸೇರಿದಂತೆ ಇತರ ಕ್ರೀಡೆಗಳಲ್ಲೂ ಪ್ರಾಯೋಜಕತ್ವ ವಹಿಸಿಕೊಂಡಿದೆ. ಸತತ ಎರಡನೇ ಬಾರಿ ಬಿಟಿಸಿ ಸಹಭಾಗಿತ್ವದೊಂದಿಗೆ ಡರ್ಬಿ ರೇಸ್ ಆಯೋಜಿಸುತ್ತಿದ್ದೇವೆ' ಎಂದು ಬೆಟ್‌ವೇ ಕಂಪನಿಯ ಪ್ರತಿನಿಧಿಗಳಾದ ರಾಘವ್ ನಾಗಪಾಲ್ ಮತ್ತು ರೋಹನ್ ಗುಪ್ತಾ ತಿಳಿಸಿದರು.

ಡರ್ಬಿಯಲ್ಲಿ ಪಾಲ್ಗೊಳ್ಳುವ ಕುದುರೆ ಗಳು ಹಾಗೂ ಡ್ರಾ ಸಂಖ್ಯೆ: 1.ಚಾಂಪಿಯನ್ಸ್ ವೇ (12), 2.ಕ್ರಿಸ್ಟೋಫೆಲ್ (4), 3.ಡೆಸ್ಟ್ರಾಯರ್ (9), 4.ಎಲ್ವೆನರ್ (11), 5.ಇಂಪೀರಿಯಲ್ ಜೆಶ್ಚರ್ (2), 6.ರೂಲಿಂಗ್ ಡೈನಾಸ್ಟಿ (8), 7.ಸಿಂಥೆಸಿಸ್ (3), 8.ದಿ ಗಾಡ್‌ಫಾದರ್ (7), 9.ಆಸ್ಪೀಶಿಯಸ್ ಕ್ವೀನ್ (6), 10.ಜಮಾರಿ (5). 11.ಎನ್‌ಆರ್‌ಐ ಡಬಲ್‌ಪವರ್ (10), 12.ವೈಕಿಕಿ (1)

ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್: 16ರ ಘಟ್ಟಕ್ಕೆ ತಾರಾ ಶಾ, ರಕ್ಷಿತಾ ಶ್ರೀ

ಯೋಗ್ಯಕರ್ತ, ಇಂಡೊನೇಷ್ಯಾ (ಪಿಟಿಐ): ಭಾರತದ ಯುವ ಆಟಗಾರ್ತಿಯರಾದ ತಾರಾ ಶಾ ಮತ್ತು ರಕ್ಷಿತಾ ಶ್ರೀ ಅವರು ಇಲ್ಲಿ ನಡೆಯುತ್ತಿರುವ ಏಷ್ಯಾ ಜೂನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಬಾಲಕಿಯರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ತಾರಾ 21-6, 21-17 ರಿಂದ ಜಪಾನ್‌ನ ಮಿಕು ಕೊಹಾರ ವಿರುದ್ಧ ಗೆದ್ದರು. ಮುಂದಿನ ಸುತ್ತಿನಲ್ಲಿ ಅವರು ಚೀನಾದ ಕ್ಸು ವೆನ್ ಜಿಂಗ್ ಅವರ ಸವಾಲನ್ನು ಎದುರಿಸುವರು.

ರಕ್ಷಿತಾ 21-8, 21-10 ರಿಂದ ಮಲೇಷ್ಯಾದ ಕರಿನ್ ಟೀ ಅವರನ್ನು ಮಣಿಸಿದರು. ಈ ಪಂದ್ಯ 24 ನಿಮಿಷ ನಡೆಯಿತು. ಮುಂದಿನ ಪಂದ್ಯದಲ್ಲಿ ಅವರು ಚೀನಾದ ಹುವಾಂಗ್ ಲಿನ್ ರಾನ್ ವಿರುದ್ಧ ಹಣಾಹಣಿ ನಡೆಸುವರು.

ಬಾಲಕಿಯರ ಡಬಲ್ಸ್‌ನಲ್ಲಿ ತನೀಷಾ-ಕಾರ್ಣಿಕಾ ಜೋಡಿ 21-14, 21-18 ರಿಂದ ಜಪಾನ್‌ನ ಬುಯಿ- ತ್ರಾನ್ ಅವರನ್ನು ಮಣಿಸಿತು.

ತಾರಾ ಶಾ

ಬಾಲಕರ ಸಿಂಗಲ್ಸ್‌ನಲ್ಲಿ ಆಯುಷ್ ಶೆಟ್ಟಿ 19-21, 22-20, 16-21 ರಿಂದ ಜಪಾನ್‌ನ ಯೂನ ನಕಗವ ಎದುರು ಪರಾಭವಗೊಂಡರು.

ಬಾಂಗ್ಲಾ ವಿರುದ್ಧ ಭಾರತಕ್ಕೆ ಸೋಲು

ಮೀರ್‌ಪುರ್ (ಪಿಟಿಐ): ಬಾಂಗ್ಲಾದೇಶದ ಸ್ಪಿನ್ ಬೌಲಿಂಗ್ ದಾಳಿಗೆ ನಲುಗಿದ ಭಾರತ ತಂಡ, ಇಲ್ಲಿ ನಡೆದ ಮೂರನೇ ಮಹಿಳಾ ಟಿ20 ಪಂದ್ಯದಲ್ಲಿ 4 ವಿಕೆಟ್‌ಗಳಿಂದ ಮಣಿಯಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದು ಕೊಂಡ ಪ್ರವಾಸಿ ತಂಡ 20 ಓವರ್‌ಗಳಿಗೆ 9 ವಿಕೆಟ್‌ಗೆ ಕೇವಲ 102 ರನ್ ಗಳಿಸಲಷ್ಟೇ ಶಕ್ತವಾಯಿತು. ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ (40 ರನ್, 41 ಎಸೆತ) ಮತ್ತು ಜೆಮಿಮಾ ರಾಡ್ರಿಗಸ್ (28 ರನ್, 26 ಎಸೆತ) ಅವರನ್ನು ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ರನ್ ಪೇರಿಸಲು ವಿಫಲವಾದರು. ಕೊನೆಯ 11 ರನ್‌ಗೆ 6 ವಿಕೆಟ್‌ಗಳು ಪತನಗೊಂಡು ಅಲ್ಪಮೊತ್ತಕ್ಕೆ ತಂಡ ಕುಸಿಯಿತು.

ಸಾಧಾರಣ ಗುರಿಯನ್ನು ಬೆನ್ನತ್ತಿದ ಬಾಂಗ್ಲಾ ತಂಡ 18.2 ಓವರ್‌ಗಳಲ್ಲಿ ಗೆಲುವಿನ ಗುರಿ ತಲುಪಿತು. ಆರಂಭಿಕ ಆಟಗಾರ್ತಿ ಶಮೀಮಾ ಸುಲ್ತಾನ (42 ರನ್, 46 ಎಸೆತ) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಟಿ20 ಮೂರು ಪಂದ್ಯಗಳ ಸರಣಿಯನ್ನು 2-1ರಿಂದ ಭಾರತ ಗೆದ್ದುಕೊಂಡಿದ್ದು, ಉಭಯ ತಂಡಗಳ ನಡುವಿನ ಮೂರು ಪಂದ್ಯಗಳ ಏಕದಿನ ಸರಣಿ ಜುಲೈ 16ರಂದು ಆರಂಭವಾಗಲಿದೆ.

ಸಂಕ್ಷಿಪ್ತ ಸ್ಕೋರ್: ಭಾರತ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 102 (ಶಫಾಲಿ ವರ್ಮಾ 11, ಜೆಮಿಮಾ ರಾಡ್ರಿಗಸ್ 28, ಹರ್ಮನ್‌ಪ್ರೀತ್ ಕೌರ್ 40, ಯಾಸ್ತಿಕಾ ಭಾಟಿಯಾ 12; ರಬೇಯಾ ಖಾನ್ 16ಕ್ಕೆ 3, ಸುಲ್ತಾನಾ ಖಾತುನ್ 17ಕ್ಕೆ 2). ಬಾಂಗ್ಲಾದೇಶ 18.2 ಓವರ್‌ಗಳಲ್ಲಿ 6 ವಿಕೆಟ್‌ಗೆ 103 (ಶಮೀಮಾ ಸುಲ್ತಾನ 42, ನಿಗರ್ ಸುಲ್ತಾನಾ 14; ಮಿನ್ನು ಮಣಿ 28ಕ್ಕೆ 2, ದೇವಿಕಾ ವೈದ್ಯ 16ಕ್ಕೆ 2) ಫಲಿತಾಂಶ: ಬಾಂಗ್ಲಾದೇಶಕ್ಕೆ 4 ವಿಕೆಟ್ ಜಯ